
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಅಡಿಗರ ಕೋಮುವಾದಿ ಕವನ

ಅಕ್ಟೋಬರ್ 19, 2011 ಪುಟ 20 ರೂ. 14/-





ಮಂತ್ರಿ ಅಶೋಕ್ ಪಿತೂರಿ?

...ಕ್ಕಡದೇಟು

ಜೈಲಿಗೆ ಬಂದ ಗೂಂಡಾ ಚಮನ್

ರೆಡ್ಡಿಗೆ ಪ್ರಾಣಭಯ

ಲೋಕಾಯುಕ್ತ DYSP

ಪಾಟೀಲನೇ ಭ್ರಷ್ಟ

ಭೀಮಾತೀರದ ಹಂತಕರ

ಗನ್ ಡೀಲ್



ಕೌನ್ಸಿಲರ್ ನಟರಾಜ್ ಹತ್ಯೆ

ಬಿಜೆಪಿ ನೆರಳು?

ಟಿವಿ ನಟಿ ಶ್ರೀಗೌರಿ

ನಿಗೂಢ ಸಾವು








ಹೊಸ ಬಡತನ ವ್ಯಾಖ್ಯಾನ

32 ರೂಪಾಯಿ ಎಂದರೆ ಎಷ್ಟು? ಬದುಕುವಷ್ಟೋ? ಸಾಯುವಷ್ಟೋ?

ಶಿವಸುಂದರ್ ಚಾರ್ವಾಕ



ಈ ದೇಶದಲ್ಲಿ 32 ರೂ.ಗಳಿಗೆ ಏನೇನು ಸಿಗುತ್ತದೆ? ಪಿಜ್ಜಾ ಬರ್ಗರ್, ಕೋಲಾ, ಐನಾಕ್ಸ್ ಸಿನಿಮಾ, ಇವುಗಳನ್ನು ಬಿಡಿ. ನೂರರ ನೋಟಿಲ್ಲದೆ ಇದರ ಹತ್ತಿರ ಸುಳಿಯಲೂ ಆಗುವುದಿಲ್ಲ. ಈ ದೇಶದ ಬಡವರು ದಿನಕ್ಕೆ 32 ರೂ. ದುಡಿದರೆ ಏನೇನು ಕೊಳ್ಳಬಹುದು? ಕಿಜಿ ಅಕ್ಕಿ 40 ರೂ., ಬೇಳೆ 75 ರೂ., ಎಣ್ಣೆ 80 ರೂ., ತರಕಾರಿ ಸರಾಸರಿ 50 ರೂ. ಕಿಜಿ, ಹಾಲು 24 ರೂ. ಲೀಟರ್, ಬಡಜನರು ವಾಸಿಸುವಂತಹ ಇಟ್ಟಿಗೆಗೂಡಿನಂತ ಮನೆಯ ತಿಂಗಳ ಬಾಡಿಗೆ ಕನಿಷ್ಠ 1,000-1,500 ರೂ., ಕೆಲಸದ ಜಾಗಕ್ಕೆ ಪ್ರತಿ ದಿನದ ಪ್ರಯಾಣಕ್ಕೆ ತಿಂಗಳಿಗೆ 800-1000 ರೂ., ಶಿಕ್ಷಣದ ಮೇಲೆ ತಿಂಗಳ ವೆಚ್ಚ ಏನಿಲ್ಲವೆಂದರೂ 500-1000 ರೂ., ವೈದ್ಯಕೀಯ ವೆಚ್ಚವನ್ನು ತಿಂಗಳಿಗೆ 500 ರೂ. ಸರಾಸರಿ ಎಂದು ತೆಗೆದಿಟ್ಟರೂ ಇದು ಒಬ್ಬ ಮನುಷ್ಯ ಈ ದೇಶದಲ್ಲಿ ಘನತೆಯಿಂದ ಅಲ್ಲ, ಸುಮ್ಮನೇ ಹೇಗೋ ಬದುಕ ಬೇಕೆಂದರೂ ಮಾಡಲೇ ಬೇಕಿರುವ ವೆಚ್ಚ ಇದರ ದೈನಂದಿನ ಸರಾಸರಿ ವೆಚ್ಚ ಎಷ್ಟಾಗಬಹುದು? ಒಂದು ತಿಂಗಳಿಗೆ ಐದು ಜನರ ಕುಟುಂಬವೊಂದು ಪಟ್ಟಣ ಪ್ರದೇಶದಲ್ಲಿ ಅತ್ಯಂತ ಬಡತನದಿಂದ 'ಬದುಕ' ಬೇಕೆಂದರೆ ಏನಿಲ್ಲವೆಂದರೂ ಇಂದಿನ ಪೇಟೆ ಧಾರಣೆಯಲ್ಲಿ ತಿಂಗಳಿಗೆ 6,000 ರೂ. ಬೇಕು. ಅಂದರೆ ಒಂದು ಕುಟುಂಬದಲ್ಲಿ ಏಕೈಕ ದುಡಿಯುವ ವ್ಯಕ್ತಿ ಇದ್ದರೆ ಆತ/ಆಕೆಯ ಆದಾಯ ದಿನಕ್ಕೆ ಏನಿಲ್ಲವೆಂದರೂ 200 ರೂ. ಇರಲೇ ಬೇಕು. ಆದರಲ್ಲಿ ದಿನ ಗೂಲಿಗಳಾಗಿದ್ದರೆ ವಾರಕ್ಕೆ ಐದು ದಿನಗಳ ಕೆಲಸ ಮಾತ್ರ ಮಾಡುತ್ತಿದ್ದರೆ ಅವರ ಆದಾಯ ದಿನಕ್ಕೆ ಏನಿಲ್ಲವೆಂದರೂ 250-300 ರೂ. ಇದ್ದರೆ ಅವರು ಸ್ವಲ್ಪ ಮಟ್ಟಿಗೆ ಬಡತನದಲ್ಲೇ ಆದರೂ ಮನುಷ್ಯರಂತೆ ಬದುಕಬಹುದು.

ಬಡವರ ಬದುಕಿನ ಬಗ್ಗೆ ಸರ್ಕಾರ ಏನು ಮಾಡಬೇಕು? ಏನಿಲ್ಲವೆಂದರೂ ಸರ್ಕಾರ ಅವರ ಆದಾಯವನ್ನು ಹೆಚ್ಚಿಸುವ ಮತ್ತು ಕನಿಷ್ಠ ಜೀವನಾವಶ್ಯಕ ಸಾಮಗ್ರಿಗಳ ಮೇಲೆ ಅವರು ಮಾಡುವ ವೆಚ್ಚದ ಪ್ರಮಾಣವನ್ನು ಕಡಿಮೆ ಮಾಡುವಂಥಾ ಕ್ರಮಗಳನ್ನು ಕೈಗೊಳ್ಳಬೇಕು. ಬಡವರನ್ನು ಬಡತನ ರೇಖೆಯಿಂದ ಮೇಲೆತ್ತಲು ಯೋಜನೆಗಳನ್ನು ಹಾಕಿಕೊಳ್ಳಬೇಕು. ಇದಕ್ಕೆ ಎರಡು ಮಾರ್ಗಗಳಿವೆ. ಮೊದಲನೆಯದು, ನಿಜವಾಗಿಯೂ ಈ ಬಡತನ ರೇಖೆಯೆಂಬ ಸಾವು-ಬದುಕನ್ನು, ಮಾನ-ಅಪಮಾನವನ್ನು, ಘನತೆ-ಅವಮಾನವನ್ನು ಬೇರ್ಪಡಿಸುವ ರೇಖೆಯ ಕೆಳಗಿರುವ ಜನರನ್ನು ಅವರ ಆದಾಯ ಮೂಲ ಮತ್ತು ಖರ್ಚಿನ ಪ್ರಮಾಣವನ್ನು ಕಡಿಮೆಗೊಳಿಸುವ ಮೂಲಕ ರೇಖೆಯ ಮೇಲಕ್ಕೆ ಎತ್ತುವುದು. ಎರಡನೆಯದು, ಬಡತನ ರೇಖೆಯನ್ನೇ ಇನ್ನೂ ಕೆಳಕ್ಕೆ - ಅಂದರೆ ಬದುಕಿನ ಮಟ್ಟವನ್ನು ಸಾವಿನ ಸಮೀಪಕ್ಕೂ, ಘನತೆಯ ವ್ಯಾಖ್ಯಾನವನ್ನು ಅಪಮಾನಸ ಸಮೀಪಕ್ಕೂ - ಜಗ್ಗಿಸಿ ಉಳಿದವರು ಬಡತನ ರೇಖೆಯ ಮೇಲಿದ್ದಾರೆಂದು ಕೊಚ್ಚಿಕೊಳ್ಳುವುದು. ಎರಡನೆಯ ಮಾರ್ಗ ಪ್ರಜಾತಂತ್ರದ್ದಲ್ಲ, ಕೊಲೆಗಡುಕರದ್ದು. ಭಾರತ ಸರ್ಕಾರ ಎರಡನೆಯದನ್ನು ಮಾಡುತ್ತಿದೆ.

ಭಾರತ ಸರ್ಕಾರದ ಯೋಜನಾ ಆಯೋಗ ಇತ್ತೀಚೆಗೆ ಸುಪ್ರೀಂ ಕೋರ್ಟಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಇನ್ನು ಮುಂದೆ ಈ ದೇಶದಲ್ಲಿ ನಗರ ಪ್ರದೇಶದಲ್ಲಿ ದಿನಕ್ಕೆ ಒಬ್ಬ ವ್ಯಕ್ತಿ 32 ರೂ.ಗಿಂತ ಹೆಚ್ಚಿಗೆ ಸಂಪಾದನೆ ಮಾಡುತ್ತಿದ್ದರೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 25 ರೂ.ಗಿಂತ ಹೆಚ್ಚಿಗೆ ಸಂಪಾದನೆ ಮಾಡುತ್ತಿದ್ದರೆ ಅವರನ್ನು ಬಡವರು ಎಂದು ಪರಿಗಣಿಸುವುದಿಲ್ಲವಂತೆ. ಅದೇ ರೀತಿ ಐದು ಜನರ ಕುಟುಂಬವೊಂದು ನಗರ ಪ್ರದೇಶದಲ್ಲಿ ತಿಂಗಳಿಗೆ 4024 ರೂ.ವನ್ನು ವೆಚ್ಚ ಮಾಡುವ ಶಕ್ತಿ ಹೊಂದಿದ್ದರೆ ಮತ್ತು ಗ್ರಾಮೀಣ ಪ್ರದೇಶದಲ್ಲಿ 3905 ರೂ.ಗಳಷ್ಟು ವ್ಯಯ ಮಾಡುತ್ತಿದ್ದರೆ ಅವರನ್ನು ಬಡತನ ರೇಖೆಯಿಂದ ಮೇಲೆ ಇರುವ ಕುಟುಂಬಗಳೆಂದೂ ಪರಿಗಣಿಸಲಾಗುತ್ತದಂತೆ!! ಈಗಾಗಲೇ ನೋಡಿದಂತೆ ತಿಂಗಳಿಗೆ 6000 ರೂ. ಆದಾಯವಿಲ್ಲದ ಕುಟುಂಬ ಅಥವಾ ದಿನಕ್ಕೆ ರೂ. 200-250ರಷ್ಟಾದರೂ ಸಂಪಾದನೆ ಮಾಡಿ ಅಷ್ಟನ್ನೂ ತಿಂಗಳ ಲೆಕ್ಕದಲ್ಲಿ ವೆಚ್ಚ ಮಾಡದೇ ಇದ್ದರೆ ಬಡತನದಲ್ಲೇ ಆದರೂ ಘನತೆಯಿಂದ ಬದುಕಲು ಸಾಧ್ಯವಿಲ್ಲ. ಆದರೆ ಭಾರತ ಸರ್ಕಾರ ಯೋಜಿಸುತ್ತಿರುವ ಈ ಹೊಸ ಮಾನದಂಡ ಬಡವರನ್ನು ಘನತೆಯಿಂದ ಬದುಕಲು ಬೇಕಾದ ಸಂಪನ್ಮೂಲ ಮತ್ತು ಸಹಾಯಗಳನ್ನು ಸಿಗದೆ ಅವರನ್ನು ಇನ್ನೂ ನರಕಕ್ಕೆ ದೂಡುತ್ತಿದೆ.

ಹಾಗೆ ನೋಡಿದರೆ ವಿಶ್ವದ ಬಡವರ ವಿರುದ್ಧ ಸಮರ ಸಾರಿರುವ ವಿಶ್ವ ಬ್ಯಾಂಕು ಅತಿ ಬಡವರಿಗೆ ಮಾತ್ರ ಸರ್ಕಾರದ ರಿಯಾಯತಿ ಮತ್ತು ವಿನಾಯತಿಗಳು ಸಿಗಬೇಕೇ ವಿನಃ ಎಲ್ಲಾ ಬಡವರಿಗಲ್ಲ ಎಂಬ ನೀತಿಯನ್ನು 1991ರಿಂದಲೆ 83 ದೇಶಗಳಲ್ಲಿ ಏಕಕಾಲದಲ್ಲಿ ಜಾರಿಗೆ ಬರುವಂತೆ ನೋಡಿಕೊಂಡಿತು. ಅಂಥಾ ವಿಶ್ವ ಬ್ಯಾಂಕು ಸಹ ವರ್ಷಗಳೆದಂತೆ ಬಡವರು ಯಾರು ಎಂಬ ತನ್ನ ವ್ಯಾಖ್ಯಾನವನ್ನು ಪುನರ್ ವಿಮರ್ಶಿಸಿಕೊಳ್ಳುತ್ತಲೇ ಬಂದಿದೆ. ಮೊದಲು 1991-2000ದವರೆಗೆ ಯಾರ ಆದಾಯ ದಿನಕ್ಕೆ ಒಂದು ಡಾಲರ್ ಇಲ್ಲವೋ ಅವರನ್ನು ಬಡತನ ರೇಖೆಯಿಂದ ಕೆಳಗೆ ಎಂದು ತೀರ್ಮಾನಿಸಿತು. ಇದಕ್ಕೆ ಆಧಾರ ಒಬ್ಬ ಮನುಷ್ಯ ಜೀವವನ್ನು ಉಳಿಸಿಕೊಳ್ಳಲು ದಿನಕ್ಕೆ 2100 ಕ್ಯಾಲೋರಿಯಷ್ಟು ಆಹಾರ ಧಾನ್ಯಗಳನ್ನು - ಅಂದರೆ ದಿನಕ್ಕೆ ಏನಿಲ್ಲವೆಂದರೂ 650 ಗ್ರಾಂ ಧಾನ್ಯಗಳನ್ನು - ಕೊಳ್ಳುವಷ್ಟು ಆದಾಯ ಹೊಂದಿರಬೇಕು. ಆದರೆ ಇದು ಕೇವಲ ಆಹಾರದ ವಿಷಯವಾಯಿತು. ಉಳಿದಂತೆ ಮನೆ ಬಾಡಿಗೆ, ಶಿಕ್ಷಣ, ಆರೋಗ್ಯ, ಉರುವಲು ಇನ್ನಿತ್ಯಾದಿಗಳನ್ನು ಇದು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಅವೆಲ್ಲವನ್ನೂ ಗವನಕ್ಕೆ ತೆಗೆದುಕೊಂಡರೆ 91ರಲ್ಲೇ ದಿನಕ್ಕೆ ಕನಿಷ್ಠ ಎರಡು ಡಾಲರ್ ಆದಾಯ ಕೂಡಾ ಇರದವರು ಮಾತ್ರ ಬಡತನ ರೇಖೆಯಿಂದ ಕೆಳಗೆ ಇರುವವರು ಎಂದಾಗುತ್ತಿತ್ತು. ವಿಶ್ವ ಬ್ಯಾಂಕ್ 2000ದಲ್ಲಿ ತನ್ನ ಆದಾಯ ಮಿತಿಯನ್ನು ದಿನಕ್ಕೆ 1.08 ಡಾಲರ್‌ಗೆ ಏರಿಸಿತು. ಇತ್ತೀಚೆಗೆ ಅದನ್ನು ಪುನರ್ ಪರಿಶೀಲಿಸಿ 2005ರ ದರದಲ್ಲಿ ದಿನಕ್ಕೆ 1.25 ಡಾಲರ್‌ಗಿಂತ ಕಡಿಮೆ ಗಳಿಸುತ್ತಿರುವವರು ಬಡತನ ರೇಖೆಗಿಂತ ಕೆಳಗಿರುವವರು ಎಂದು ಘೋಷಿಸಿದೆ. ಅಂದರೆ ದಿನಕ್ಕೆ 66 ರೂ.ಗಳಿಗಿಂತ ಕಡಿಮೆ ಗಳಿಸುತ್ತಿರುವವರನ್ನು ಅದು ಬಡತನ ರೇಖೆಗಿಂತ ಕೆಳಗಿರುವವರು ಎಂದು ಗುರುತಿಸುತ್ತದೆ. ಬಡವರು ಗಳಿಸಿದ್ದನ್ನೆಲ್ಲಾ ಆಹಾರ ಹಾಗೂ ಇನ್ನಿತ್ಯಾದಿ ದಿನಬಳಕೆಯ ವಸ್ತುಗಳ ಮೇಲೆ ವೆಚ್ಚ ಮಾಡುವುದರಿಂದ ಅವರ ಗಳಿಕೆಯನ್ನೆಲ್ಲಾ ವೆಚ್ಚವೆಂದೇ ಪರಿಗಣಿಸಬಹುದು. ಹೀಗಾಗಿ ವಿಶ್ವ ಬ್ಯಾಂಕಂತ ವಿಶ್ವಬ್ಯಾಂಕೇ ಬಡತನ ರೇಖೆಯ ಮಾನದಂಡವನ್ನು ಹೆಚ್ಚಿಸುತ್ತಿರುವಾಗ ಭಾರತ ಮಾತ್ರ ಅದರ ಅರ್ಧದಷ್ಟಕ್ಕೆ ಕುಗ್ಗಿಸುತ್ತಿರುವುದೇಕೆ? ಇನ್ನೂ ಭಾರತ ಮತ್ತು ಏಷಿಯಾದ ಬಡತನ ಪ್ರಮಾಣದ ಬಗ್ಗೆ ಅಧ್ಯಯನ ಮಾಡುತ್ತಿರುವ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕು ಬಡತನ ರೇಖೆಯ ಕೆಳಗಿರುವ ಮಾನದಂಡ 1.35 ಡಾಲರ್ ಎಂದು ತೀರ್ಮಾನಿಸಿದೆ. ಅಂದರೆ ದಿನಕ್ಕೆ 70 ರೂ. ಆದಾಯಕ್ಕಿಂತ ಕಡಿಮೆ ಇರುವವರು.

ವಾಸ್ತವವಾಗಿ ಭಾರತ ಸರ್ಕಾರಕ್ಕೆ ಈ ದೇಶದಲ್ಲಿ ಬಡತನ ಕಡಿಮೆಯಾಗುತ್ತಿದೆ ಎಂದು ತೋರಿಸಿಕೊಳ್ಳುವ ದರ್ದಿದೆ. ಈ ದೇಶಕ್ಕೆ ವಿದೇಶಿ ಬಂಡವಾಳ ಹೆಚ್ಚು ಹರಿದು ಬರಬೇಕೆಂದರೆ ಆ ಬಂಡವಾಳಕ್ಕೆ ಪೂರಕವಾದ ಮೂಲಭೂತ ಸೌಕರ್ಯ - ಅಂದರೆ ಕಡಿಮೆ ದರದಲ್ಲಿ ಬಂಡವಾಳ, ವಿಮಾನ ನಿಲ್ದಾಣ, ಹೈವೇ, ಸಂಪರ್ಕ ಸಾಧನಗಳು ಇತ್ಯಾದಿಗಳನ್ನು ಸರ್ಕಾರ ಕಲ್ಪಿಸಿಕೊಡಬೇ ಅದಕ್ಕೆ ಬೇಕಾ ಹಣ? ಅದನ್ನು ಸಾಮಾಜಿಕ ಸೇವೆಗಳಿಗೆ ಅಂದರೆ ಬಡ ಉಚಿತ ಅಥವಾ ರಿಯಾಯತಿ ದರದಲ್ಲಿ ಕೊಡುತ್ತಿದ್ದ ವಿದ್ಯುತ್, ಗೊಬ್ಬರ, ಶಿಕ್ಷಣ, ವೈದ್ಯಕೀಯ ಸವಲತ್ತು, ಪಡಿತರ ಚೀಟಿ ಎಲ್ಲವನ್ನೂ ಕಡಿತಗೊಳಿಸಿ ಅದನ್ನು ವಿದೇಶಿ ಬಂಡವಾಳಿಗರಿಗೆ ಬೇಕಾದ ಸೌಕರ್ಯದ ಮೇಲೆ ವಿನಿಯೋಗಿಸಬೇಕೆಂಬುದು ಅಂತರರಾಷ್ಟ್ರೀಯ ಬಂಡವಾಳದ ಆದೇಶ ಮತ್ತು ಭಾರತ ಸರ್ಕಾರದ ನೀತಿ. ಅದಕ್ಕೆಂದೇ ಬಡವರ ಮೇಲೆ ವಿನಿಯೋಗಿಸುತ್ತಿರುವ ಬಂಡವಾಳದ ಪ್ರಮಾಣ ಕ ಮಾಡಬೇಕೆಂದೇ ಬಡವರ ಸಂಖ್ಯೆಯನ್ನೇ ಕಡಿಮೆ ಮಾಡುವ ಹುನ್ನಾರವನ್ನು ಭಾರತ ಸರ್ಕಾರ ಹಾಕಿಕೊಂಡಿದೆ.

ಆದ್ದರಿಂದಲೇ ಭಾರತ ಸರ್ಕಾರದ ಪ್ರಕಾರ ಈ ದೇ 1991ರಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ 42ರಷ್ಟಿದ್ದದ್ದು 2011ರಲ್ಲಿ ಶೇ.35ಕ್ಕಿಳಿದಿದೆ. ಅದರ ಭಾರತದಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವವರ 30.2 ಕೋಟಿ ಮಾತ್ರ. ಅದಕ್ಕೆ ಮಾನದಂಡ ದಿನಕ್ಕೆ ಡಾಲರ್ ಅರ್ಥಾತ್ ದಿನಕ್ಕೆ 48 ರೂ.ಗಿಂತ ಹೆಚ್ಚಿನ ಆ ಇರುವ ಯಾರೂ ಬಡವರಲ್ಲ ಎಂಬುದು. ಆದರೆ ಬ್ಯಾಂಕೇ ಮಾಡಿರುವ ಅಧ್ಯಯನದ ಪ್ರಕಾರ 20 ಭಾರತದಲ್ಲಿ 45.58 ಕೋಟಿ ಜನ ಅಂದರೆ ಶೇ.41. ಜನ ಬಡತನ ರೇಖೆಗಿಂತ ಕೆಳಗಿದ್ದರು. ಎಡಿಬಿ ಮಾ ಅಧ್ಯಯನದ ಪ್ರಕಾರ 65 ಕೋಟಿ ಅಂದರೆ ಶೇ. 54. ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ನೇಪಾಳವನ್ನು ಮಿಕ್ಕೆಲ್ಲಾ ಏಷಿಯಾದ ದೇಶಗಳು ವಾಸ್ತವವಾಗಿ ಭಾರ ಉತ್ತಮ ಸ್ಥಿತಿಯಲ್ಲಿವೆ.

ಭಾರತ ಸರ್ಕಾರದ ಈ ಮಾನದಂಡ ಎಷ್ಟು ಹಾ ವಾಗಿದೆ ಎಂದರೆ ನಿಧಾನಕ್ಕೆ ಈ ದೇಶದಲ್ಲಿ ಯಾರೂ ಬ ಇಲ್ಲವೆಂದು ಘೋಷಿಸಿಬಿಡಬಹುದು. ಏಕೆಂದರೆ ಮ ಗಾಂಧಿ ರೋಜ್‌ಗಾರ್ ಯೋಜನೆಯಲ್ಲಿ ಪ್ರತಿ ಗ್ರಾಮೀಣ ಬಡವನಿಗೂ ದಿನಕ್ಕೆ 118 ರೂ ಕೂಲಿಯನ್ನು ಕನಿಷ್ಠ ವರ್ಷಕ್ಕೆ ನೂರು ದಿನಗಳ ಕಾಲ ಕೆ ಬೇಕು. ಅದು ಎಂಥಾ ಭ್ರಷ್ಟಾಚಾರಿ ಯೋಜನೆ ಎಂ ಮತ್ತೊಂದು ವಿಷಯ. ಆದರೆ ಸರ್ಕಾರಿ ತರ್ಕದ ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 25 ರೂ.ಗಿಂತ ಕಡಿವ ಮಾಡುವವರು ಬಡತನ ರೇಖೆಗಿಂತ ಕೆಳಗಿರುವವರು. ನೂರು ದಿನಗಳು ದಿನಕ್ಕೆ 118 ರೂ.ಗಳ ಲ ನೋಡಿದಾಗ ಪ್ರತಿಯೊಬ್ಬ ಗ್ರಾಮೀಣ ಬಡವನಿಗೂ ವೆಂದರೂ ದಿನಕ್ಕೆ 30 ರೂ.ಕೂಲಿ ದೊರೆತಂತಾಗುತ್ತದೆ 25 ರೂ.ಗಿಂತ 5 ರೂ. ಜಾಸ್ತಿಯೇ ಆಗುತ್ತದೆ... ಕಾ ಮೇಲೆ.

ಹೀಗಾಗಿ ಮೊಂಟೆಕ್ ಸಿಂಗ್ ಅಹುಲ್ವಾಲಿಯಾ ಮನಮೋಹನ ಸಿಂಗರ ಕೃಪೆಯಿಂದ ಭಾರತ ಇ ಬಡತನ ಮುಕ್ತ ದೇಶ ವಾಗುವುದರಲ್ಲಿ ಆಶ್ಚರ್ಯವಿಲ್ಲ, ಭಾರತ್ ಮಹಾನ್!


ನೋ ಕಾಮೆಂಟ್ಸ್

"ಜಾರ್ಖಾಂಡ್‌ನ ಲತೇಹರ್ ಜಿಲ್ಲೆಯ ಡಬ್ಲು ಸಿಂಗ್ ಕೂಲಿ ಕೆಲಸ ಮಾಡುತ್ತಿರುವಾಗ ಮೇಲ್ಛಾವಣಿಯಿಂದ ಬಿದ್ದು ಕಾಲು ಮುರಿದುಕೊಂಡ. ಆತನ ಮತ್ತು ಕುಟುಂಬದ ಜೀವನೋಪಾಯಕ್ಕೆಂದು ಕೂಡಲೇ ಸರ್ಕಾರ ಒಂದು ಬಿಪಿಎಲ್ ಕಾರ್ಡಾದರೂ ಕೊಡಬೇಕೆಂದು ರಾಂಚಿಯಿಂದ ದೆಹಲಿಯವರೆಗೆ ಹೋರಾಟ ನಡೆಯಿತು. ಅಧಿಕಾರಸ್ಥರೆಲ್ಲರೂ ಒಪ್ಪಿಕೊಂಡರೂ ಎರಡು ವರ್ಷಗಳಾದರೂ ಆತನಿಗೆ ಕಾರ್ಡ್ ಸಿಗಲಿಲ್ಲ. ಏಕೆಂದರೆ ಆ ಜಿಲ್ಲೆಗೆ ಕೊಟ್ಟಿದ್ದ ಬಿಪಿಎಲ್ ಕೋಟಾ ಭರ್ತಿಯಾಗಿತ್ತು. ಆತನಿಗೆ ಬಿಪಿಎಲ್ ಕಾರ್ಡ್ ಸಿಗಬೇಕೆಂದರೆ ಈಗಾಗಲೇ ಅದನ್ನು ಪಡೆಯುತ್ತಿರುವ ಫಲಾನುಭವಿಯೊಬ್ಬನ ಹೆಸರು ರದ್ದಾಗಬೇಕಿತ್ತು!"

-ಜೀನ್ ದ್ರೇಜ್, ಸಮಾಜಶಾಸ್ತ್ರಜ್ಞ

"ದೇಶದ ಸಂಪತ್ತಿನಲ್ಲಿ ಅಸಮಾನ ಹಂಚಿಕೆಯೇ ಭ್ರಷ್ಟಾಚಾರಕ್ಕೆ ಮೂಲ ಕಾರಣ. ರಾಷ್ಟ್ರದ ಚುನಾವಣಾ ವ್ಯವಸ್ಥೆಯಲ್ಲಿ ಹಲವಾರು ಸಮಸ್ಯೆಗಳು ಕಾಡುತ್ತಿವೆ. ಭ್ರಷ್ಟಾಚಾರ ಕೇವಲ ಸರ್ಕಾರಿ ಸಂಸ್ಥೆಗಳಿಗೆ ಸೀಮಿತವಾಗಿಲ್ಲ, ಖಾಸಗಿ ವಲಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಯಾಕೆ ಯಾರೂ ಪ್ರಶ್ನಿಸುತ್ತಿಲ್ಲ?"


-ಬರಗೂರು ರಾಮಚಂದ್ರಪ್ಪ



"ಸರಕಾರಿ ಮತ್ತು ಖಾಸಗಿ ಎಂಬ ಎರಡು ಮಾದರಿಯಲ್ಲಿ ಶಿಕ್ಷಣ ನೀಡುತ್ತಿರುವುದರಿಂದ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಏಕತೆ ಮೂಡಿಸಲಾಗಿಲ್ಲ. ಶಿಕ್ಷಣದಲ್ಲಿಯ ಮೇಲುಗಾರಿಕೆ ಮತ್ತು ಕೀಳರಿಮೆಗಳನ್ನು ನಿವಾರಿಸಲು ಒಂದರಿಂದ 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸ ಬೇಕು ಮತ್ತು ಅದನ್ನು ಸರ್ಕಾರವೇ ನಡೆಸಬೇಕು."

- ಚಂದ್ರಶೇಖರ ಕಂಬಾರ

"ಕಟ್ಟಡ ಕಾರ್ಮಿಕರ ಸೆಸ್ 932 ಕೋಟಿ ರೂಪಾಯಿಯೂ ಸೇರಿದಂತೆ ಈ ವರ್ಷ ಬಿಡುಗಡೆ ಮಾಡಿರುವ 233 ಕೋಟಿ ರೂಪಾಯಿ ಸೇರಿ ಒಟ್ಟು 1065 ಕೋಟಿ ರೂ.ಗಳ ಪೈಕಿ ರಾಜ್ಯ ಸರ್ಕಾರವು ಈವರೆಗೆ ಕೇವಲ 2.95 ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಿದೆ."



- ಮಲ್ಲಿಕಾರ್ಜುನ ಖರ್ಗೆ

"ಇಂಧನ ಸಚಿವರ ನಿರ್ಲಕ್ಷ್ಯವೇ ಅನಧಿಕೃತ ಲೋಡ್ ಶೆಡ್ಡಿಂಗ್‌ಗೆ ಕಾರಣ. ಇತರ ಇಲಾಖೆಗಳಲ್ಲಿ ಮೂಗುತೂರಿಸುವ ಬದಲಿಗೆ ಇಂಧನ ಖಾತೆಗೆ ಹೆಚ್ಚು ಗಮನಹರಿಸಿದರೆ ಸಮಸ್ಯೆ ಪರಿಹರಿಸಬಹುದು."

- ಎಚ್.ಡಿ.ಕುಮಾರಸ್ವಾಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಬಡ ಕೂಲಿಕಾರ್ಮಿಕರಿಗೆ ಕಡಿಮೆ ದರದಲ್ಲಿ ಮದ್ಯ ಪೂರೈಸುವ ಡಿಸ್ಟಿಲರಿ ಮಾಲೀಕರೊಂದಿಗೆ ಸಮಾಲೋಚನೆ ನಡೆಸಲಾಗುವುದು."

- ರೇಣುಕಾಚಾ

ಭ್ರಷ್ಟಾಚಾರ ವಿಕೇಂದ್ರೀಕರಣವಾಗುವುದಿಲ್ಲವೆ

"ಆಡಳಿತ ಮತ್ತು ಹಣಕಾಸು ವ್ಯವಸ್ಥೆ ಗ್ರಾಮೀಣ ಮಟ್ಟ ವಿಕೇಂದ್ರೀಕರಣಗೊಂಡಾಗ ಮಾತ್ರ ಭ್ರಷ್ಟಾಚಾರ ನಿಯಂತ್ರಣ ಸಾಧ್ಯ."

ಹೆಚ್.ಎಸ್. ದೊರೆಸ್ವಾ

ಭಾಷೆಗೊಂದು ಜಾತಿ! ಇದ್ಯಾವ ಸೀಮೆ ನೀತಿ

"ದೇಶಭಾಷೆಗಳು ಉಳಿಯಬೇಕು ಅಂದರೆ ಈ ದೇಶದಲ್ಲಿ ಜಾತಿ ವ ಇರಬೇಕಾಗುತ್ತದೆ. ಜಾತಿ ತಾರತಮ್ಯ ಹೋಗಬೇಕೆಂದರೆ ಸಂಸ್ಕೃತ ವ ಇಂಗ್ಲೀಷು ಬಳಸಬೇಕಾಗುತ್ತದೆ."

- ಯು.ಆರ್. ಅನಂತಮೂ

ತನ್ನಂತೆ ಪರರ ಬಗೆದೊಡೆ!?

"ನನ್ನನ್ನೂ ಒಳಗೊಂಡಂತೆ ಈ ದೇಶದಲ್ಲಿ ಯಾರಿಗೂ ಗಾಂಧಿಯ ಮಾತನಾಡುವ ನೈತಿಕತೆ ಇಲ್ಲ."

- ಯಡಿಯೂ

ರಾಕ್ಷಸ ಮೋದಿ ಮತ್ತು ಸತ್ಯದ ಗೋರಿ

ದಿಟ್ಟ ಪೋಲೀಸ್ ಮತ್ತು ಪತ್ರಕರ್ತನ ಕತೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಜಗತ್ತಿನಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವವಾದ ನಮ್ಮ ಭಾರತದಲ್ಲಿ ಪ್ರಾಮಾಣಿಕತೆಗೆ ಮತ್ತು ಭಿನ್ನಾಭಿಪ್ರಾಯಕ್ಕೆ ಕಿಂಚಿತ್ತೂ ಜಾಗವಿಲ್ಲ ಎಂಬುದನ್ನು ಕಳೆದ ವಾರ ನಡೆದ ಎರಡು ಪ್ರತ್ಯೇಕ ಪ್ರಕರಣಗಳು ಮತ್ತೊಮ್ಮೆ ಸಾಬೀತುಪಡಿಸಿವೆ. ಒಂದೆಡೆ, 2002ರಲ್ಲಿ ನಡೆದ ಮಾರಣಹೋಮದಲ್ಲಿ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯ ಪಾತ್ರವನ್ನು ಬಹಿರಂಗಪಡಿಸಲು ಯತ್ನಿಸಿದ ಐಪಿಎಸ್ ಅಧಿಕಾರಿ ಸಂಜೀವ್ ಭಟ್ಟರನ್ನು ಆ ರಾಜ್ಯದ ಸರ್ಕಾರ ಬಂಧಿಸಿದರೆ, ಇನ್ನೊಂದೆಡೆ ಭಾರತ ಸರ್ಕಾರ ಕಾಶ್ಮೀರದಲ್ಲಿ ನಡೆಸುತ್ತಿರುವ ಕಗ್ಗೊಲೆಗಳನ್ನು ಬಹಿರಂಗಪಡಿಸಲು ಯತ್ನಿಸಿದ ಅಮೆರಿಕದ ಖ್ಯಾತ ಪತ್ರಕರ್ತ ಡೇವಿಡ್ ಬಾರ್ಸಾಮಿಯಾನ್ ಎಂಬುವವರ ಮೇಲೆ ಇದ್ದಕ್ಕಿದ್ದಂತೆ ನಿಷೇದಾಜ್ಞೆಯನ್ನು ಹೇರಿದ ಭಾರತ ಸರ್ಕಾರ ಅವರನ್ನು ದೆಹಲಿ ವಿಮಾನ ನಿಲ್ದಾಣದಿಂದಲೇ ಅಮೆರಿಕಕ್ಕೆ ವಾಪಸ್ ಸಾಗಿಸಿದೆ.

ಈ ಎರಡೂ ಪ್ರಕರಣಗಳ ವಿರುದ್ಧ ಈಗ ದೇಶದಾದ್ಯಂತ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ನಿನ್ನೆ ಭಾರತದ ಹಲವಾರು ನಗರಗಳಲ್ಲಿ ಸಂಜೀವ್ ಭಟ್ಟರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಪ್ರತಿಭಟನೆಗಳು ನಡೆದಿವೆ. ಅದರ ಜೊತೆಜೊತೆಗೆ ಅಮೆರಿಕದ ಬಾರ್ಸಾಮಿಯಾನ್ ಅವರ ಮೇಲೆ ಭಾರತ ಸರ್ಕಾರ ಹೇರಿರುವ ನಿಷೇದಾಜ್ಞೆಯನ್ನು ಹಿಂದೆ ಪಡೆಯಬೇಕೆಂದು ಭಾರತದ ಪ್ರಮುಖ ಬುದ್ಧಿಜೀವಿಗಳು, ಹೋರಾಟಗಾರರು ಮತ್ತು ಬರಹಗಾರರು ಸಹಿ ಆಂದೋಲನವನ್ನು ನಡೆಸಿದರು.

ಸಂಜೀವ್ ಭಟ್ ಎಂಬ ಐಎಎಸ್ ಅಧಿಕಾರಿಯನ್ನು ಮೋದಿಯ ಸರ್ಕಾರ ಈಗ ಬಂಧಿಸಿರುವುದು ಯಾತಕ್ಕೆ ಎಂದು ನೋಡಿದರೆ ಈ ದೇಶದ ಪ್ರಧಾನಿಯಾಗುವ ಆಕಾಂಕ್ಷೆಯನ್ನು ಹೊಂದಿರುವ ಮೋದಿ ಎಂತಹ ನರಹಂತಕ ಎಂದು ಅರ್ಥವಾಗುತ್ತದೆ.


2002ರ ಫೆಬ್ರವರಿ 27ರಂದು ಗೋದ್ರಾದಲ್ಲಿ ಸಾಬರ್ಮತಿ ರೈಲು ದುರಂತ ಸಂಭವಿಸಿ ಅದರಲ್ಲಿ 59 ಹಿಂದೂ ಕರಸೇವಕರು ಸಾವಿಗೀಡಾಗಿದ್ದು, ಆನಂತರ ಗುಜರಾತಿನಲ್ಲಿ ಕೋಮುಗಲಭೆಗಳು ನಡೆದು ಸುಮಾರು ಮೂರು ಸಾವಿರ ಅಮಾಯಕ ಮುಸಲ್ಮಾನರು ಹತ್ಯೆಯಾಗಿದ್ದು ಈಗ ಎಲ್ಲರಿಗೂ ಗೊತ್ತು. ಹಾಗೆಯೇ ಮುಖ್ಯಮಂತ್ರಿ ಮೋದಿ ಈ ನರಮೇಧದಲ್ಲಿ ಮುಖ್ಯ ಪಾತ್ರ ವಹಿಸಿದ್ದ ಎಂಬುದೂ ಎಲ್ಲರಿಗೂ ಗೊತ್ತು.

ಆದರೆ ಅವತ್ತಿನಿಂದ ಇವತ್ತಿನವರೆಗೂ ಜನರ ಹತ್ಯೆಯಲ್ಲಿ ಮೋದಿಯ ಪಾತ್ರದ ಬಗ್ಗೆ ಸಾಕ್ಷಿ ನೀಡಲು ಮುಂದೆಬಂದಿರುವವರಿಗೆಲ್ಲ ಮೋದಿ ಒಂದು ಗತಿ ಕಾಣಿಸುತ್ತಲೇ ಬಂದಿದ್ದಾನೆ. ಉದಾಹರಣೆಗೆ, ನರಮೇಧ ನಡೆದಾಗ ಗುಜರಾತಿನಲ್ಲಿ ಗೃಹಮಂತ್ರಿ ಆಗಿದ್ದವರು ಹರೇನ್ ಪಾಂಡ್ಯ ಎಂಬುವವರು. ಮೋದಿಯಂತೆ ಪಾಂಡ್ಯ ಕೂಡ ಆರೆಸ್ಸೆಸ್ ಹಿನ್ನೆಲೆಯನ್ನು ಹೊಂದಿದ್ದರೂ ಅವರು ಕೋಮುವಾದಿ ಆಗಿರಲಿಲ್ಲ. ಆದ್ದರಿಂದಲೇ ಗೋಧ್ರಾ ರೈಲು ದುರಂತದಲ್ಲಿ ಅಸುನೀಗಿದವರ ಶವಗಳನ್ನು ರಾಜಧಾನಿಯಲ್ಲಿ ಪ್ರದರ್ಶಿಸುವ ಮೂಲಕ ಹಿಂದೂಗಳನ್ನು ಪ್ರಚೋದಿಸುವ ಮೋದಿಯ ಯೋಜನೆಯನ್ನು ಪಾಂಡ್ಯ ವಿರೋಧಿಸಿದ್ದರು. ಅಷ್ಟೇ ಅಲ್ಲ, ಆನಂತರ ನಡೆದ ಕೋಮುಗಲಭೆಗಳ ನೇತೃತ್ವವನ್ನು ಹೇಗೆ ಮೋದಿಯೇ ವಹಿಸಿದ್ದ ಎಂದೂ ನಿವೃತ್ತ ನ್ಯಾಯಮೂರ್ತಿ ವಿ.ಆರ್.ಕೃಷ್ಣಯ್ಯರ್ ಅವರ ನೇತೃತ್ವದ ಸಾರ್ವಜನಿಕರ ಸತ್ಯಶೋಧನಾ ಆಯೋಗದ ಮುಂದೆ ಪಾಂಡ್ಯ ವಿವರಿಸಿದ್ದರು.

ಪಾಂಡ್ಯ ಹೀಗೆ ಮೋದಿಯ ವಿರುದ್ಧ ಸತ್ಯವನ್ನು ನುಡಿಯುತ್ತಾ ಹೋದರೆ ತಾನು ಜೈಲು ಸೇರುವುದು ಗ್ಯಾರಂಟಿ ಎಂದು ಮೋದಿಗೆ ಗೊತ್ತಾಯಿತು. ಆಗ ಆತ ಪಾಂಡ್ಯ ಅವರಿಗೆ ಒಂದು ಗತಿ ಕಾಣಿಸಲು ನಿರ್ಧರಿಸಿದ. ಮೊದಲು, 2002ರಲ್ಲಿ ಗುಜರಾತಿನ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಪಾಂಡ್ಯ ಅವರಿಗೆ ಮೋದಿ ಟಿಕೆಟ್ ನಿರಾಕರಿಸುವ ಮೂಲಕ ಅವರನ್ನು ಅಧಿಕಾರದಿಂದ ದೂರ ಇಟ್ಟ. ಆಗಲೂ ಪಾಂಡ್ಯ ಮೋದಿಗೆ ಶರಣಾಗಲಿಲ್ಲ, ಬದಲಾಗಿ ಆತನ ಕರಾಳ ಮುಖವನ್ನು ಬಹಿರಂಗಪಡಿಸುತ್ತಲೇ ಸಾಗಿದರು. ಅದಕ್ಕೆ ಪಾಂಡ್ಯ ಅವರಿಗೆ ಮೋದಿಯಿಂದ ಸಿಕ್ಕಿದ ಪ್ರತಿಕ್ರಿಯೆ: ಕೊಲೆ.

ಅದು ನಡೆದದ್ದು 2003ರಲ್ಲಿ. "ಬೆಳಗ್ಗೆ ಪಾಂಡ್ಯ ಅವರು ವಾಕ್ ಮುಗಿಸಿದ ನಂತರ ತಮ್ಮ ಮಾರುತಿ 800 ಕಾರ್ ಹತ್ತುತ್ತಿದ್ದಾಗ ಅವರ ಕಾರಿನ ಗಾಜಿನ ಸಂದಿಯಿಂದ ಗುಂಡು ಹಾರಿಸುವ ಮೂಲಕ ಅಸ್ಗರ್‌ಅಲಿ ಎಂಬ ಸುಪಾರಿ ಶೂಟರ್ ಅವರನ್ನು ಕೊಂದುಹಾಕಿದ" ಎಂದು ಗುಜರಾತಿನ ಪೊಲೀಸರು ಹೇಳಿದ್ದನ್ನೇ ಮಾಧ್ಯಮಗಳು ವರದಿ ಮಾಡಿದವು. "ಪಾಂಡ್ಯ ಅವರ ಕೊಲೆಗೆ ಕಾರಣ ಗುಜರಾತಿನಲ್ಲಿ ನಡೆದ ಮುಸಲ್ಮಾನರ ಮಾರಣಹೋಮಕ್ಕೆ ಪ್ರತೀಕಾರ" ಎಂದು ಮೋದಿಯ ಸರ್ಕಾರ ಹೇಳಿತು. ವಾಸ್ತವವಾಗಿ ಯಾರಾದರೂ ಆ ನರಮೇಧಕ್ಕೆ ಪ್ರತೀಕಾರ ತೆಗೆದುಕೊಳ್ಳುತ್ತಿದ್ದರೆ ಅವರು ತಮ್ಮ ಗುರಿಯಾಗಿಸಿಕೊಳ್ಳುತ್ತಿದ್ದದ್ದು ಪಾಂಡ್ಯ ಅವರನ್ನಲ್ಲ, ಬದಲಾಗಿ ಮೋದಿಯನ್ನು.

ಪಾಂಡ್ಯ ಕೊಲೆ ಪ್ರಕರಣ ಕುರಿತು ಇತ್ತೀಚೆಗೆ (ಆಗಸ್ಟ್ 30) ಗುಜರಾತಿನ ಹೈಕೋರ್ಟ್ ನೀಡಿದ ತೀರ್ಪಿನಲ್ಲಿ ಅಸ್ಗರ್ ಅಲಿ ಸೇರಿದಂತೆ ಎಲ್ಲಾ 12 ಆರೋಪಿಗಳನ್ನು ದೋಶಮುಕ್ತರನ್ನಾಗಿಸಿತು. ಅಷ್ಟೇ ಅಲ್ಲ, ಪಾಂಡ್ಯ ಅವರ ಕೊಲೆ ಪ್ರಕರಣವನ್ನು ಸಿಬಿಐ ಸರಿಯಾಗಿ ತನಿಖೆ ಮಾಡಿಲ್ಲ ಎಂದೂ ನ್ಯಾಯಾಲಯ ಆರೋಪಿಸಿತು. ಸಿಬಿಐ ತನಿಖೆ ಎಷ್ಟು ದೋಷಪೂರಿತವಾಗಿತ್ತೆಂದರೆ ಮೊದಲನೆಯದಾಗಿ ಸಿಬಿಐ ಹೇಳಿದಂತೆ ಪಾಂಡ್ಯ ಅವರ ಮೇಲೆ ಕಾರಿನ ಗಾಜಿನ ಸಂದಿಯಿಂದ ಒಟ್ಟು ಏಳು ಗುಂಡುಗಳನ್ನು ಹಾರಿಸಿರುವುದು ಯಾರಿಗೆ ಆದರೂ ಅಸಾಧ್ಯವಾಗಿತ್ತು. ಎರಡನೆಯದಾಗಿ ಪಾಂಡ್ಯ ಅವರು ತಮ್ಮ ಕಾರಿನ ಸೀಟಿನಲ್ಲಿ ಕೂತಿದ್ದರೂ ಒಂದು ಗುಂಡು ಅವರ ವೃಷಣಕೋಶದಿಂದ ಪ್ರವೇಶಿಸಿ ಹೆಗಲಿನಿಂದ ಹೊರಬಂದಿತ್ತು. ಮೂರನೆಯದಾಗಿ ಪಾಂಡ್ಯ ಅವರ ದೇಹವನ್ನು ಏಳು ಗುಂಡುಗಳು ಹೊಕ್ಕಿದ್ದರೂ ಕಾರಿನಲ್ಲಿ ಎಲ್ಲೂ ರಕ್ತದ ಕಲೆಗಳು ಇರಲಿಲ್ಲ! ಈ ಎಲ್ಲ ಅಂಶಗಳ ಬಗ್ಗೆ ನ್ಯಾಯಾಲಯ ಮೊನ್ನೆ ಗಮನ ಹರಿಸಿದೆ.




ಸಂಜೀವ್ ಭಟ್

ಇದೆಲ್ಲದರ ಅರ್ಥ ಪಾಂಡ್ಯ ಅವರನ್ನು ಮೋದಿಯ ಸರ್ಕಾರ ಮತ್ತು ಪೊಲೀಸರು ಹೇಳಿದಂತೆ ಅವರು ಕಾರಿನಲ್ಲಿದ್ದಾಗ ಗುಂಡು ಹಾರಿಸುವ ಮೂಲಕ ಕೊಲ್ಲಲಾಗಿರಲಿಲ್ಲ. ಬದಲಾಗಿ ಅವರನ್ನು ಬೇರೆ ಇನ್ನೆಲ್ಲೋ ಕೊಂದು ಆನಂತರ ಅವರ ಕಾರಿನ ಸೀಟಿನಲ್ಲಿ ದೇಹವನ್ನು ಇಡಲಾಗಿತ್ತು. ಇದೆಲ್ಲದಕ್ಕಿಂತ ಮುಖ್ಯವಾಗಿ ಪಾಂಡ್ಯ ಅವರ ಕೊಲೆ ಒಂದು ಸುಪಾರಿ ಕೊಲೆ ಆಗಿರದೆ ಒಂದು ರಾಜಕೀಯ ಕೊಲೆಯಾಗಿತ್ತು. ಮತ್ತು ಅದರ ಹಿಂದೆ ಮೋದಿಯ ಕರಾಳ ಹಸ್ತ ಎದ್ದು ಕಾಣುತ್ತಿತ್ತು.

ಇದರ ಬಗ್ಗೆ ಪ್ರಥಮಬಾರಿಗೆ ನಿಖರವಾದ ಮಾಹಿತಿ ನೀಡಿದ್ದು ಮೊನ್ನೆ ಅರೆಸ್ಟ್ ಆದ ಪೊಲೀಸ್ ಅಧಿಕಾರಿ ಸಂಜೀವ್ ಭಟ್. 2003ರಲ್ಲಿ ಭಟ್ ಅವರು ಸಾಬರ್‌ಮತಿಯಲ್ಲಿರುವ ಕೇಂದ್ರ ಜೈಲಿನ ಅಧಿಕಾರಿ ಆಗಿದ್ದರು. ಆಗ ಆ ಜೈಲಿನಲ್ಲಿ ಪಾಂಡ್ಯ ಹತ್ಯೆ ಆರೋಪವನ್ನು ಹೊತ್ತಿದ್ದ ಅಸ್ಗರ್ ಅಲಿ ಕೂಡ ಇದ್ದ. ಆತ ಭಟ್ಟರಿಗೆ ತಾನು ಪಾಂಡ್ಯ ಅವರನ್ನು ಕೊಲ್ಲಲಿಲ್ಲವೆಂದೂ, ಬದಲಾಗಿ ಅವರನ್ನು ಕೊಂದವನು ತುಳಸಿರಾಮ್ ಪ್ರಜಾಪತಿ ಎಂದೂ, ಪ್ರಜಾಪತಿಗೆ ಆ ಸುಪಾರಿ ನೀಡಿದ್ದು ವಂಜಾರ ಎಂಬ ಹಿರಿಯ ಪೊಲೀಸ್ ಅಧಿಕಾರಿ ಎಂದೂ ಹೇಳಿದನಲ್ಲದೆ ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನೂ ಭಟ್ಟರಿಗೆ ನೀಡಿದ. ಅಂದಹಾಗೆ ಈ ವಂಜಾರ ಬೇರೆ ಯಾರೂ ಅಲ್ಲ, ಸೊಹ್ರಾಬುದ್ದೀನ್ ಶೇಖ್ ಮತ್ತು ಆತನ ಪತ್ನಿ ಕೌಸರ್ ಬಾನೋ ಎಂಬುವವರನ್ನು ನಕಲಿ ಎನ್ಕೌಂಟರ್‌ನಲ್ಲಿ ಕೊಂದು ಹಾಕಿದ ಆರೋಪವನ್ನು ಹೊತ್ತು ಈಗ ಜೈಲಿನಲ್ಲಿರುವ ಖಾಕಿ ಪಾತಕಿ. ಈತ ಈ ನಕಲಿ ಎನ್‌ಕೌಂಟರ್‌ನಲ್ಲಿ ಸತ್ತವರೂ ಮೋದಿಯನ್ನು ಹತ್ಯೆಗೈಯಲ್ಲು ಬಂದವರು ಎಂದು ಸುಳ್ಳು ಹೇಳಿದ್ದ.

ಭಟ್ ಅವರು ಅಸ್ಗರ್ ಅಲಿಯಿಂದ ಸಿಕ್ಕ ಮಾಹಿತಿಯನ್ನು ಕೂಡಲೇ ಆಗ ಗೃಹಮಂತ್ರಿ ಆಗಿದ್ದ ಅಮಿತ್ ಶಾ ಅವರಿಗೆ ನೀಡಿದರು. ಆದರೆ ಈ ಮಾಹಿತಿಯಿಂದ ಮೋದಿಯ ಮುಖವಾಡ ಕಳಚಿ ಬೀಳುತ್ತದೆಂದು ಅರಿತ ಅಮಿತ್ ಶಾ ಕೂಡಲೇ ಆ ಮಾಹಿತಿಯನ್ನು ನಾಶಪಡಿಸಬೇಕೆಂದು ಭಟ್ಟರಿಗೆ ಆದೇಶಿಸಿದ. ಆದರೆ ಭಟ್ಟರು ಹಾಗೆ ಮಾಡಲಿಲ್ಲ, ಅಷ್ಟೇ ಅಲ್ಲ,



ಡೇವಿಡ್ ಬಾರ್ಸಾಮಿಯಾನ್

ಗುಜರಾತಿನ ಕೋಮುಗಲಭೆ ಕುರಿತಂತೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಶೇಷ ತನಿಖಾ ತಂಡದ ಮುಂದೆ ತನಗೆ ಗೊತ್ತಿದ್ದ ಮಾಹಿತಿಗಳನ್ನು ಒಪ್ಪಿಸಿದರು. ಅದನ್ನೇ ಸುಪ್ರೀಂಕೋರ್ಟ್ ಮುಂದೆಯೂ ಪ್ರಮಾಣ ಮಾಡಿದರು.

ಇದೆಲ್ಲದಕ್ಕಿಂತ ಇನ್ನೂ ಅಪಾಯಕಾರಿ ಮಾಹಿತಿಯೊಂದನ್ನೂ ಭಟ್ ಬಹಿರಂಗಪಡಿಸಿದರು. ಅದೇನೆಂದರೆ ಗೋಧ್ರಾ ದುರಂತ ಸಂಭವಿಸಿದ ದಿನದಂದು ಮೋದಿ ನಡೆಸಿದ ಸಭೆಗೆ ತನ್ನನ್ನು ಕರೆಯಲಾಗಿತ್ತೆಂದೂ, ಆ ಸಭೆಯಲ್ಲಿ ಮೋದಿ ಎಲ್ಲ ಅಧಿಕಾರಿಗಳಿಗೆ "ಹಿಂದೂಗಳು ತಮ್ಮ ಆಕ್ರೋಶವನ್ನು ಹೊರಗೆ ಚೆಲ್ಲಲು ಅನುವು ಮಾಡಿಕೊಡಬೇಕೆಂದೂ, ಮುಸಲ್ಮಾನರಿಗೆ ತಕ್ಕ ಪಾಠ ಕಲಿಸಬೇಕೆಂದೂ ಆದೇಶಿಸಿದರು" ಎಂದು ಭಟ್ ಸುಪ್ರೀಂಕೋರ್ಟ್ ಮುಂದೆ ಹೇಳಿದರು. ಅದಕ್ಕೆ ಸಾಕ್ಷ್ಯವಾಗಿ ತಮ್ಮ ಕಾರಿನ ಚಾಲಕನಾಗಿದ್ದ ಕೆ.ಡಿ. ಪಂಥ್ ಎಂಬ ಪೇದೆ ತನ್ನನ್ನು ಆ ಸಭೆಗೆ ಕರೆದುಕೊಂಡು ಹೋಗಿದ್ದ ಎಂದರು.

ಆದರೆ ಆ ಬಡಪಾಯಿ ಪೇದೆಯ ಮೇಲೆ ಒತ್ತಡ ತಂದಿರುವ ಮೋದಿ ಈಗ ಆ ಪೇದೆಯಿಂದಲೇ "ಭಟ್ ನನ್ನನ್ನು ಅಪಹರಿಸಿ ಕೂಡಿಹಾಕಿದ್ದರು. ನನ್ನಿಂದ ಬಲವಂತವಾಗಿ ತನಗೆ ಬೇಕಾದ ಪತ್ರಗಳಿಗೆ ಸಹಿ ಮಾಡಿಸಿಕೊಂಡರು" ಎಂಬ ಆರೋಪವನ್ನು ಹೊರಿಸಿ, ಅದರ ಆಧಾರದ ಮೇಲೆ ಭಟ್ ಅವರನ್ನು ಮೋದಿಯ ಪೊಲೀಸರು ಬಂಧಿಸಿದ್ದಾರೆ.

ಇದೆಲ್ಲದರ ಅರ್ಥ ಇಷ್ಟೇ: ಮೋದಿ ಅಪ್ಪಟ ಕೋಮುವಾದಿ, ಆ ವಿಷಕಾರಿ ಕೋಮುವಾದವನ್ನು ಜನರಲ್ಲಿ ಬಿತ್ತುವ ಮೂಲಕ ಅಧಿಕಾರದ ಫಸಲನ್ನು ಪಡೆಯುವ ನೀಚ ಮತ್ತು, ತನ್ನ ಇಂತಹ ಕರಾಳ ಕೃತ್ಯಗಳನ್ನು ಬಹಿರಂಗಪಡಿಸಿದವರನ್ನು ಬಂಧಿಸಲು, ಕೊಂದು ಹಾಕಿಸಲು ಹಿಂಜರಿಯದ ಹಂತಕ.

ಇಂತಹ ಮೋದಿ ಈಗ ಭಾರತದ ಪ್ರಧಾನಿ ಆಗುವ ಕನಸು ಕಾಣುತ್ತಿದ್ದಾನೆ. ಹಾಗೊಮ್ಮೆ ಈತ ತನ್ನ ಕನಸನ್ನು ನನಸಾಗಿಸಿಕೊಂಡರೆ ಭಾರತದಲ್ಲಿ ಅಮಾಯಕ ಅಲ್ಪಸಂಖ್ಯಾತರ, ಹಿಂದುಳಿದವರ, ದಲಿತರ, ಮಹಿಳೆಯರ ರಕ್ತದ ಕೋಡಿ ಹರಿಯುವುದರ ಬಗ್ಗೆ ಯಾವ ಸಂಶಯವೂ ಇಲ್ಲ. ಆದ್ದರಿಂದ ಮೋದಿ ಪ್ರಧಾನಿ ಆಗದಂತೆ ತಡೆಯುವುದು ಭಾರತದ ಎಲ್ಲಾ ಪ್ರಜ್ಞಾವಂತರ ಕರ್ತವ್ಯವಾಗಿದೆ.

ಇದು ಬಿಜೆಪಿಯ ದುಷ್ಟ ಮೋದಿಯ ವೃತ್ತಾಂತವಾದರೆ, ಕೇಂದ್ರದಲ್ಲಿ ಅಧಿಕಾರ ಚಲಾಯಿಸುತ್ತಿರುವ ಕಾಂಗ್ರೆಸ್ ಪಕ್ಷದ ದುಷ್ಟತನ ಇನ್ನೊಂದು ಬಗೆಯದ್ದು. ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಗೃಹಸಚಿವ ಪಿ.ಚಿದಂಬರಂ ಅವರ ಕಾಂಗ್ರೆಸ್ ಸರ್ಕಾರ ಧೋರಣೆ ಎಂತಹುದ್ದೆಂದರೆ ಅವರು ಹೇಳಿದ್ದೇ ವೇದವಾಕ್ಯವಾಗಿದ್ದು ಅದಕ್ಕೆ ವಿರುದ್ಧವಾಗಿ ಯಾರೂ ಚಕಾರ ಎತ್ತಕೂಡದು. ಅದರಲ್ಲೂ ಕಾಶ್ಮೀರದಲ್ಲಿ ಭಾರತದ ಸರ್ಕಾರ ಮತ್ತು ಸೈನ್ಯ ಎಸಗುತ್ತಿರುವ ಅಪರಾಧಗಳನ್ನು ಪ್ರಶ್ನಿಸದೆ ದೆಹಲಿ ಹೇಳುತ್ತಿರುವ ಸುಳ್ಳುಗಳನ್ನೇ ಒಪ್ಪಿಕೊಂಡು ಎಲ್ಲರೂ ಸುಮ್ಮನಿರಬೇಕು ಎಂಬ ನಿಲುವು ಸಿಂಗ್-ಚಿದಂಬರಂ ಅವರದ್ದಾಗಿದೆ.

ಈ ಅಪ್ರಜಾತಾಂತ್ರಿಕ ಸಿದ್ಧಾಂತಕ್ಕೆ ಮೊನ್ನೆ ಗುರಿಯಾಗಿದ್ದು ಅಮೆರಿಕದ ಪತ್ರಕರ್ತ ಡೇವಿಡ್ ಬಾರ್ಸಾಮಿಯಾನ್ ಎಂಬುವವರು. ಸರ್ಕಾರದ ಮರ್ಜಿಯನ್ನೋ, ಜಾಹಿರಾತುದಾರರ ಎಂಜಲನ್ನೋ ಆಧರಿಸದೇ ಸ್ವತಂತ್ರ ಮತ್ತು ಪರ್ಯಾಯ ರೇಡಿಯೋ ಕಾರ್ಯಕ್ರಮಗಳನ್ನು ಡೇವಿಡ್ ಹಲವು ದಶಕಗಳಿಂದ ಮಾಡುತ್ತಾ ಬಂದಿದ್ದಾರೆ. ಮುಖ್ಯವಾಹಿನಿಯ ಮಾಧ್ಯಮಗಳು ನೀಡದ ವರದಿ ಮತ್ತು ಮಾಹಿತಿಗಳನ್ನು ಭಿತ್ತರಿಸುವ ಇವರ ರೇಡಿಯೋ ಕಾರ್ಯಕ್ರಮಗಳನ್ನು ಅಮೆರಿಕ ಮತ್ತು ಯೂರೋಪಿನ 125 ರೇಡಿಯೋ ಚಾನೆಲ್‌ಗಳು ಪ್ರಸಾರ ಮಾಡುತ್ತವೆ. ಅವುಗಳನ್ನು ಲಕ್ಷಾಂತರ ಜನ ಆಲಿಸುತ್ತಾರೆ. ಹಲವಾರು ಪುಸ್ತಕಗಳನ್ನೂ ಬರೆದಿರುವ ಡೇವಿಡ್ ಅವರು, ಅಮೆರಿಕ ಸರ್ಕಾರ ಇವತ್ತು ಹಲವಾರು ದೇಶಗಳ ಮೇಲೆ ನಡೆಸುತ್ತಿರುವ 'ಭಯೋತ್ಪಾದನೆ ವಿರುದ್ಧದ ಸಮರ'ವನ್ನೂ ಟೀಕಿಸಿದ್ದಾರೆ. "ಭಯೋತ್ಪಾದನೆ ಅಂದರೆ ಏನು? ಇವತ್ತು ಅಮೆರಿಕದ ಸೈನ್ಯ ಪಾಕಿಸ್ತಾನದ ಮೇಲೆ ನಡೆಸುತ್ತಿರುವ ಬಾಂಬ್ ದಾಳಿ ಭಯೋತ್ಪಾದನೆ ಅಲ್ಲವೇ? ಒಂದು ಸರ್ಕಾರ ಇಂತಹ ದಾಳಿ ನಡೆಸಿದಾಗ ಅದನ್ನು ರಕ್ಷಣೆ ಎಂದು ಕರೆದು ಯಾವುದೋ ಒಂದು ಗುಂಪು ನಡೆಸಿದ ದಾಳಿಯನ್ನು ಮಾತ್ರ ಭಯೋತ್ಪಾದನೆ ಎಂದು ಕರೆಯುವುದು ಎಷ್ಟು ಸರಿ?" ಎಂದು ಪ್ರಶ್ನಿಸುವವರು ಡೇವಿಡ್.

ಡೇವಿಡ್ ಅವರಿಗೆ ಭಾರತ ದೇಶದ ಬಗ್ಗೆ ಅಪಾರ ಪ್ರೀತಿ. ಎಷ್ಟರ ಮಟ್ಟಿಗೆ ಅಂದರೆ ಅವರು ಈ ದೇಶದ ಜನರನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಹಿಂದಿ ಮತ್ತು ಉರ್ದು ಭಾಷೆಗಳನ್ನು ಕಲಿತಿದ್ದಾರೆ, ಇಲ್ಲಿನ ಸಂಸ್ಕೃತಿಯನ್ನು ತನ್ನದಾಗಿಸಿಕೊಳ್ಳಲು ಸಿತಾರ್ ವಾದ್ಯವನ್ನು ಅಭ್ಯಾಸ ಮಾಡಿದ್ದಾರೆ.


1966ರಿಂದ ಭಾರತಕ್ಕೆ ಹಲವಾರು ಬಾರಿ ಭೇಟಿ ನೀಡಿರುವ ಡೇವಿಡ್ ಇಲ್ಲಿಯತನಕ ಜಾರ್ಖಂಡ್, ಛತ್ತೀಸಗಢ, ಪಶ್ಚಿಮಬಂಗಾಳ, ನರ್ಮದಾ ಬಚಾವೋ ಆಂದೋಲನ, ರೈತರ ಆತ್ಮಹತ್ಯೆ... ಇಂತಹ ವಿಷಯಗಳಿಗೆ ಸಂಬಂಧಪಟ್ಟಂತೆ ಜನರನ್ನು ಮಾತನಾಡಿಸಿ ರೇಡಿಯೋ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸಾರ ಮಾಡಿದ್ದಾರೆ. ಇತ್ತೀಚೆಗೆ ಅವರು ಕಾಶ್ಮೀರದಲ್ಲಿ ನಡೆಯುತ್ತಿರುವ ಜನಾಂದೋಲನ ಮತ್ತು ಅದನ್ನು ಹತ್ತಿಕ್ಕಲು ಭಾರತಸರ್ಕಾರ ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಗಮನ ಹರಿಸಿದ್ದರು. ಕಳೆದ ಸೆಪ್ಟೆಂಬರ್ 22ರಂದು ಭಾರತಕ್ಕೆ ಆಗಮಿಸಿದ ಡೇವಿಡ್ ಅವರು ಇಲ್ಲಿ ಮೂರು ವಾರಗಳ ಕಾಲ ತಂಗಲು ಉದ್ದೇಶಿಸಿದ್ದರು. ಈ ಅವಧಿಯಲ್ಲಿ ಕಾಶ್ಮೀರಕ್ಕೆ ಭೇಟಿ ನೀಡಿ ಅಲ್ಲಿ ಇವತ್ತು ಬಹಿರಂಗವಾಗುತ್ತಿರುವ ಸಾವಿರಾರು ಅಮಾಯಕರನ್ನು ಸಾಮೂಹಿಕ ಸಮಾಧಿಗಳಲ್ಲಿ ಹೂತಿರುವ ವಿಚಾರದ ಬಗ್ಗೆ ವರದಿ ಮಾಡಲು ಉದ್ದೇಶಿಸಿದ್ದರು. ಹಾಗೆಯೇ ಮಹಾತ್ಮಾಗಾಂಧಿಯವರ ಜನ್ಮ ದಿನದಂದು ಬಡವರ ವೈದ್ಯರಾಗಿರುವ, ಮಾನವಹಕ್ಕುಗಳ ಹೋರಾಟಗಾರರಾದ ಡಾ. ಬಿನಾಯಕ್ ಸೇನ್ ಅವರನ್ನು ಸಂದರ್ಶಿಸಲ್ಲಿದ್ದರು.

ಆದರೆ ಡೇವಿಡ್ ಅವರನ್ನು 'ನಿಷೇಧಿತ ವ್ಯಕ್ತಿಗಳು' ಎಂಬ ಪಟ್ಟಿಗೆ ಸೇರಿಸಿರುವ ಭಾರತ ಸರ್ಕಾರ ದೆಹಲಿ ವಿಮಾನ ನಿಲ್ದಾಣಕ್ಕೆ ಅವರು ಬಂದಿದ್ದ ವಿಮಾನದಲ್ಲೇ ಅವರನ್ನು ಮತ್ತೆ ಅಮೆರಿಕಕ್ಕೆ ವಾಪಸ್ ಸಾಗಿಸಿದೆ. ಅದಕ್ಕೆ ಸರ್ಕಾರ ಕೊಟ್ಟಿರುವ ಸಬೂಬು: "ಡೇವಿಡ್ ಅವರು ಭಾರತಕ್ಕೆ ಪ್ರವಾಸಿ ವೀಸಾದ ಮೇಲೆ ಬಂದಿದ್ದರೂ ಅವರು ಇಲ್ಲಿ ಬರೀ ಪ್ರವಾಸ ಮಾಡದೆ ಕೆಲಸದಲ್ಲಿ ತೊಡಗುವ ಮೂಲಕ ಅಕ್ರಮವೆಸಗಿದ್ದಾರೆ".

ಇದು ನಿಜಕ್ಕೂ ಹಾಸ್ಯಾಸ್ಪದವಾಗಿದೆ ಎಂದು ಡೇವಿಡ್ ಅವರ ಪರವಾಗಿ ದನಿ ಎತ್ತಿರುವವರ ವಾದವಾಗಿದೆ. ಅವರಲ್ಲಿ ಒಬ್ಬರಾದ ಖ್ಯಾತ ಲೇಖಕಿ ಅರುಂಧತಿ ರಾಯ್ ಅವರು "ಇವತ್ತು ಈ ದೇಶದ ಸಂಪತ್ತನ್ನು ಲೂಟಿ ಮಾಡಲು ದುಬಾರಿ ಸೂಟುಗಳನ್ನು ಧರಿಸಿ ಬರುತ್ತಿರುವ ಬಂಡವಾಳಶಾಹಿಗಳಿಗೆ ರತ್ನಗಂಬಳಿ ಹಾಸಿ ಸ್ವಾಗತಿಸಲಾಗುತ್ತಿದೆ. ಆದರೆ ಈ ದೇಶದ ಸತ್ಯಾಸತ್ಯತೆ ಬಗ್ಗೆ ಮಾತನಾಡುವವರ ವಿರುದ್ಧ ನಿಷೇದಾಜ್ಞೆ ಎಂಬ ಅಸ್ತ್ರವನ್ನು ಪ್ರಯೋಗಿಸಿ ಅವರನ್ನು ಹೊರಗಿಡಲಾಗುತ್ತಿದೆ" ಎಂದಿದಾರೆ. ಡೇವಿಡ್ ಅವರು ಕೂಡ "ಕಾಶ್ಮೀರ ಬಗ್ಗೆ ಭಾರತದ ಸರ್ಕಾರ ಹೇಳುವುದನ್ನೇ ಎಲ್ಲರು ಒಪ್ಪಿಕೊಳ್ಳಬೇಕಿದೆ. ಸರ್ಕಾರದ ಈ ಕಥನರೂಪವನ್ನು ಯಾರೂ ಪ್ರಶ್ನಿಸುವಂತಿಲ್ಲ. ಆ ಕಾರಣಕ್ಕೇ ನನ್ನನ್ನು ವಾಪಸ್ ಕಳುಹಿಸಲಾಯಿತು. ಆದರೆ ಭಾರತ ತಾನು ಜಗತ್ತಿನಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಹೆಮ್ಮೆಪಡುವ ಮುನ್ನ ಕಾಶ್ಮೀರದಲ್ಲಿ ಏನಾಗುತ್ತಿದೆ ಎಂದು ಒಮ್ಮೆ ನೋಡಿಕೊಳ್ಳುವುದು ಒಳಿತು" ಎಂದಿದ್ದಾರೆ. ಅಷ್ಟೇ ಅಲ್ಲ, "ಸಧ್ಯ, ನನ್ನ ಬೆರಳಿನ ಉಗುರುಗಳನ್ನು ಕೀಳಲಿಲ್ಲ, ಬೆನ್ನ ಮೇಲೆ ಬಾಸುಂಡೆಗಳು ಬರುವಂತೆ ಥಳಿಸಲಿಲ್ಲ, ಶಾಕ್ ಟ್ರೀಟ್‌ಮಂಟ್ ಕೊಡಲಿಲ್ಲ, ಇವತ್ತು ಭಾರತದಲ್ಲಿ ಹಲವಾರು ಜನರಿಗೆ ಆಗುತ್ತಿರುವುದು ನನಗಾಗಲಿಲ್ಲ" ಎಂದೂ ನಿಟ್ಟುಸಿರು ಬಿಡುತ್ತಿದ್ದಾರೆ.

ಒಂದೆಡೆ ಕೊಲೆಗಡುಕ ಮುಖ್ಯಮಂತ್ರಿಯ ಮುಖವಾಡವನ್ನು ಕಳಚಲು ಯತ್ನಿಸಿದ್ದಕ್ಕೆ ಹಿರಿಯ ಪೊಲೀಸ್ ಅಧಿಕಾರಿಗೆ ಜೈಲು ವಾಸ, ಇನ್ನೊಂದೆಡೆ ಭಾರತದ ಪ್ರಜಾತಂತ್ರ ವ್ಯವಸ್ಥೆಯಲ್ಲಿನ ದೋಷಗಳನ್ನು ತೋರಿಸಲೆತ್ನಿಸಿದ್ದಕ್ಕೆ ಗಡಿ ಪಾರು... ಇದು ನಮ್ಮ ಮಹಾನ್ ಭಾರತದ ಅಸಲಿ ಮತ್ತು ದುರಂತ ಮುಖ.....

ಅಕ್ರಮ ಶಸ್ತ್ರಾಸ್ತ್ರ ಮಾರಿ ಸಿಕ್ಕಿಬಿದ್ದೋನು ಭೀಮಾ ತೀರದ ಹಂತಕ!




ಸಂಭಾವ್ಯ ಅನಾಹುತವೊಂದಕ್ಕೆ ಸಿಸಿಬಿ ಪೊಲೀಸರು ಬ್ರೇಕ್ ಹಾಕಿದ್ದಾರೆ. ನಾಲ್ಕು ಮಂದಿ ನಟೋರಿಯಸ್ ವೆಪನ್ ಡೀಲರ್ಸ್ ಕಂ ಕೊಲೆಗಡುಕರನ್ನು ಬಲೆಗೆ ಕೆಡವಿಕೊಂಡಿದ್ದಾರೆ. ಈ ಪಾತಕಿಗಳಿಂದ ವಶಪಡಿಸಿಕೊಂಡಿರುವ ಪಿಸ್ತೂಲ್, ರಿವಾಲ್ವರ್, ಮದ್ದುಗುಂಡುಗಳು ನಾಗರಿಕರು ಬೆಚ್ಚಿಬಿದ್ದು ನಿಟ್ಟುಸಿರುಡುವಂತೆ ಮಾಡಿವೆ. ಅವೆಲ್ಲಾ ಎಂತೆಂಥಾ ಪಾತಕಿಗಳ ಕೈ ಸೇರುತ್ತಿದ್ದವ್ರೋ, ಅಲ್ಲಿಂದ ಇನ್ಯಾರ ಎದೆಗೆ ಬುಲೆಟ್ಟು ಚಿಮ್ಮುತ್ತಿತ್ತೋ? ಸದ್ಯ ಈ ಕಂಟಕಗಳೆಲ್ಲವೂ ತಾತ್ಕಾಲಿಕವಾಗಿ ತಪ್ಪಿದಂತಾಗಿದೆ.

ರೌಡಿಗಳ ಅಡ್ಡೆಗಳ ಮೇಲೆ ರೇಡು ನಡೆಸುವುದು, ಎನ್‌ಕೌಂಟರ್ ಮಾಡುವುದು-ಇವೆಲ್ಲ ರೌಡಿಸಂಗೆ ಶಾಶ್ವತ ಮದ್ದಲ್ಲ ಎಂಬುದು ಸತ್ಯ. ಇದಕ್ಕೆ ತೆರೆದುಕೊಂಡಿರುವ ನಗರ ಪೊಲೀಸ್ ಆಯುಕ್ತ ಜ್ಯೋತಿಪ್ರಕಾಶ್ ಮಿರ್ಜಿ ಪಾತಕಿಗಳ ಶಕ್ತಿ ಮೂಲಗಳನ್ನು ಶೋಧಿಸಿ ಥಂಡಾ ಹೊಡೆಸುವ ಹಾದಿಯನ್ನು ಆರಿಸಿಕೊಂಡಿದ್ದಾರೆ. ಸದ್ಯ ರೌಡಿಸಂ ಗರಿಗೆದರಲು ಪ್ರಮುಖ ಆಸರೆಯಾಗಿರುವುದು ಅಕ್ರಮ ಶಸ್ತ್ರಾಸ್ತ್ರ ಜಾಲ. ಇದನ್ನು ಬಗ್ಗು ಬಡಿಯುವ ಸಂಬಂಧ ಕಳೆದ ತಿಂಗಳ ಕೊನೆಯಲ್ಲಿ ಆಯುಕ್ತರ ಕಡೆಯಿಂದ ಸಿಸಿಬಿಗೆ ಸಂದೇಶ ರವಾನೆಯಾಗಿತ್ತು. ಸಿಸಿಬಿಯ ವಿಶೇಷ ವಿಚಾರಣಾ ದಳದ ಎಸಿಪಿ ಬಿ.ಎನ್. ನ್ಯಾಮೇಗೌಡ ಹಾಗೂ ಇನ್ಸ್‌ಪೆಕ್ಟರ್ ಕೆ.ಸಿ. ಅಶೋಕನ್‌ರ ಟೀಮು ವಾರದೊಪ್ಪತ್ತಲ್ಲೇ ಅಕ್ರಮ ಶಸ್ತ್ರಾಸ್ತ್ರ ಪೂರೈಕೆ ಜಾಲ ಬೇಧಿಸುವಲ್ಲಿ ಯಶಸ್ವಿಯಾಗಿದೆ.

ಬೆಂಗಳೂರಿನ ಪಾತಕಿಗಳಿಗೆ ಪಿಸ್ತೂಲ್, ರಿವಾಲ್ವರ್ ಮತ್ತು ಮದ್ದುಗುಂಡು ಮಾರಾಟ ಮಾಡಲು ಸಜ್ಜಾಗಿದ್ದ ನಾಲ್ಕು ಮಂದಿ ಸಿಸಿಬಿಗೆ ತಗುಲಿಕೊಂಡಿದ್ದಾರೆ. ಇದರಲ್ಲಿ ಭಾಷಾಸಾಬ್ ನದಾಫ್ ಎಂಬಾತ ಪ್ರಮುಖ. ಬಿಜಾಪುರ ಮೂಲದವನಾದ ಈತ ಕುಖ್ಯಾತ ವೆಪನ್ ಡೀಲರ್ ಮತ್ತು ಭಯಾನಕ ದರೋಡೆಕೋರ. ಇನ್ನುಳಿದ ದಿಲ್‌ಶಾದ್, ಮಹಮ್ಮದ್ ಆರೀಫ್ ಉತ್ತರ ಪ್ರದೇಶದವರಾದರೆ, ಧನ್‌ಕೌರ್ ಎಂಬ ಲೇಡಿ ಡೀಲರ್ ಮಧ್ಯಪ್ರದೇಶದವಳು. ಉತ್ತರಪ್ರದೇಶದ ನಟೋರಿಯಸ್ ಪಾತಕಿಗಳಾದ ಗುರುಜಿತ್ ಸಿಂಗ್ ಬರ್ನಾಲ, ಪಪ್ಪಿ, ಶಿವಲಿಂಗಪ್ಪ ಬಗಲಿ ಸದ್ಯ ತಲೆಮರೆಸಿಕೊಂಡಿದ್ದಾರೆ.

ಮೇಲ್ನೋಟಕ್ಕಿದು ಮಾಮೂಲಿ ಪ್ರಕರಣದಂತೆ ಕಂಡರೂ ಇದರ ಹಿಂದೆ ಅಕ್ರಮ ಶಸ್ತ್ರಾಸ್ತ್ರ ಪೂರೈಕೆ ಜಾಲದ ಸೂಕ್ಷ್ಮಗಳಿವೆ. ಈಗ ತಗುಲಿಕೊಂಡಿರುವ ಪಾತಕಿಗಳು ವಿವಿಧ ರಾಜ್ಯಗಳಲ್ಲಿ ನೆಟ್‌ವರ್ಕ್ ಹೊಂದಿರುವ ವಿಚಾರ ಆರಂಭಿಕ ತನಿಖೆಯ ಹೊತ್ತಿಗೇ ಸಾಬೀತಾಗಿದೆ. ಈ ಅಕ್ರಮದ ಮೂಲವಿರುವುದು ಉತ್ತರ ಪ್ರದೇಶದಲ್ಲೇ ಎಂಬ ಸುಳಿವು ನಿಚ್ಚಳವಾಗಿಯೇ ಸಿಕ್ಕಿದೆ. ಕರ್ನಾಟಕದ ಮಟ್ಟಿಗೆ ಈ ಅಕ್ರಮ ಪಿಸ್ತೂಲ್, ರಿವಾಲ್ವರ್‌ಗಳನ್ನು ತರಿಸಿಕೊಂಡಿದ್ದ ರೌಡಿಗಳ ಎದೆಯಲ್ಲೂ ತಗುಲಿಕೊಳ್ಳುವ ಆತಂಕ ಮನೆ ಮಾಡಿದ್ದರೆ, ರಿಯಲ್ ಎಸ್ಟೇಟ್ ದಂಧೆಕೋರರರು, ಪ್ರತಿಷ್ಠಿತರ ಸೋಗಿನ ಪಾತಕಿಗಳು ಮತ್ತು ಉದ್ಯಮಿಗಳ ವಲಯದಲ್ಲೂ ಭಯದ ಕರಿನೆರಳು ಅಗೋಚರವಾಗಿ ಸರಿದಾಡಲಾರಂಭಿಸಿದೆ. ಯಾಕೆಂದರೆ ಸಿಸಿಬಿ ಪೊಲೀಸರು ತಣ್ಣಗೆ ಹಗ್ಗ ಹೊಸೆಯಲಾರಂಭಿಸಿದ್ದಾರೆ. ಫಲಿತಾಂಶವೆಂಬುದು ಕೆಲವೇ ದಿನಗಳಲ್ಲಿ ಹೊರಬೀಳುವುದು ಖರೆ.



ಅಕ್ರಮ ಶಸ್ತ್ರಾಸ್ತ್ರ ಆಂದಾಕ್ಷಣ ಭೂಗತ ಪಾತಕಿಗಳೇ ಅದರ ಗ್ರಾಹಕರೆಂಬಂತೆ ಬಿಂಬಿಸಲಾಗುತ್ತದೆ. ಇದು ಅರ್ಧ ಸತ್ಯ. ರಿಯಲ್ ಎಸ್ಟೇಟ್ ದಂಧೆಕೋರರರು, ಉದ್ಯಮಿಗಳು ಹಾಗೂ ರಾಜಕಾರಣಿಗಳೂ ಸೇರಿದಂತೆ ಪ್ರತಿಷ್ಠಿತರೆಂದು ಬಿಂಬಿಸಿಕೊಂಡವರ ಮಕ್ಕಳು ಮರಿಮಕ್ಕಳೆಲ್ಲಾ ಅಕ್ರಮ ರಿವಾಲ್ವರ್‌ಗಳ ಗ್ರಾಹಕರಾಗಿದ್ದಾರೆ. ಆದರೆ ಇಂಥಾ ರಿವಾಲ್ವರುಗಳನ್ನು ಭಯಾನಕವಾಗಿ ಬಳಸುತ್ತಿರುವವರು ಮಾತ್ರ ಭೂಗತ ಪಾತಕಿಗಳು. ಬೆಂಗಳೂರು ಭೂಗತವೆಂಬುದು ಮಚ್ಚು ಲಾಂಗುಗಳಿಂದ ರಿವಾಲ್ವರ್, ಪಿಸ್ತೂಲ್‌ಗಳಿಗೆ ಬಡ್ತಿ ಪಡೆದು ದಶಕಗಳೇ ಕಳೆದಿವೆ. ಈಗೊಂದಷ್ಟು ವರ್ಷಗಳ ಹಿಂದೆ ಡಾನ್‌ಗಳೆನ್ನಿಸಿಕೊಂಡವರಲ್ಲಿ ಮಾತ್ರ ಕಾಣಸಿಗುತ್ತಿದ್ದ ಈ ಅಕ್ರಮ ಪಿಸ್ತೂಲ್‌ಗಳು ಇಂದು ಕಾಂಜೀಪೀಂಜಿಗಳು, ಈಗ ತಾನೇ ರೌಡಿಸಂಗೆ ಎಂಟ್ರಿ ಕೊಟ್ಟ ತಲೆ ಮಾಸಿದ ಪಡ್ಡೆಗಳ ಕೈಯಲ್ಲೂ ಲಕಲಕಿಸುವ ಅನಾಹುತಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ.

ನಿಖರವಾಗಿ ಹೇಳಬೇಕೆಂದರೆ ಪಿಸ್ತೂಲು, ರಿವಾಲ್ವರ್ ಎಂಬುದು ಕತ್ತಲ ಪ್ರಪಂಚವನ್ನು ಕ್ರೇಜಿನಂತೆ, ಸನ್ನಿಯಂತೆ ಆವರಿಸಿಕೊಂಡಿದೆ. ಇನ್ನೂ ಕೆಲ ಕ್ರಿಮಿನಲ್‌ಗಳು ಭಾರೀ ಅನಾಹುತ ಸೃಷ್ಟಿಸಲು ಇಂಥವುಗಳ ಮೊರೆ ಹೋಗಿರುವುದೂ ಸತ್ಯ. ಇಂತಹುದೊಂದು ಅಲೆ ಏಳುತ್ತಲೇ ದಶಕಗಳ ಹಿಂದೆ ಬೆಂಗಳೂರಿನ ಮೂಲೆಯೊಂದರಲ್ಲಿ ಅಕ್ರಮ ಪಿಸ್ತೂಲ್, ರಿವಾಲ್ವರ್ ತಯಾರಿಸುವ ಕಾರ್ಖಾನೆಯೇ ತಲೆಯೆತ್ತಿತ್ತು, ಪೊಲೀಸರ ಮುತುವರ್ಜಿಯಿಂದ ಕೆಲವೇ ಸಮಯದಲ್ಲಿದು ಬಾಗಿಲು ಮುಚಿತ್ತು, ಇಂಥಾ ಸನ್ನಿವೇಶದಲ್ಲಿ ಬೆಂಗಳೂರಿನ ಪಾತಕಿಗಳು ನೆಚ್ಚಿಕೊಂಡಿದ್ದು ಉತ್ತರ ಪ್ರದೇಶ, ಮಧ್ಯಪ್ರದೇಶ ಹಾಗೂ ಬಿಹಾರದಂಥ ರಾಜ್ಯಗಳನ್ನು.


ಆರಂಭದ ದಿನಗಳಲ್ಲಿ ರಾಜ್ಯದ ಅನೇಕರು ವೆಪನ್ ಡೀಲಿಂಗ್‌ನ ಬ್ರೋಕರಿಕೆ ನಡೆಸಿ ಕಾಸು ಮಾಡಿಕೊಂಡರು. ಈಗೊಂದು ಐದಾರು ವರ್ಷಗಳ ಹಿಂದೆ ಈ ವೆಪನ್ ಡೀಲಿಂಗ್ ಕ್ಷೇತ್ರಕ್ಕೆ ಪಾದ ಊರಿದವನು ಭಾಷಾ ಅಲಿಯಾಸ್ ಭಾಷಾ ಸಾಬ್ ನದಾಫ್. ಇದೀಗ ಸಿಸಿಬಿ ಪೊಲೀಸರು ಕೆಡವಿಕೊಂಡವರಲ್ಲಿ ಎ ಒನ್ ಆರೋಪಿಯಾಗಿರುವ ಭಾಷಾನ ಹಿನ್ನೆಲೆ ರೋಚಕವಾಗಿದೆ.

ಭಾಷಾ ಸಾಬ್ ಮೂಲತಃ ಬಿಜಾಪುರ ಜಿಲ್ಲೆಯ ಉಮ್ರಾಣಿ ಗ್ರಾಮದವನು. ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮುಸ್ಲಿಂ ಪಿಂಜಾರರ ಪೈಕಿಯವನಾದ ಭಾಷಾ, ಹಾದಿ ಬಿಟ್ಟು ಭೂಗತದ ಸಂಪರ್ಕಕ್ಕೆ ಬಂದದ್ದು ಈಗ್ಗೆ ಎಂಟು ವರ್ಷಗಳ ಹಿಂದೆ. ಹೇಳಿಕೇಳಿ ಇದು ಭಯಾನಕ ಭೀಮಾ ತೀರದ ಹಂತಕರ ತವರು ನೆಲ. ಆದಾಗಲೇ ಕುಖ್ಯಾತ ಪಾತಕಿ ಚಂದಪ್ಪ ಹರಿಜನನ ಹಾರಾಟ ಶಾಶ್ವತ ಅಂತ್ಯ ಕಂಡಿತ್ತು. ಆದರೆ ಭೀಮಾತೀರದ ನೆತ್ತರ ಕಥನ ಕಳಚಿದೊಂದು ಕೊಂಡಿಗೆ ಕುಸಿದು ಬೀಳುವಂತಹುದಲ್ಲ, ಅದಕ್ಕೆ ಸಾಕ್ಷಿಯೆಂಬಂತೆ ಮಲ್ಲಿಕಾರ್ಜುನ ಚಡಚಣ ಮತ್ತು ಪುತ್ರಪ್ಪ ಸಾಹುಕಾರನ ನಡುವೆ ರಣಕದನಕ್ಕೆ ಚಾಲನೆ ಸಿಕ್ಕಿತ್ತು. ಪುತ್ರಪ್ಪ ಯಾವ ಪರಿ ವಿಜೃಂಭಿಸಿದ್ದನೆಂದಲೇ ತನ್ನ ಎದುರಾಳಿ ಮಲ್ಲಿಕಾರ್ಜುನ ಚಡಚಣನನ್ನು ಊರು ಬಿಡಿಸಿದ್ದ



ನ್ಯಾಮಗೌಡ

ಈ ಹೊತ್ತಿಗಾಗಲೇ ಭೀಮಾ ತೀರದ ರಣ ದ್ವೇಷದ ಪಾತಕಗಳಲ್ಲಿ ಕಂಡೂ ಕಾಣದಂತೆ ಪಾಲ್ಗೊಂಡಿದ್ದ ಭಾಷಾ ಸಾಬ್ ಮೊದಲು ಚಂದಪ್ಪ ಹರಿಜನನ ಪಳೆಯುಳಿಕೆಗಳ ನಡುವೆ ಗುರುತಿಸಿಕೊಂಡ. ನಂತರ ಮಲ್ಲಿಕಾರ್ಜುನ ಚಡಚಣನ ಟೀಮು ಸೇರಿಕೊಂಡ. ಆನಂತರ ಶುರುವಾದ ಭಾಷಾನ ಪಾತಕ ಕೃತ್ಯಗಳು ಹಂತ ಹಂತವಾಗಿ ಮಜಲು ಬದಲಿಸುತ್ತಾ ಸಾಗಿದವು.



ಅಶೋಕನ್

ಮಲ್ಲಿಕಾರ್ಜುನ ಚಡಚಣನ ತಂಡದಲ್ಲಿದ್ದುಕೊಂಡು ಕೊಲೆಯ ಮೂಲಕವೇ ಅಕೌಂಟು ತೆರೆದ ಭಾಷಾ ಸಾಬ್‌ನ ಮೇಲೆ ಎರಡು ಕೊಲೆ ಪ್ರಕರಣಗಳು ಅಮರಿಕೊಂಡವು. ತದನಂತರ ದಕಾಯಿತಿಗಿಳಿದ ಭಾಷಾ ನಿಜಕ್ಕೂ ಅನಾಹುತಕಾರಿಯಾಗಿ ಬೆಳೆದು ನಿಂತ. ದಕಾಯಿತಿಗೆ ತೊಡಕಾದಾಗ ಲೆಕ್ಕವಿಲ್ಲದಷ್ಟು ಮಂದಿಯನ್ನು ಕೊಂದು ಕೆಡವಿದ. ಸದ್ಯ ಅಧಿಕೃತವಾಗಿ ಈತನ ಮೇಲೆ ಎಂಟು ದಕಾಯಿತಿ ಪ್ರಕರಣಗಳು ದಾಖಲಾಗಿವೆ. ಇಂಡಿ, ಐರಸಂಗ, ಸಿಂದಗಿ, ಚಡಚಣ ಆಲಮೇಲ ಪೊಲೀಸ್ ಠಾಣೆಗಳಲ್ಲೂ ಈತನ ಮೇಲೆ ತರಹೇವಾರಿ ಕೇಸುಗಳಿವೆ. ಚಡಚಣ ಪೊಲೀಸ್ ಠಾಣೆಯಲ್ಲಿ ಈತನ ವಿರುದ್ಧ ರೌಡಿಶೀಟ್ ಅನ್ನೇ ತೆರೆಯಲಾಗಿದೆ.

ಹೀಗೆ ಪಾತಕಿಯಾಗಿ ಬದಲಾದ ಈತ ಈಗೊಂದು ಆರು ವರ್ಷಗಳ ಹಿಂದೆ ಅಡಿಯಿಟ್ಟದ್ದು ವೆಪನ್ ಡೀಲಿಂಗ್ ದಂಧೆಗೆ. ಒಂದು ಮೂಲದ ಪ್ರಕಾರ ಆರಂಭದಲ್ಲೀತ ಛತ್ತೀಸ್‌ಗಡದಿಂದ ಪಿಸ್ತೂಲ್, ರಿವಾಲ್ವರ್ ತರಿಸಿಕೊಳ್ಳುತ್ತಿದ್ದ. ಮಹಾರಾಷ್ಟ್ರ ಹಾಗೂ ಕರ್ನಾಟಕದ ಗಡಿಭಾಗದಲ್ಲಿ ಅಕ್ರಮ ವೆಪನ್‌ಗಳನ್ನು ಪಡೆದುಕೊಳ್ಳುತ್ತಿದ್ದ. ಈ ಭಾಗದ ಪೊಲೀಸರು ಕೂಡಾ ಅದ್ಯಾಕೋ ಥಂಡ ಹೊಡೆದದ್ದರಿಂದ ಭಾಷಾನ ದಂಧೆಗೆ ಯಾವುದೇ ಅಡಚಣೆಯಿರಲಿಲ್ಲ, ಆದರೆ ಇತ್ತೀಚೆಗೆ ಇಂಡಿ ಠಾಣೆಗೆ ಖಡಕ್ ಆಸಾಮಿಯೊಬ್ಬರು ಡಿವೈಎಸ್‌ಪಿಯಾಗಿ ಬಂದಿದ್ದಾರೆ. ಈತ ಇತ್ತೀಚೆಗೆ ಪುತ್ರಪ್ಪನ ಸಾಹುಕಾರನ ಬಾಡಿಗಾರ್ಡ್ ಒಬ್ಬನನ್ನು ಎಳೆತಂದು ರುಬ್ಬಿದ್ದರಂತೆ. ಇಂಥಾ ಅಧಿಕಾರಿ ತನ್ನ ವ್ಯಾಪ್ತಿಯ ಮೂರು ಪ್ರಕರಣಗಳ ಸಂಬಂಧ ಕಳೆದ ಹದಿನೈದು ದಿನಗಳಿಂದ ಭಾಷಾನನ್ನು ಹುಡುಕುತ್ತಿದ್ದರು.

ಇಂಥಾ ನಟೋರಿಯಸ್ ಹಿನ್ನೆಲೆ ಹೊಂದಿರುವ ಭಾಷಾ ಸಾಬ್ ಮೊದಮೊದಲು ಛತ್ತೀಸ್‌ಗಡದಿಂದ ಸರಬರಾಜಾಗುತ್ತಿದ್ದ ಅಕ್ರಮ ಶಸ್ತ್ರಾಸ್ತ್ರಗಳ ಕರ್ನಾಟಕದ ಡೀಲರ್ ಆಗಿದ್ದ. ಈ ಸಂದರ್ಭದಲ್ಲೇ ಉತ್ತರ ಪ್ರದೇಶದ ಅಕ್ರಮ ವೆಪನ್ ಡೀಲಿಂಗ್ ಮಾಫಿಯಾದ ಸಂಪರ್ಕಕ್ಕೆ ಬಂದು ತಾನೇ ಹಂಚಿಕೆದಾರನಾಗಿ ಬದಲಾಗಿದ್ದ. ಕರ್ನಾಟಕ ಮಾತ್ರವಲ್ಲದೇ ಬೇರೆ ಬೇರೆ ರಾಜ್ಯಗಳಲ್ಲೂ ಚಾಲಾಕಿತನದಿಂದ ಅಕ್ರಮ ಶಸ್ತ್ರಾಸ್ತ್ರ ಮಾರಾಟ ಮಾಡಿದ್ದ.

ಭಾಷಾ ಇದೀಗ ಸರಿಯಾಗಿ ತಗುಲಿಕೊಂಡಿದ್ದಾನೆ. ಲಾಗಾಯ್ತಿನಿಂದಲೂ ಈತನ ಗ್ರಾಹಕರಾಗಿದ್ದ ಬೆಂಗಳೂರು ಭೂಗತ ಡಾನ್‌ಗಳೊಂದಷ್ಟು ಮಂದಿ ಅಕ್ಷರಶಃ ಬೆವರಿದ್ದಾರೆ. ಇನ್ನುಳಿದಂತೆ ಪ್ರತಿಷ್ಠಿತರ ಸೋಗಿನಲ್ಲಿ ಸಮಾಜಬಾಹಿರ ದಂಧೆ ನಡೆಸುತ್ತಿರುವ ಐನಾತಿಗಳನೇಕರು ಇಷ್ಟರಲ್ಲೇ ಪೊರೆ ಕಳಚಲಿರುವ ಸೂಚನೆ ಸಿಕ್ಕು ಭಯ ಭೀತರಾಗಿದ್ದಾರೆ.

ಸಿಸಿಬಿ ವಿಶೇಷ ವಿಚಾರಣಾ ವಿಭಾಗದ ಎಸಿಪಿ ನ್ಯಾಮೇಗೌಡ, ಇನ್ಸ್‌ಪೆಕ್ಟರ್ ಅಶೋಕನ್ ಮತ್ತವರ ತಂಡದ ಬಿರುಸು ಗಮನಿಸಿದರೆ ಇಷ್ಟರಲ್ಲೇ ಎಲ್ಲವೂ ಹೊರಬರುವುದು ಪಕ್ಕಾ ಆದಂತಿದೆ. ಸದ್ಯ ಅಕ್ರಮ ಪಿಸ್ತೂಲ್, ರಿವಾಲ್ವರ್ ಮಾರಾಟ ದಂಧೆಯ ಬೇರುಗಳನ್ನೇ ಕೆದಕ ಹೊರಟಿರುವ ಈ ತಂಡದ ಶ್ರಮ ಮೆಚ್ಚುವಂಥದ್ದು.

ಹುಲಿವೇಶದ ಕಥೆಗಳು



ಈ ಕಥೆಗಳ ಬಗ್ಗೆ ಒಂದಿಷ್ಟು ಮಾತು

ಕರಾವಳಿ ಜಿಲ್ಲೆಗಳಲ್ಲಿ ದಸರಾಕ್ಕೆ 'ಮಾರ್ನೆಮಿ' ಅಂತಾರೆ. ಈ ಹಬ್ಬವು ಧಾರ್ಮಿಕತೆಯೊಂದಿಗೆ ಬೆಸೆದುಕೊಂಡಿದ್ದರೂ ಇದೊಂದು ಸಾಂಸ್ಕೃತಿಕ ಉತ್ಸವ. ಈ ಸಮಯದಲ್ಲಿ ಯುವಕರು ಹುಲಿವೇಶ ತೊಟ್ಟು ಗುಂಪಾಗಿ ಮನೆ, ಅಂಗಡಿಗಳಿಗೆ ತೆರಳಿ ಕುಣಿಯುತ್ತಾರೆ. ಇದನ್ನು ನೋಡುವುದೇ ಖುಷಿಯ ವಿಷಯ. ಕೆಲ ವರ್ಷಗಳ ಹಿಂದಿನವರೆಗೂ ಈ ಹುಲಿವೇಶಕ್ಕೆ ಜಾತಿ ಬೇಧವಿರಲಿಲ್ಲ, ಆದರೆ ಯಾವಾಗ ಕೋಮುವಾದ ತಲೆಯೆತ್ತಿತ್ತೋ ಅದರ ಪರಿಣಾಮ ಈ ಹುಲಿವೇಶದ ಉತ್ಸವದಲ್ಲೂ ಕಾಣಿಸಿಕೊಂಡಿದೆ. ಮುಂಚೆಯಂತೆ ಈಗ ಈ ಹುಲಿಗಳು ಎಲ್ಲರ ಅಂಗಳದಲ್ಲಿ ಕುಣಿಯೋದಿಲ್ಲ, 'ಗೋವು ಪವಿತ್ರ, ಗೋಹತ್ಯಾ ನಿಶೇಧ' ಎಂಬ ಕಲ್ಪನೆಗಳು ಕೂಡಾ ಕೋಮುವಾದವನ್ನು ಇನ್ನಷ್ಟು ಬಲಪಡಿಸಿದ ವಿಷ ಕಲ್ಪನೆಗಳೇ.

ಹುಲಿವೇಶವನ್ನು ಸಂಕೇತವಾಗಿಸಿ ಕೋಮುವಾದದೆಡೆಗೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಮಿಂಚುಕಥೆಗಳಲ್ಲಿ ಮಾಡಿದ್ದೇನೆ.

• ವಿಲ್ಸನ್, ಕಟೀಲ್

ಹತ್ತು ನಿಮಿಷಗಳ ಕಾಲ ಮಣ್ಣಲ್ಲಿ ಹೊರಳಾಡಿ,
ಪಲ್ಟಿ ಹೊಡೆದು ಕುಣಿದರೂ
ಹುಲಿಗುಂಪಿಗೆ ದಕ್ಕಿದ್ದು ಬರಿ ಐದು ರೂಪಾಯಿ.
ಬೆನ್ನಲ್ಲೇ ಬಂದ ಪೊಲೀಸ್ ಪೇದೆ ಕೈಚಾಚಿದೊಡನೆ
ಅಂಗಡಿಯವನು ಕೊಟ್ಟದ್ದು ಐವತ್ತು ರೂಪಾಯಿಗಳನ್ನು.
ಇದನ್ನು ಗಮನಿಸಿದ ಮರಿಹುಲಿಯೊಂದು
ತನ್ನಷ್ಟಕ್ಕೆ ತಾನೇ ಗೊಣಗಿಕೊಂಡಿತು-
'ಛೆ! ನಾವೂ ಅದೇ ವೇಶವನ್ನು ಹಾಕ್ಕೋಬೇಕಿತ್ತು...!'
***

ಕುಣಿಕುಣಿಯುತ್ತಾ ಮರಿ ಹುಲಿಯೊಂದು
ಸೆಗಣಿ ತುಳಿದು, ಅಸಹ್ಯದಿಂದ 'ಶ್ಶೀ' ಎಂದಿತು.
ಗುಂಪಿನಲ್ಲಿದ್ದ ಮುದಿ ಹುಲಿ ಪ್ರವಚನಗೈಯಿತು-
'ಸೆಗಣಿಗೆ ಶ್ಶೀ ಅನ್ನಬಾರದು ಮರಿ...
ಗೋವು ನಮ್ಮ ದೇವರು!'
***

ಅಜ್ಜಿಕಥೆ ಕೇಳುತ್ತಿದ್ದ ಕರು ಕೇಳಿತು-
'ಅಮ್ಮಾ... ಹುಲಿ ನೋಡೋಕೆ ಹ್ಯಾಗಿರುತ್ತೆ?'
ವಾಸ್ತವಿಕತೆಯ ಅರಿವಿದ್ದ ಆಕಳು
ಆ ಕಡೆಗೆ ದೃಷ್ಟಿ ನೆಟ್ಟಿತು. ಅಲ್ಲಿ-
ವೇಶ ತೊಟ್ಟು ಕುಣಿಯುವ
ಮನುಜರ ಪಂಗಡವಿತ್ತು!
***

ರಸ್ತೆಯಲ್ಲಿ ಹೋಗುತ್ತಿದ್ದಾಗ
ಯುವ ಹುಲಿಗಳ ಗುಂಪೊಂದು ದನಗಳನ್ನು ಛೇಡಿಸಿತು.
ರೋಸಿ, ಅಟ್ಟಿಸಿಕೊಂಡು ಬಂದ ಗೂಳಿಗಳ ತಿವಿತದಿಂದ ಬಚಾವಾಗಲು
ಆ ಹುಲಿಗಳ ಗುಂಪು ಯಾವುದೋ ಗೋಡೆಯನ್ನು ಹಾರಿತು.
ಆವಾಗಲೇ ಅರಿವಾದದ್ದು ಅವಕ್ಕೆ-
ತಾವು ಹಾರಿದ್ದು ಮಸೀದಿಯ ಕಾಂಪೌಂಡು ಎಂದು!
***

ದಿನಂಪೂರ್ತಿ ಕುಣಿದು, ಸುಸ್ತಾಗಿ
ಸಂಜೆ ಸ್ನಾನಕ್ಕೆಂದು ಹುಲಿ ಹಿಂಡು ನದಿದಡ ತಲುಪಿತು.
ಮೈಗಂಟಿದ ವೇಶದ ಬಣ್ಣವನ್ನು ತಿಕ್ಕಲು
ಹುಲಿಯೊಂದು
ದನದ ಬಾಯಿಯಿಂದ ಬೈಹುಲ್ಲನ್ನು ಕಸಿಯಿತು!
***


ಕುಣಿದು ಕುಣಿದು ಹಸಿದ ಹುಲಿಪಂಗಡವೊಂದು
ಹೋಟೆಲ್ಲನ್ನು ಹೊಕ್ಕಿತು.
ಮಾಣಿ ಕೇಳಿದ-
'ಏನು ಕೊಡ್ಲಿ ತಿನ್ನಕ್ಕೆ? ಅನ್ನ ಸಾಂಬಾರ್ ಕೊಡ್ಲಾ ಸಾರ್?'
ಮುಖವಾಡವನ್ನು ಮೇಜಿನ ಮೇಲೆ ಕಳಚಿಟ್ಟ
ಹುಲಿಗಳು ಒಕ್ಕೊರಲಿನಿಂದ ಆರ್ಡರ್ ಮಾಡಿದವು-
'ಪ್ಲೇಟ್ ಪರೋಟಾ ಮತ್ತು ಬೀಫ್ ಚಿಲ್ಲಿ!'
***

ರಾಜಾರೋಶವಾಗಿ ರಸ್ತೆಯಲ್ಲಿ ಸಾಗುತ್ತಿದ್ದ ಹುಲಿಗಳು
ಸಾಬರ ಲಾರಿಯನ್ನು ಅಡ್ಡಗಟ್ಟಿದವು.
ಹದಿಹರೆಯದ ಹುಲಿ ಚಾಲಕನ ಕೊರಳಪಟ್ಟಿ ಹಿಡಿದಾಗ
ಲಾರಿಯೊಳಗೆ ಇಣುಕಿದ ಇನ್ನೊಂದು ಹುಲಿ ಗೊಣಗಿತು-
'ಛೆ... ಬೈಹುಲ್ಲಾ?
ನಾನೇನೋ ದನಗಳಿದ್ದಾವೆ ಅಂದ್ಕೊಂಡಿದ್ದೆ!'
***

ಆಕಳು ತನ್ನ ಕರುವಿಗೆ ಪುಣ್ಯಕೋಟಿಯ ಕತೆ ಹೇಳುತ್ತಾ
ಭಾವಾವೇಶದಿಂದ ಕೊನೆಗೆ-
'ಹುಲಿಗಳಲ್ಲೂ ಒಳ್ಳೆ ಹೃದಯದ ಹುಲಿಗಳಿದ್ದಾವೆ' ಎಂದಿತು.
ಅಷ್ಟರಲ್ಲಿ ಅದಕ್ಕೆ ಹುಲಿವೇಶದ ಆಗಮನದ ಅರಿವಾಯಿತು.
ಗಾಬರಿಬಿದ್ದ ದನ,
ಕರುವಿನೊಂದಿಗೆ ಕೊಟ್ಟಿಗೆಯಲ್ಲಿ ಅವಿತುಕೊಂಡಿತು

ಕಾಂಗ್ರೆಸ್ ಕೌನ್ಸಿಲರ್ ನಟರಾಜ್ ಹತ್ಯೆ

ಹಂತಕರ ಹಿಂದೆ ಬಿಜೆಪಿ ನೆರಳು?




ಕೌನ್ಸಿಲರ್ ನಟರಾಜ್

ಓರ್ವ ಕೌನ್ಸಿಲರ್‌ನನ್ನು ಕೊಲ್ಲಬೇಕೆಂದರೆ ಅದರ ಹಿಂದೆ ದೊಡ್ಡ ರೊಕ್ಕ ಮತ್ತು ದೊಡ್ಡ ಕೈ ಇರಲೇಬೇಕು. ಅದು ಬಿಲ್ಡರ್ ಚಂದ್ರಪ್ಪನಾ? ವೈಯಾಲಿಕಾವಲ್‌ನ ಮೀಟರ್ ಬಡ್ಡಿ ರೆಡ್ಡಿಗಳಾ? ಮಂತ್ರಿ ಮಾಲ್ ಖದೀಮರಾ? ನಟರಾಜ್‌ಗೆ ಲಂಚ ಕೊಟ್ಟು ಕೈಸುಟ್ಟುಕೊಂಡ ಪಾಲಿಕೆ ಕಂಟ್ರಾಕ್ಟರ್‌ಗಳಾ? ಅಥವಾ ನಟರಾಜನಿಗಿದ್ದ ಕಾಮಲಾಲಸೆಯ ಪ್ರತಿಫಲವಾ?

• ರಾ. ಸೋಮನಾಥ್

ಬನಶಂಕರಿಯ ಕೌನ್ಸಿಲರ್ ದಿವಾನಾ ಆಲಿ ಕೊಲೆಯಾದ ಐದೇ ತಿಂಗಳಿಗೆ ಮತ್ತೊಬ್ಬ ಬಿಬಿಎಂಪಿಯ ಕೌನ್ಸಿಲರ್‌ನ ಹೆಣಬಿದ್ದಿದೆ!


ಕೊಲೆಯಾದ ಗಾಂಧಿನಗರದ ಕಾಂಗ್ರೆಸ್ ಕೌನ್ಸಿಲರ್ ಎಸ್. ನಟರಾಜ್ ಶಾಸಕ ದಿನೇಶ್ ಗುಂಡೂರಾವ್ ಬಲಗೈ ಬಂಟ. ಬಾಂಬ್ ನಾಗನ ಕಡುವೈರಿ. ದುಡ್ಡೂ ಕಾಸಿನ ವಿಷಯದಲ್ಲಿ ಮಹಾನ್ ಕೃಪಣಿ. ಫೈನಾನ್ಸ್ ವ್ಯವಹಾರವಿತ್ತು. ಬೇರೆಲ್ಲ ಕೌನ್ಸಿಲರ್‌ಗಳಂತೆ ಬೋಗಸ್ ಬಿಲ್ ದಂಧೆಯೂ ಇತ್ತು. ಅದಕ್ಕೆ ತಕ್ಕಂಥ ಶೋಕಿಯೂ ಇತ್ತು. ಬೆಂಗಳೂರಿನ ಹೃದಯ ಸದೃಶ ಮೆಜೆಸ್ಟಿಕ್‌ನಂಥ ಫಲವತ್ತಾದ ಏರಿಯಾಕ್ಕೆ ಕೌನ್ಸಿಲರ್ ಆದ ಮೇಲೂ ಮೇಲ್ಕಂಡ ಎಲ್ಲಾ ಗುಣಗಳಿವೆಯೆಂದರೆ ರಿಸ್ಕ್ ತಪ್ಪಿದ್ದಲ್ಲ.



ದಿನೇಶ್ ಗುಂಡೂರಾವ್

ಅದು ಅರ್ಥವಾಗುವಂತಿದ್ದರೆ ನಟರಾಜ್ ಈ ರೀತಿ ನಡುರಸ್ತೆಯಲ್ಲಿ ಕೊಲೆಯಾಗುತ್ತಿರಲಿಲ್ಲ.

ಕೊಲೆಯಾದ ರೀತಿ, ಕೊಂದವರ ಚಾಣಾಕ್ಷತೆ ಮತ್ತು ಗಾಂಧಿನಗರದ ಪರಿಸ್ಥಿತಿಯನ್ನು ಗಮನಿಸಿದರೆ ಇದೊಂದು ವ್ಯವಸ್ಥಿತ ಸುಪಾರಿ ಹತ್ಯೆ ಎಂಬುದು ಎಂಥವರಿಗೂ ಮನದಟ್ಟಾಗುತ್ತದೆ. ಅಕ್ಟೋಬರ್ 1 ರ ಶನಿವಾರ ಅಪರಾಹ್ನ ತನ್ನ ಸ್ಕೂಟಿಯಲ್ಲಿ ಏಕಾಂಗಿಯಾಗಿ ಶೇಷಾದ್ರಿಪುರದ ರಾಜೀವ್ ಗಾಂಧಿ ಸರ್ಕಲ್ಲಿಗೆ ಬಂದ ನಟರಾಜ್, ಆನಂತರ ಮಲ್ಲೇಶ್ವರದ ಸಂಪಿಗೆ ಥೇಟರ್ ಎದುರಿನ ಕೃಷ್ಣ ಭವನ್ ಹೋಟೆಲಿಗೆ ಬಂದಿದ್ದಾನೆ. ಅಲ್ಲಿ ಕಾಫಿ ಕುಡಿದವನೇ ಮತ್ತೆ ಸ್ಕೂಟಿಯಲ್ಲಿ ಮಲ್ಲೇಶ್ವರಂ ಸರ್ಕಲ್ಲಿನತ್ತ ಚಲಿಸಿದ್ದಾನೆ. ಇನ್ನೇನು ಮಲ್ಲೇಶ್ವರ ಸರ್ಕಲ್ಲಿನಲ್ಲಿ ಹೊರಳಬೇಕೆನ್ನುವಷ್ಟರಲ್ಲೇ ಬೆನ್ನಟ್ಟಿ ಬಂದ ಕಾರೊಂದರಿಂದ ನಾಲ್ವರು ಹಂತಕರು ಇಳಿದಿದ್ದಾರೆ. ಪ್ರತಿಯೊಬ್ಬರ ಕೈಯಲ್ಲೂ ಉದ್ದುದ್ದದ ಲಾಂಗುಗಳಿದ್ದವು. ಅರೆ ಕ್ಷಣದಲ್ಲೇ ನಟರಾಜನನ್ನು ಅಡ್ಡಗಟ್ಟಿದ ಹಂತಕ ಪಡೆ ಮನಸೋಇಚ್ಛೆ ಕೊಚ್ಚಿ ಹಾಕಿದೆ.



ಪಿ.ಸಿ. ಮೋಹನ್

ಕತ್ತರಿಸಿದ ರೀತಿ ಹೇಗಿತ್ತೆಂದರೆ ತಲೆ ಸೀಳಿ ಹೋಗಿತ್ತು, ಬಿದ್ದ ಮಚ್ಚೇಟಿಗೆ ಅರ್ಧ ಕತ್ತೇ ಕೊಯ್ದು ಬಿದ್ದಿತ್ತು, ಭುಜ, ಬೆನ್ನು, ಎದೆ ಭಾಗವೇ ಆಯ್ದು ಕತ್ತರಿಸಿದ್ದನ್ನು ನೋಡಿದರೆ ಕೊಲ್ಲುವುದೊಂದೇ ಹಂತಕರ ಉದ್ದೇಶವಾಗಿತ್ತು. ಹಾಗೇ ಕೊಂದವರು ಅನತಿ ದೂರದಲ್ಲಿ ಬಂದ ಕಾರನ್ನು ಬಿಟ್ಟು ಹೋಗಿದ್ದರು. ಹಂತಕರು ಮಾಡಿದ ಒಂದೇ ಯಡವಟ್ಟೆಂದರೆ ಬಿಟ್ಟುಹೋದ ಕಾರಿನಲ್ಲಿ ಬಳಸಿದ ಮೊಬೈಲನ್ನು ಬಿಟ್ಟು ಹೋಗಿದ್ದು. ಅದನ್ನು ಉದ್ದೇಶಪೂರ್ವಕವಾಗಿ ಬಿಟ್ಟು ಹೋದರಾ? ಅಥವಾ ಅದೊಂದು ಅಚಾತುರ್ಯವಾ? ಗೊತ್ತಿಲ್ಲ!

ದಿನೇಶ್ ಬಲಗೈ ಬಂಟ

ಬಳಸಿದ ಕಾರು ಶೃಂಗೇರಿ-ಕೊಪ್ಪದ ಟ್ಯಾಕ್ಸಿ ಚಾಲಕ ವಿಜಯ್‌ಕುಮಾರ್ ಎಂಬಾತನಿಗೆ ಸೇರಿದ್ದು. ಅದೂ ಇತ್ತೀಚೆ ಗಷ್ಟೇ ಖರೀದಿಸಿದ್ದು. ಕೊಲೆ ನಡೆದ ಮರುಕ್ಷಣದಿಂದಲೇ ಈತ ಪರಾರಿಯಾಗಿದ್ದಾನೆಂದರೆ, ಕೊಲ್ಲುವ ಉದ್ದೇಶದಿಂದಲೇ ಅದನ್ನು ಖರೀದಿಸಿದ್ದ ಎಂದಾಯ್ತು. ಬಿಟ್ಟು ಹೋದ ಮೊಬೈಲ್‌ನ ಸಿಮ್ ಅನ್ನು ಬೇರೆ ಯಾರೋ ಉಮೇಶ್ ಎಂಬಾತನ ಗುರುತಿನ ಚೀಟಿ ಕೊಟ್ಟು ಹಂತಕರು ಖರೀದಿಸಿದ್ದಾರೆಂದರೆ ಕೊಲೆಗೆಂದೇ ಪ್ರತ್ಯೇಕವಾಗಿ ಸಿಮ್ ಖರೀದಿಸಿದ್ದಾರೆಂದಾಯ್ತು. ಏಕೆಂದರೆ ಉಮೇಶ್‌ಗೆ ತನ್ನ ಗುರುತಿನ ಚೀಟಿ ಕೊಟ್ಟು ಸಿಮ್ ಖರೀದಿಸಿದ್ದೇ ಗೊತ್ತಿಲ್ಲ.



ಚಲುವರಾಯಸ್ವಾಮಿ

ಇದರರ್ಥ ಇದೊಂದು ಪೂರ್ವಯೋಜಿತ ವ್ಯವಸ್ಥಿತ ಹತ್ಯೆ. ತಿಂಗಳಾನುಗಟ್ಟಲೆ ತಯಾರಿ ನಡೆಸಿ ಯಾರದೋ ಗುರುತಿನಚೀಟಿ ಕದ್ದು ಅದರ ಮೂಲಕ ಸಿಮ್ ಖರೀದಿಸಿ, ಅದಕ್ಕೆಂದೇ ಕಾರ್ ಒಂದನ್ನು ಹೊಂಚಿಕೊಂಡು ಅಷ್ಟೊಂದು ಭೀಬತ್ಸವಾಗಿ ನಡುರಸ್ತೆಯಲ್ಲೇ ಕೊಲ್ಲುತ್ತಾರೆಂದರೆ ಇದರ ಹಿಂದಿನ ಉದ್ದೇಶ ಮತ್ತು ಕೈವಾಡ ದೊಡ್ಡಮಟ್ಟದಲ್ಲೇ ಇರಬೇಕು. ಅದರಲ್ಲೂ ಬಿಬಿಎಂಪಿಯ ಕೌನ್ಸಿಲರ್ ಓರ್ವನನ್ನು ಕೊಲ್ಲುವುದೆಂದರೆ ಅದು ಯಾರೋ ರೌಡಿಯೊಬ್ಬನನ್ನು ಕೊಂದಷ್ಟು ಸಲೀಸಲ್ಲ ಮತ್ತು ಅಧಿಕಾರಸ್ಥ ಪ್ರಭಾವಿಯೊಬ್ಬನ ನೆರಳಿಲ್ಲದೆ ಸಾಧ್ಯವೇ ಇಲ್ಲ.


ಹಾಗಿದ್ದರೆ ನಟರಾಜ್ ಹತ್ಯೆಯ ಲಾಭ ಸಿಗುತ್ತಿದ್ದದ್ದು ಯಾರ್‍ಯಾರಿಗೆ?

ಈ ಪ್ರಶ್ನೆಯ ಆಳಕ್ಕಿಳಿದಂತೆಲ್ಲ ಗಾಂಧಿನಗರದ ರಕ್ತ ರಾಜಕಾರಣದ ಕ್ರೌರ್ಯದ ಅನಾವರಣಗೊಳ್ಳುತ್ತದೆ. ಇಲ್ಲಿಗೆ ಆರು ತಿಂಗಳ ಹಿಂದಷ್ಟೇ ಮಾಜಿ ಕೌನ್ಸಿಲರ್ ಎಲ್. ಗೋವಿಂದರಾಜುವನ್ನು ಇದೇ ರೀತಿ ಮಲ್ಲೇಶ್ವರಂ ಸರ್ಕಲ್ ಬಳಿ ಹತ್ಯೆಗೆ ಯತ್ನಿಸಲಾಯ್ತು. ಕಳೆದ ಬಿಬಿಎಂಪಿ ಚುನಾವಣೆಯಲ್ಲಿ ಸುಭಾಶ್‌ನಗರ ವಾರ್ಡಿಗೆ ನಿಂತು ಕಾಂಗ್ರೆಸ್‌ನ ಮಲ್ಲೇಶ್ ವಿರುದ್ಧ ಕೆಲವೇ ನೂರು ಮತಗಳ ಅಂತರದಿಂದ ಸೋತಿದ್ದ ಗೋವಿಂದರಾಜು ಹೇಳಿಕೇಳಿ ಶಾಸಕ ದಿನೇಶ್ ಗುಂಡೂರಾವ್‌ಗೆ ಪರಮಾಪ್ತ. ಈಗ ಕೊಲೆಯಾದ ನಟರಾಜ್ ಕೂಡ ಅದೇ ಶಾಸಕ ದಿನೇಶರ ನಂಬಿಕಸ್ತ ಬಂಟ.

ಬಾಂಬ್ ನಾಗನ ಹಾವಳಿ

ಆವತ್ತು ಗೋವಿಂದರಾಜು ಹತ್ಯೆಯತ್ನದ ಹಿಂದಿದ್ದವನು ಹಳೇ ಪಾತಕಿ ಬಾಂಬ್ ನಾಗ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗಾಂಧಿನಗರ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದದ್ದು ಈಗ ಕೇಂದ್ರ ಬೆಂಗಳೂರಿಗೆ ಬಿಜೆಪಿಯ ಲೋಕಸಭಾ ಸದಸ್ಯರಾಗಿರುವ ಪಿ.ಸಿ. ಮೋಹನ್. ಆಗ ನಾಗನೂ ಜೆಡಿಎಸ್ ಅಭ್ಯರ್ಥಿಯಾಗಿ ದಿನೇಶ್ ವಿರುದ್ಧ ಸೋತಿದ್ದ. ಪಿ.ಸಿ. ಮೋಹನ್ ಕೂಡ 15 ಸಾವಿರ ಮತಗಳ ಅಂತರದಿಂದ ಆವತ್ತು ದಿನೇಶ್ ಗುಂಡೂರಾವ್ ವಿರುದ್ಧ ಸೋತಿದ್ದರು. ಗೆದ್ದು ದಿನೇಶ್ ಎಮ್ಮೆಲ್ಲೇಯಾಗುತ್ತಿದ್ದಂತೆ ಹಳೇ ಕ್ರಿಮಿನಲ್ ಬಾಂಬ್ ನಾಗನ ಹಾವಳಿ ಶುರುವಾಯಿತು. ಮೊದಲಿಗೆ ಗೋವಿಂದರಾಜುವಿನ ಹತ್ಯೆಯತ್ನಕ್ಕೆ ಕೈಯಿಟ್ಟ ಬಾಂಬ್ ನಾಗನ ಷಡ್ಯಂತ್ರ ಹೇಗಿತ್ತೆಂದರೆ, ಗೋವಿಂದರಾಜು ಸ್ಪರ್ಧಿಸಿದ್ದು ಸುಭಾಶ್ ನಗರದ ಕೌನ್ಸಿಲರ್ ಮಲ್ಲೇಶ್ ವಿರುದ್ಧವಾದ್ದರಿಂದ ಪೊಲೀಸರು ಗೋವಿಂದರಾಜು ಮೇಲಿನ ದಾಳಿ ಪ್ರಕರಣದಲ್ಲಿ ಕೌನ್ಸಿಲರ್ ಮಲ್ಲೇಶ್‌ರನ್ನು ಬಂಧಿಸುತ್ತಾರೆಂದೇ ಲೆಕ್ಕಹಾಕಿದ್ದ. ಆದರೆ ಮಲ್ಲೇಶ್ವರಂ ಪೊಲೀಸರಿಗದು ಸುಲಭದ್ದಾಗಿರಲಿಲ್ಲ. ಗೆದ್ದ ಮೇಲೆ ಕೌನ್ಸಿಲರ್ ಓರ್ವ ಸೋತವನನ್ನು ಏಕೆ ಕೊಲ್ಲಿಸುತ್ತಾನೆ?

ವಿಪರ್ಯಾಸವೆಂದರೆ ಗೋವಿಂದರಾಜು ಹತ್ಯೆಯತ್ನದಲ್ಲಿ ಬಾಂಬ್ ನಾಗನೇ ಸಿಲುಕಿಕೊಂಡ. ಆತ ಛೂಬಿಟ್ಟಿದ್ದ ಸುಪಾರಿ ಹಂತಕರು ಮಾಗಡಿ ರಸ್ತೆಯ ಬಾರೊಂದರಲ್ಲಿ ಕುಡಿದು ರಹಸ್ಯ ಬಾಯಿಬಿಟ್ಟಿದ್ದರು. ಯಾವತ್ತು ತನ್ನ ಹುಡುಗರು ಸಿಕ್ಕಿಬಿದ್ದರೋ ಉಪಾಯವಾಗಿ ಕೋರ್ಟಿನಿಂದ ನಿರೀಕ್ಷಣಾ ಜಾಮೀನು ಪಡೆದ ಬಾಂಬ್‌ನಾಗನನ್ನು ಆನಂತರ ಪೊಲೀಸರು ಮುಟ್ಟಲೇ ಇಲ್ಲ. ಬೇರೆ ಯಾರೇ ಮಾಮೂಲಿಯ ಕ್ರಿಮಿನಲ್‌ಗಳಾಗಿದ್ದರೆ ಪೊಲೀಸರು ಪದೇಪದೇ ಲಾಕಪ್ಪಿಗೆ ದಬ್ಬುವುದು, ಮೆರವಣಿಗೆ ಮಾಡುವುದು, ಸಮಾ ರುಬ್ಬುವುದು, ಒಂದೇ ಕೇಸಿಗೆ ನಿರೀಕ್ಷಣಾ ಜಾಮೀನು ತಂದರೆ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ಕೇಸು ದಾಖಲಿಸುವುದು ಮಾಡುತ್ತಿರಲಿಲ್ಲವೆ.



ಕೊಲೆ ನಡೆದದ್ದು ಇಲ್ಲಿ

ಆದರೆ ಬಾಂಬ್ ನಾಗನ ವಿಷಯದಲ್ಲಿ ಇದಾಗಲಿಲ್ಲ.

ದಾಳಿಗೀಡಾಗಿದ್ದು ಏನೆಂದರೂ ಕಾಂಗ್ರೆಸ್ ಬೆಂಬಲಿಗ. ಸುಪಾರಿ ಕೊಟ್ಟವನು ದಿನೇಶ್ ಗುಂಡೂರಾವ್ ಪಕ್ಕಾ ಎದುರಾಳಿ. ಇಬ್ಬರೂ ಬಿಜೆಪಿಗೆ ಪ್ರತಿಸ್ಪರ್ಧಿಗಳೆ. ಹೊಡೆದಾಡಿಕೊಂಡರೆ ಅದು ಬಿಜೆಪಿಗೇ ಲಾಭ ಎಂಬಂತೆ ಪೊಲೀಸರು ನಿಷ್ಕ್ರಿಯರಾದರು. ಬಾಂಬ್ ನಾಗ ಹಾವಳಿಯಿಟ್ಟಷ್ಟೂ ಕಾಂಗ್ರೆಸ್ ಘಾಸಿಗೊಳ್ಳುತ್ತದೆ ಮತ್ತು ಅದು ಬಿಜೆಪಿಗೆ ಲಾಭವಾಗುತ್ತದೆ. ಮಲ್ಲೇಶ್ವರಂ ಇನ್ಸ್‌ಪೆಕ್ಟರ್ ಶ್ರೀನಿವಾಸ್, ಎಸಿಪಿ ಅಜ್ಜಪ್ಪ ಮತ್ತು ಡಿಸಿಪಿ ದೇವರಾಜ್ ಕಂಡೂ ಕಾಣದಂತೆ ತೆಪ್ಪಗಾದರು. ಪೊಲೀಸ್ ಮೂಲಗಳೇ ಹೇಳುವಂತೆ ಇದರ ಹಿಂದಿದ್ದದ್ದು ಹಾಲಿ ಬಿಜೆಪಿ ಸಂಸದ ಪಿ.ಸಿ. ಮೋಹನ್.

ಪಿ.ಸಿ. ಮೋಹನ್......!

ಬಾಂಬ್ ನಾಗನ ಕ್ರಿಮಿನಲ್ ಹಾವಳಿಯ ಹಿಂದೆ ಬಿಜೆಪಿಯ ಕುಮ್ಮಕ್ಕು ಸಾಬೀತಾಯಿತು ಎಂಬಂತೆ ಬಾಂಬ್ ನಾಗ ಪಿ.ಸಿ. ಮೋಹನ್ ಹುಟ್ಟುಹಬ್ಬಕ್ಕೆ ಶುಭಾಷಯ ಕೋರಿ ಗಾಂಧಿನಗರದುದ್ದಕ್ಕೂ ಫ್ಲೆಕ್ಸು, ಬ್ಯಾನರ್‌ಗಳನ್ನು ಹಾಕಿಸಿದ. ಅದಕ್ಕೂ ಮುನ್ನ ನಡೆದ ಬಿಬಿಎಂಪಿ ಎಲೆಕ್ಷನ್ನಿನಲ್ಲಿ ಜೆಡಿಎಸ್ ತೊರೆದು ಪಕ್ಷೇತರನಾಗಿಯೇ ನಿಂತ. ತನ್ನ ವತಿಯಿಂದ ಕಣಕ್ಕಿಳಿಸಿದ್ದ ಏಳೂ ಮಂದಿ ಅಭ್ಯರ್ಥಿಗಳನ್ನು ಪಕ್ಷೇತರರಾಗೇ ನಿಲ್ಲಿಸಿದ್ದ!

ಯಾವತ್ತು ಗೋವಿಂದರಾಜು ಮೇಲೆ ಅಟ್ಯಾಕ್ ಮಾಡಿ ಸಲೀಸಾಗಿ ನಾಗ ಬಚಾವಾದನೋ ಆತನ ಹಾವಳಿ ದುಪ್ಪಟ್ಟಾಯಿತು. ಸುಭಾಶ್ ನಗರದ ಕೌನ್ಸಿಲರ್ ಮಲ್ಲೇಶ್‌ಗೇ ಧಮಕಿ ಹಾಕಿ ತನಗೆ ಪ್ರತಿ ತಿಂಗಳೂ ರೋಲ್‌ಕಾಲ್ ಮಡಗು ಎಂದ. ಇದಕ್ಕೆ ಮಲ್ಲೇಶ್ ಜಗ್ಗದೇ ಹೋದಾಗ ಸುಭಾಶ್ ನಗರ ವಾರ್ಡಿನ ಎಲ್ಲಾ ಕಾಮಗಾರಿಗಳೂ ಅಕ್ರಮ ಎಂದು ಸುಳ್ಳುಸುಳ್ಳೇ ಬೊಬ್ಬೆಯಿಟ್ಟು ಲೋಕಾಯುಕ್ತಕ್ಕೆ ದೂರು ಕೊಟ್ಟ. ಅಣ್ಣಾ ಹಜಾರೆ ಬೆಂಬಲಿಗರು ಫ್ರೀಡಂ ಪಾರ್ಕಿನಲ್ಲಿ ನಡೆಸುತ್ತಿದ್ದ ಧರಣಿಗೆ ಹೋಗಿ ತಾನೂ ಗಾಂಧಿ ಟೋಪಿ ಧರಿಸಿ ಪೋಜು ಕೊಟ್ಟ. ಆತನ ಟಾರ್ಗೆಟ್ ಇದ್ದದ್ದು

....9

ಸಂಗಮ್ ಥೇಟರ್ ಕಾಂಪ್ಲೆಕ್ಸ್ ಮತ್ತು ಪಾಖಂಡಿ ಚಂದ್ರಪ್ಪ

ಕಾಂಗ್ರೆಸ್ ಮತ್ತು ದಿನೇಶ್ ಗುಂಡೂರಾವ್ ಉಸಾಬರಿಯ ಹೊರತಾಗ್ಯೂ ನಟರಾಜ್‌ಗೆ ಕರಾಳ ಮುಖವೊಂದಿತ್ತು. ಮಲ್ಲೇಶ್ವರಂನ ತರಕಾರಿ ಮಾರುಕಟ್ಟೆಯಲ್ಲಿ ಮಳಿಗೆಯಿಟ್ಟಿದ್ದ ಸೀನ ಎಂಬಾತನನ್ನು ತನಗೆ ಸೊಪ್ಪು ಹಾಕಲಿಲ್ಲ ಎಂಬ ಒಂದೇ ಕಾರಣಕ್ಕೆ ರೌಡಿಗಳನ್ನು ಛೂಬಿಟ್ಟು ಖಾಲಿ ಮಾಡಿಸಿದ್ದ. ಮೀಟರ್ ಬಡ್ಡಿಯಲ್ಲೂ ಆತನದು ಪಳಗಿದ ಕೈ. ತಮ್ಮ ಸೆಲ್ವಂ ಎಂಬಾತನ ಮೂಲಕ 20 ಪರ್ಸೆಂಟ್ ಬಡ್ಡಿಗೆ ಬಿಡುತ್ತಿದ್ದ. ಸಾಲಗಾರರನ್ನು ತಂದು ತನ್ನ ಮಾರ್ಕೆಟ್ ಅಡ್ಡೆಯಲ್ಲೇ ಥಳಿಸುತ್ತಿದ್ದ.

ಮೀಟರ್ ಬಡ್ಡಿ ವಿಷಯದಲ್ಲಿ ವೈಯಾಲಿಕಾವಲ್‌ನ ನಾಲ್ವರು ರೊಕ್ಕಸ್ಥ ರೆಡ್ಡಿಗಳೊಂದಿಗೆ ದುಷ್ಮನಿ ಸೃಷ್ಟಿಸಿಕೊಂಡ. ಈ ಪೈಕಿ ಯಾರೋ ಒಬ್ಬನಿಗೆ ಆತ ಕೋಟಿ ಮೊತ್ತದ ಸಾಲ ಕೊಟ್ಟಿದ್ದ ಅದೇ ಆತನಿಗೆ ಮುಳುವಾಯಿತೆ?

ನಟರಾಜ್ ದೊಡ್ಡಮಟ್ಟದಲ್ಲಿ ಕಾಟಕ್ಕಿಳಿದದ್ದು ಪಾಲಿಕೆಯ ಖದೀಮ ಕಂಟ್ರಾಕ್ಟರ್ ಚಂದ್ರಪ್ಪನ ವಿರುದ್ಧ. ನಟರಾಜ್ ವ್ಯಾಪ್ತಿಗೆ ಬರುವ ಮೆಜೆಸ್ಟಿಕ್‌ನಲ್ಲಿ ಈ ಹಿಂದೆ ಗುಪ್ತಾ ಮಾರ್ಕೆಟ್ ಇದ್ದ ಜಾಗವನ್ನು ಸರಿಸುಮಾರು 400 ಕೋಟಿ ತೆತ್ತು ಖರೀದಿಸಿದ್ದು ಇದೇ ಚಂದ್ರಪ್ಪ ಪಾಲಿಕೆ ಕಂಡ ಪಾಖಂಡಿ ಕಂಟ್ರಾಕ್ಟರ್‌ಗಳ ಪೈಕಿ ಗಿಲಿಗಿಲಿ ವೆಂಕಟೇಶನನ್ನು ಬಿಟ್ಟರೆ ಚಂದ್ರಪ್ಪನೇ ಅನಾಹುತಕಾರಿ. ಮಾಡಿದ ಯಾವ ಕಾಮಗಾರಿಯೂ ಈತನಕ ಬರಕತ್ತಾಗಿಲ್ಲ. ತನ್ನ ಅಕ್ರಮ ಕಾಮಗಾರಿಗಳ ವಿರುದ್ಧ ಯಾರೇ ಸೊಲ್ಲೆತ್ತಿದರೂ ಅಂಥವರ ವಿರುದ್ಧ ರೌಡಿಗಳನ್ನು ಛೂ ಬಿಡದೇ ಸುಮ್ಮನಿರುವವನಲ್ಲ.

ಇಂಥ ಚಂದ್ರಪ್ಪ ಇತ್ತೀಚೆಗೆ ಮೆಜೆಸ್ಟಿಕ್‌ನ ಸಂಗಮ್ ಥೇಟರ್ ಕಾಂಪ್ಲೆಕ್ಸ್ ಅನ್ನು 300 ಕೋಟಿಗೆ ಖರೀದಿಸಿದ. ಒಂದು ಮೂಲದ ಪ್ರಕಾರ ಮಂಡ್ಯದ ಸಂಸದ ಮತ್ತು ಜೆಡಿಎಸ್ ನಾಯಕ ಚಲುವರಾಯಸ್ವಾಮಿ ಮತ್ತು ಸಮಾಜ ಕಲ್ಯಾಣ ಮಂತ್ರಿ ನಾರಾಯಣ ಸ್ವಾಮಿ ಕೂಡ ಇದರ ಪಾಲುದಾರರು. ಸಂಗಮ್ ಥೇಟರ್ ಮಾತ್ರವಲ್ಲದೇ ಅದರ ಹಿಂದಿರುವ ಕಾಮತ್ ಹೋಟೆಲ್, ಅಣ್ಣಮ್ಮ ದೇವಸ್ಥಾನದ ಸುತ್ತಮುತ್ತಲ ಕಟ್ಟಡಗಳಲ್ಲಿದ್ದವರನ್ನೆಲ್ಲ ರೌಡಿಗಳನ್ನು ಬಿಟ್ಟೇ ಚಂದ್ರಪ್ಪ ಖಾಲಿ ಮಾಡಿಸಿದ್ದ. ಆದರೆ ಈ ಜಾಗದಲ್ಲಿ ಕಾಂಪ್ಲೆಕ್ಸ್ ಕಟ್ಟಿಸಬೇಕೆಂದರೆ ಅದಕ್ಕೆ ಪಾಲಿಕೆಯಿಂದ ನಕ್ಷೆ ಮಂಜೂರಾಗಬೇಕು. ಜೊತೆಗೆ ಸಂಬಂಧಪಟ್ಟ ಕೌನ್ಸಿಲರ್‌ನ ಸಮ್ಮತಿ ಬೇಕು.

ಇಂಥದೊಂದು ಅಪ್ರೂವಲ್ ಎಂದರೇನೇ ಅದು ಕೋಟಿ ಲೆಕ್ಕದ ವ್ಯವಹಾರ. ನಟರಾಜ್ ಅದೆಷ್ಟು ಲಂಚಕ್ಕೆ ಡಿಮ್ಯಾಂಡ್ ಇಟ್ಟಿದ್ದನೊ? ರೋಸತ್ತ ಚಂದ್ರಪ್ಪ ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಅದ್ಯಾವ ರೌಡಿಗೆ ಸುಪಾರಿ ಕೊಟ್ಟನೋ? ಅಥವಾ ದಿವಾನಾ ಆಲಿಯ ಹತ್ಯೆಯಿಂದ ಉಪಚುನಾವಣೆ ಬಂದು ಇನ್ನಾರೋ ಗೆದ್ದು ಕೌನ್ಸಿಲರ್ ಆದ ಹಾಗೆ ಇಲ್ಲೂ ಅದನ್ನೇ ನಿರೀಕ್ಷಿಸಿ ಸುಪಾರಿ ಕೊಟ್ಟಿರಬಹುದೆ? ಹಾಗೇ ಸುಪಾರಿ ಪಡೆದವರು ತಮ್ಮ ಉದ್ದೇಶಕ್ಕೆ ನಟರಾಜ್ ಯಾರ್‍ಯಾರಿಗೆ ಕಿರುಕುಳ ನೀಡುತ್ತಿದ್ದನೋ ಅವರೆಲ್ಲರನ್ನೂ ಬಳಸಿಕೊಂಡಿರಬಹುದಾ?

ಯಾವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಇದಲ್ಲದೇ ನಟರಾಜ್‌ಗಿದ್ದ ಮತ್ತೊಂದು ಖಯಾಲಿಯೆಂದರೆ ಅದು ಹೆಣ್ಣುಬಾಕತನ. ರಾಜಾಜಿನಗರದ ಬಸವೇಶ್ವರ ಕಾಲೇಜ್ ಬಳಿ ಒಬ್ಬಾಕೆ ಹುಡುಗಿಯರ ಹಾಸ್ಟೆಲ್ ನಡೆಸುತ್ತಾಳೆ. ಅಲ್ಲಿಂದ ಹೊತ್ತಲ್ಲದ ಹೊತ್ತಲ್ಲಿ ನಟರಾಜ್ ಹುಡುಗಿಯರನ್ನು ಕರೆದೊಯ್ಯುತ್ತಿದ್ದ. ಶೇಷಾದ್ರಿಪುರದ ಫೈವ್‌ಲೈನ್ ರಸ್ತೆಯ ಹೆಂಗಸೊಬ್ಬಳ ಮನೆಯಲ್ಲಿ ಆಗಾಗ ಪ್ರತ್ಯಕ್ಷನಾಗುತ್ತಿದ್ದ. ಅವಕ್ಕಿಂತಲೂ ನಟರಾಜ್ ಹೆಚ್ಚು ಹೊತ್ತು ಕಳೆಯುತ್ತಿದ್ದದ್ದು ಸುಬ್ರಹ್ಮಣ್ಯಪುರದ ವಿಚ್ಛೇದಿತ ಚೆಲುವೆಯೊಬ್ಬಳ ಮನೆಯಲ್ಲಿ!


ಇನ್ನೂ 35 ರ ಪ್ರಾಯದ ಆ ಹೆಂಗಸಿನ ಬಗ್ಗೆ ನಟರಾಜ್ ಸಿಕ್ಕಾಪಟ್ಟೆ ತಲೆಕೆಡಿಸಿಕೊಂಡಿದ್ದ. ಸಮಸ್ಯೆಯಿದ್ದದ್ದು ಆಕೆಗೊಬ್ಬ ಮಾಜಿ ಪ್ರಿಯಕರನಿಂದ. ಆತ ಪಕ್ಕಾ ಕ್ರಿಮಿನಲ್ ಮತ್ತು ಹಳೇ ರೌಡಿ. ತನ್ನ ಪ್ರೇಯಸಿಯನ್ನು ಕೌನ್ಸಿಲರ್ ನಟರಾಜ್ ದುಡ್ಡಿನ ರುಚಿ ತೋರಿಸಿ ಪಟಾಯಿಸಿದ್ದನ್ನು ಆತನಾದರೂ ಹೇಗೆ ಸಹಿಸಿಯಾನು? ಬಹುಶಃ ಆತನೇ ಸುಪಾರಿ ಕೊಟ್ಟು ನಟರಾಜ್‌ಗೊಂದು ಗತಿ ಕಾಣಿಸಿಬಿಟ್ಟನಾ?

ಈ ಪೈಕಿ ಯಾವ ಮೂಲದಿಂದ ನಟರಾಜ್ ಪ್ರಾಣಕ್ಕೆ ಕುತ್ತೊದಗಿರಬಹುದು?

ಮುಂಡಗೋಡ: ಶಾಸಕ ಪಾಟೀಲ್ ಬಂಟ ಬಸನಗೌಡರ್ ಭಾನ್ಗಡಿಗಳು!

ಉತ್ತರ ಕನ್ನಡದ ಮುಂಡಗೋಡ ತಾಲ್ಲೂಕಿಗೆ ಅದೇನು ಗ್ರಹಚಾರವೋ ಏನೋ? ಅಲ್ಲಿಂದಿಲ್ಲಿಗೂ ಬಡತನ-ಬರ-ಬುರ್ನಾಸ್ ರಾಜಕಾರಣ ಮತ್ತು ಭ್ರಷ್ಟ ಅಧಿಕಾರಿಗಳ ಆಡುಂಬೋಲದಂತಾಗಿರುವ ಈ ಮುಂಡಗೋಡಿಗೆ ಈಗಂತೂ ಶಾಸಕ ವಿ.ಎಸ್. ಪಾಟೀಲನೇ ಶಾಪದಂತಾಗಿ ಹೋಗಿದ್ದಾನೆ! ಅಭಿವೃದ್ಧಿ ಹೆಸರಲ್ಲಿ ಹಗಲು ದರೋಡೆ ಆಗಿದೆಯೇ ಹೊರತು ಊರು ಉದ್ಧಾರವೇನಾಗಿಲ್ಲ, ಸರ್ಕಾರಿ ಕಚೇರಿಗಳು ಲೇವಾದೇವಿ ಅಡ್ಡೆಯಂತಾಗಿ ಜನಸಾಮಾನ್ಯರ ಸತಾಯಿಸುತ್ತಿವೆ. ಸರ್ಕಾರಿ 'ಕರ್ಮ'ಚಾರಿಗಳ ಟೀಮಿಗೆ ಈ ಎಮ್ಮೆಲ್ಲೆ ಪಾಟೀಲನೇ ಕ್ಯಾಪ್ಟನ್!!

ಮುಂಡಗೋಡ-ಯಲ್ಲಾಪುರದ ಶಾಸಕ ವಿ.ಎಸ್. ಪಾಟೀಲ್ ಕ್ಷೇತ್ರಾಭಿವೃದ್ಧಿಗೆಂದು ಅತಿಹೆಚ್ಚು ಸರ್ಕಾರಿ ಅನುದಾನ ಪಡೆದಿರುವ ರಾಜ್ಯದ ಶಾಸಕರಲ್ಲೇ ನಂಬರ್ ಟೂ ಎಂಬ 'ಹೆಗ್ಗಳಿಕೆ'ಗೆ ಪಾತ್ರನಾಗಿದ್ದಾನೆ. ಮುಂಡಗೋಡ ಮಾತ್ರ ದಾರಿದ್ರ್ಯದಲ್ಲೇ ಚಡಪಡಿಸುತ್ತಿದೆ. ಆದರೆ ಈ ಅನುದಾನ ದಿವಾಳಿಕೋರ ಪಾಟೀಲನ ದೆಸೆ ಬದಲಾಯಿಸಿಬಿಟ್ಟಿದೆ. ಶಾಸಕನಾಗುವ ಮುಂಚೆ ಸಣ್ಣ-ಪುಟ್ಟ ಸರ್ಕಾರಿ ಕಂಟ್ರಾಕ್ಟರಿಕೆ ಮಾಡಿಕೊಂಡಿದ್ದ ಪಾಟೀಲ ಇವತ್ತು ಭರ್ಜರಿ ಜೀರ್ಣೋದ್ಧಾರ ಕಂಡಿದ್ದಾನೆ. ಸ್ವಂತ ಹಳ್ಳಿ ಅಂದಲಗಿಯಲ್ಲಿದ್ದ ಹಳೆ ಮನೆ ಕೆಡವಿ ಹೊಸ ಆಧುನಿಕ ಬಂಗಲೆ ಕಟ್ಟಿಸಿದ್ದಾನೆ.


ಎಮ್ಮೆ[illegible] ಪಾಟೀಲ್

ಎಮ್ಮೆಲ್ಲೆ ಪಾಟೀಲನ ಪರ್ವದ ಕೋಟಿ-ಕೋಟಿ ರೂಪಾಯಿ ಪ್ರಗತಿ ಒಂದೇ ಫೈಲಲ್ಲಷ್ಟೇ ಆಗಿದೆ; ಅಥವಾ ಕಳಪೆ-ಬೋಗಸ್ ಕೆಲಸ-ಕಾಮಗಾರಿಗಳಲ್ಲಾಗಿವೆ. ಶಾಸಕ ಸಾಹೇಬರೇ ಅಷ್ಟೂ ಕಾಮಗಾರಿಗೆ ಬೇನಾಮಿ ಗುತ್ತಿಗೆದಾರ. ಆತ ಹೇಳಿದ ಮೂರ್ನಾಲ್ಕು ಮಂದಿಗಷ್ಟೇ ಎಲ್ಲ ಕಾಮಗಾರಿ ಹಂಚಲ್ಪಡುತ್ತವೆ. ಪಾಟೀಲರ ಕ್ರಿಮಿನಲ್ ಪುತ್ರರತ್ನ ಪಾಪು ಪಾಟೀಲ, ಪಿಎ ಭಾಡ್ಕರ್ ಸಹೋದರ ಮತ್ತು ಸಜ್ಜನ ಶೆಟ್ಟರ್ ಸಕಲ ಕಾಮಗಾರಿ ಗಿಟ್ಟಿಸಿ ಕೊಳ್ಳೆ ಹೊಡೆಯುತ್ತಿದ್ದಾರೆ. ತನ್ನ ಹೊಲದಲ್ಲಿನ ಕೆರೆಯನ್ನು ಸರ್ಕಾರಿ ಹಣದಿಂದ ಹೂಳೆತ್ತಿಸಿಕೊಂಡಿರುವ ಪಾಟೀಲ ಮಾಮಾ ದಲಿತರಿಲ್ಲದ ತನ್ನೂರಲ್ಲಿ ಎಸ್ಸಿ ಅಭಿವೃದ್ಧಿ ಯೋಜನೆ ಹಾಕಿಸಿಕೊಂಡು ಗಂಡಾಗುಂಡಿ ಮಾಡಿದ್ದಾನೆ!

ಯಡ್ಡಿಯ ಲಿಂಗಾಯತ ಶಾಸಕರ ಲಾಬಿಯಲ್ಲಿರುವ ಪಾಟೀಲ ಜಾತಿ ತಂತ್ರಗಾರಿಕೆಯಿಂದಲೇ ಹೆಚ್ಚೆಚ್ಚು ಅನುದಾನ ಹೊಡೆದಿದ್ದಾನೆ. ಪ್ರಗತಿಯ ಹೆಸರಲ್ಲಿ ಹೆಚ್ಚು ಹಣ ಬಂದಂತೆ ಅದೇ ಅನುಪಾತದಲ್ಲಿ ಪಾಟೀಲರಿಗೂ ಪರ್ಸೆಂಟೇಜ್-ಕಮಿಷನ್-ಕಿಕ್‌ಬ್ಯಾಕ್ ಸಂದಾಯವಾಗಿದೆ. ಪಾಟೀಲರ ಪರಮಾಪ್ತ ತಾಲ್ಲೂಕ್ ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಬಸನಗೌಡರ್ ಉದ್ಯೋಗ ಖಾತ್ರಿಯೋಜನೆಯಲ್ಲಿ ಖಾತ್ರಿ ಭ್ರಷ್ಟಾಚಾರ ಮಾಡಿ ಬಡ ರೈತ-ಕೂಲಿಗಳ ಗೋಳು ಹೊಯ್ದುಕೊಂಡಿದ್ದಾನೆ. ಎಮ್ಮೆಲ್ಲೆ ಪಾಟೀಲನ ಕಲೆಕ್ಷನ್ ಏಜೆಂಟನೆಂದೇ ಕುಖ್ಯಾತನಾಗಿರುವ ಬಸನಗೌಡರ್ ಮಾಡಿರುವ ಅವ್ಯವಹಾರ-ಅವಾಂತರ-ಅನಾಚಾರ ಒಂದೆರಡಲ್ಲ.

ಗೋಲ್‌ಮಾಲ್ ಗೌಡರ್

ಬಸನಗೌಡರ್ ಮೊದಲೇ ಅಡ್ಡಕಸುಬಿ. ಅರಣ್ಯ ಇಲಾಖೆಯಲ್ಲಿ ರೇಂಜರ್ ಆಗಿದ್ದಾಗಲೇ ಈತನ ಅಕ್ರಮ-ಅರಣ್ಯ ಕಳ್ಳತನಗಳೆಲ್ಲ ಜಗತ್ಪ್ರಸಿದ್ಧವಾಗಿದ್ದವು. ಶಾಸಕ ಪಾಟೀಲರ ಕೃಪೆಯಿಂದ ಮುಂಡಗೋಡಿನ ತಾಪಂ ಕಾರ್ಯನಿರ್ವಹಣಾಧಿಕಾರಿಯಾಗಿ ವಕ್ಕರಿಸಿದ ಮೇಲೆ ಈತನ ದಗಲುಬಾಜಿ ದಂಧೆಗಳು ದುಪ್ಪಟ್ಟಾಗಿ ಹೋಯ್ತು. ಮುಂಡಗೋಡದಲ್ಲಿ ಆರ್‌ಎಫ್‌ಓ ಆಗಿದ್ದಾಗ ಕಾಡುಗಳ್ಳರ ಜೊತೆ ಬಸನಗೌಡರ್‌ಗೆ ನಿಕಟ ನಂಟಿತ್ತು. ಈತ ಭರ್ಜರಿ ಸಾಗುವಾನಿ ತುಂಡುಗಳನ್ನು ಕಾನೂನುಬಾಹಿರವಾಗಿ ಲಾರಿ ಏರಿಸಿ ರಾಯಚೂರಿಗೆ ಕದ್ದು ಸಾಗಿಸಿದ್ದು ಅಂದು ಮುಂಡಗೋಡಲ್ಲಿ ದೊಡ್ಡ ಸುದ್ದಿಯಾಗಿತ್ತು. ಧಾರವಾಡ-ಕಲಘಟಗಿಗೆ ಸಾಗುವಾನಿ ಮತ್ತು ಬೀಟೆ ಕಟ್ಟಿಗೆ ಕಳ್ಳಸಾಗಾಣಿಕೆ ಮಾಡಿದ್ದೂ ಅರಣ್ಯ ಇಲಾಖೆಯಲ್ಲೇ ಅಲ್ಲೋಲ ಕಲ್ಲೋಲ ಎಬ್ಬಿಸಿತ್ತು. ಅಂತೂ ಕಳ್ಳಬಸವನಗೌಡರ್‌ಗೆ ಮುಂಡಾಗೋಡಿಂದ ಎತ್ತಂಗಡಿಯೂ ಆಗಿತ್ತು. ಆಗ ಅರಣ್ಯ ಲೂಟಿಗೂ ಅಂಕುಶ ಬಿದ್ದಿತ್ತು.


ಆದರೆ ಎಸಿಎಫ್ ಆಗಿ ಪ್ರಮೋಷನ್ ಆಗುತ್ತಲೇ ಬಸನಗೌಡರ್ ಕಣ್ಣು ಮೇಯಲು ತುಂಬ ಪ್ರಶಸ್ತವಾದ ಮುಂಡಗೋಡಿನ ಜಾಗದ ಮೇಲೇ ಬಿತ್ತು. ಶಾಸಕ ಪಾಟೀಲರಿಗೆ ಜಾತಿ ಆಧಾರದಲ್ಲಿ ಹತ್ತಿರನಾಗಿದ್ದ ಈ ಲಿಂಗಾಡಿ ಪುಂಡಣ್ಣ ತಾಪಂ ಎಕ್ಸಿಕ್ಯೂಟಿವ್ ಆಫೀಸರ್ ಆಗಿ ಮತ್ತೆ ಮುಂಡಗೋಡಿಗೆ ವಕ್ಕರಿಸಿಬಿಟ್ಟ! ಪೊಲೀಸ್ ಗತ್ತು-ಗಲಾಟೆಯ ಗೌಡರ್ ಗಾಡ್‌ಫಾದರ್ ಶಾಸಕ ಪಾಟೀಲ್ ಸಾಹೇಬರ ಬಿಟ್ಟು ಇನ್ನಾವ ಜನಪ್ರತಿನಿಧಿಗೂ ಕೇರ್ ಮಾಡದೆ ಅಂಧ ದರ್ಬಾರು ಶುರುಹಚ್ಚಿಕೊಂಡು ಬಿಟ್ಟಿದ್ದರು. ಸದಾ ಹುಬ್ಬಳ್ಳಿಯಲ್ಲೇ ಕಾಲ ಕಳೆವ ಗೌಡರ್ ಮುಂಡಗೋಡಿಗೆ ಬರುವುದು ಯಾವುದಾದರೂ ಬಿಲ್ ಇದ್ದರೆ ಪಾಸ್ ಮಾಡಲಿಕ್ಕಷ್ಟೇ!

ತಾಪಂ ವ್ಯಾಪ್ತಿಗೆ ಬರುವ ಐದಾರು ಇಲಾಖೆಯ ಮುಖ್ಯಸ್ಥರನ್ನೇ ಪಳಗಿ ಹಿಡಿತದಲ್ಲಿಟ್ಟುಕೊಂಡಿದ್ದ ಗೌಡರ್‌ಗೆ ಆ ಇಲಾಖೆಗಳ ಖರೀದಿ-ಯೋಜನೆಗಳಲ್ಲೆಲ್ಲ ಶೇ. 10 ಪರ್ಸೆಂಟೇಜ್ ಕೊಡಲೇಬೇಕು. ಇಲ್ಲದಿದ್ದರೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲು ಕೊಡದ ಅಧಿಕಾರಿಗಳ ಮಾನ ಹರಾಜು ಹಾಕುವುದು ಗ್ಯಾರಂಟಿ. ಮಾರ್ಚ್ ಬಂತೆಂದರೆ ತಾಲ್ಲೂಕಿನ 13 ಗ್ರಾಮ ಪಂಚಾಯತ್‌ನ ಪಿಡಿಓಗಳಿಗೆ ಸಂಕಟವೋ ಸಂಕಟ. ಸಾಹೇಬರಿಗೆ ಕಪ್ಪ ತಂದೊಪ್ಪಿಸಲೇಬೇಕು. ಇಲ್ಲದಿದ್ದರೆ ಶಿಕ್ಷೆಗೆ ಅಣಿಯಾಗಬೇಕು. ಈ ಸುಲಿಗೆಯಲ್ಲೇ ಹಲವು ಲಕ್ಷ ಗಳಿಸುವ ಗೌಡರ್ ಬಾಸ್ ಪಾಟೀಲರಿಗೆ ಮಾತ್ರ ಪಾಲೆಂದು ಕೊಡಲು ಮರೆಯುವುದಿಲ್ಲ.

ಸ್ವಾಹಾ ಖಾತ್ರಿ

ಮುಂಡಾಗೋಡ ತಾಲ್ಲೂಕಿನ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎಕ್ಸಿಕ್ಯೂಟಿವ್ ಆಫೀಸರ್ ಬಸನಗೌಡರ್ ಮಾಡಿರುವ ಅವ್ಯವಹಾರ-ಅವಾಂತರ ಇಡೀ ಜಿಲ್ಲೆಯಲ್ಲೇ ಜನಜನಿತವಾಗಿತ್ತು. ಈ ಯೋಜನೆಯಲ್ಲಿ ಕೆಲಸ ಮಾಡಿದ್ದ ಮುಗ್ಧ ರೈತ-ಕೂಲಿಗಳಿಗೆ ಬಸನಗೌಡನ ಭಂಡಾಟದಿಂದಾಗಿ ಪಗಾರು ಸಿಗದೆ ದೊಡ್ಡ ರಾದ್ಧಾಂತವೇ ಆಗಿತ್ತು. ರೈತರು ಹಲವು ದಿನ ಧರಣಿ-ಸತ್ಯಾಗ್ರಹ ಮಾಡಿ ತಮ್ಮ ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು. ಚೋರ ಅಧಿಕಾರಿಗಳ ವಿರುದ್ಧ ಸಿಡಿದೆದ್ದರು. ತನ್ನ ಹೊಣೆಗಾರಿಕೆ ಬೇರೆ ಇಲಾಖೆ ಅಧಿಕಾರಿಗಳ ಹೆಗಲಿಗೇರಿಸಿ ತಲೆ ತಪ್ಪಿಸಿಕೊಳ್ಳುವ ಕಲೆ ಕರಗತ ಮಾಡಿಕೊಂಡಿರುವ ಗೌಡರ ಈ ರೋಜಗಾರ್ ಭಾನ್ಗಡಿಯನ್ನು ಉಪಾಯವಾಗಿ ತೋಟಗಾರಿಕಾ ಇಲಾಖೆ ಮೇಲಾಕಿ ಅಟ್ಟಹಾಸ ಗೈದಿದ್ದರು. ಈತನ ಅಧಿಕಪ್ರಸಂಗದಿಂದಾಗಿ ಇವತ್ತಿಗೂ ರೈತರಿಗೆ ಹಣ ಮಾತ್ರ ಸಿಕ್ಕಿಲ್ಲ. ಪರದಾಡುತ್ತಿರುವ ಬಡ ಕೂಲಿಗಳು ಬಸನಗೌಡರ್‌ಗೆ ಹಿಡಿಶಾಪ ಹಾಕುತ್ತ ಕಚೇರಿಯಿಂದ ಕಚೇರಿಗೆ ಅಲೆಯುತ್ತಿದ್ದಾರೆ. ಶಾಸಕ ಪಾಟೀಲ್ ಸ್ವ-ಜಾತಿ ನಾಯಕಾಗ್ರೇಸ ಯಡ್ಡಿಗೆ ಭೋಪರಾಕ್ ಹಾಕುತ್ತ ಕಾಸು ಮಾಡುವ ಡ್ಯೂಟಿಯಲ್ಲಿ ಬಿಜಿಯಾಗಿದ್ದಾರೆ.

ತಾಲ್ಲೂಕಿನ ಎಲ್ಲ ಗ್ರಾಪಂ ವ್ಯಾಪ್ತಿಯ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಮತ್ತಿತರ ಅಭಿವೃದ್ಧಿ ಕಾಮಗಾರಿ ಯೋಜನೆಗಳಿಗೆ ಅನುಮೋದನೆ, ಕಾರ್ಯಾದೇಶ ನೀಡುವುದು ಮತ್ತು ಬಿಲ್ ಮಾಡುವ ಅಧಿಕಾರ ತಾಪಂ ಕಾರ್ಯನಿರ್ವಹಣಾಧಿಕಾರಿಗಳದು. ಈ ಪವರ್ ಗೌಡರ್ ಸ್ವಾಹಾ ಖಾತ್ರಿಗೆ ನಾಜೂಕಾಗಿ ಬಳಸಿಕೊಂಡಿದ್ದಾನೆ. ಕಾಮಗಾರಿ-ಯೋಜನೆ ಅನುಮೋದನೆ ಹಂತದಲ್ಲೇ ಕಂಟ್ರ್ಯಾಕ್ಟರ್‌ಗಳು-ರೋಜ್‌ಗಾರ್ ಯೋಜನೆಯ ಅನುಷ್ಠಾನಾಧಿಕಾರಿಗಳು ಇಓ ಸಾಹೇಬರಿಗೆ ಶೇ.8-10 ಕೊಡಲೇ ಬೇಕು. ಸಾಕ್ಷಾತ್ ಆಡಳಿತ ಪಕ್ಷದ ಲಿಂಗಾಯತ ಶಾಸಕನದೇ ಸಪೋರ್ಟ್ ಇರುವುದರಿಂದ ಗೌಡರ್ ಉಳಿದೆಲ್ಲ ಜನ ಪ್ರತಿನಿಧಿಗಳ ಕಡೆಗಣಿಸಿ ಕಲೆಕ್ಷನ್ ಮಾಡುತ್ತಿದ್ದಾನೆ.



ಬಸವನಗೌಡರ್

ಪರ್ಸೆಂಟೇಜ್ ಪರಾಕ್ರಮಿ

ಇಓ ಬಸನಗೌಡರ್‌ಗೆ ದುಡ್ಡೇ ಅಂತಿಮ ಗುರಿ. ಹಣವೊಂದು ಸಿಗುತ್ತದೆಂದರೆ ಆತ ಎಂಥ ಪಾತಕಕ್ಕೂ ಹೇಸುವುದಿಲ್ಲ. ಹೀಗಾಗಿ ತಾಲ್ಲೂಕಿನ ತಾಪಂ ಅಡಿಯಲ್ಲಿ ಬರುವ ಬಹುತೇಕ ಕಾಮಗಾರಿ ಕಳಪೆ ಆಗಿವೆ. ಎರಡೆರಡು ಬಿಲ್ ಕಾಮಗಾರಿಗಳಾಗಿವೆ; ಹಳೆ ಕೆಲಸಕ್ಕೆ ಸಿಮೆಂಟ್ ಸುಣ್ಣ-ಬಣ್ಣ ಬಳಿದು ಹೊಸದೆಂದು ಹಣ ದೋಚಲಾಗಿದೆ. ಕಾಮಗಾರಿ ಗುಣಮಟ್ಟ ಪರೀಕ್ಷಿಸಿಯೇ ಬಿಲ್ ಬಟಾವಡೆ ಮಾಡಬೇಕೆಂಬ ನಿಯಮವಿದೆ. ಆದರೆ ಯಥಾ ರಾಜ; ತಥಾ ಮಂತ್ರಿ ಎಂಬಂತೆ ಈತನ ಕೈಕೆಳಗಿನ ಅಭಿಯಂತರರೂ ಪಕ್ಕಾ ಗೋಲ್‌ಮಾಲ್ ಗಿರಾಕಿಗಳೇ. ಹೀಗಾಗಿ ಕಾಮಗಾರಿಯ ವಿಶ್ವಾಸಾರ್ಹತೆ ಚೆಕ್ ಮಾಡುವ ಗೋಜಿಗೆ ಯಾರೂ ಹೋಗೋದಿಲ್ಲ. ಪರೀಕ್ಷೆಗೆ ಹೋದರೆ ಭರ್ಜರಿ ಕಮಿಷನ್ ಅನ್ನು ಕಂಟ್ರ್ಯಾಕ್ಟರ್ ಕೊಡೋದಿಲ್ಲ.

ಮಂಡ್ಯ: ಶಾಸಕ ಎಂ.ಶ್ರೀನಿವಾಸ್‌ಗೆ ಟಿಕೆಟ್ ಕೈತಪ್ಪಲಿದೆಯೇ?

ಮಂಡ್ಯ ರಾಜಕಾರಣದಲ್ಲಿ ಹಲವು ಹೊಸ ಹೊಸ ಬೆಳವಣಿಗೆಗಳು ಮತ್ತು ಪಲ್ಲಟಗಳು ಜರುಗುತ್ತಿವೆ. ಕಟೌಟ್ ಮೂಲಕ ದಿನಕ್ಕೊಬ್ಬ ನಾಯಕ ತನ್ನ ಹೆಸರನ್ನು ಹಾಕಿಸಿಕೊಂಡು ಮೆರೆಯುತ್ತಿದ್ದಾನೆ. ಮುಂದಿನ ವಿಧಾನಸಭಾ ಚುನಾವಣೆಯು ಎಲ್ಲೋ ಇರುವಾಗಲೇ ಕೂಸು ಹುಟ್ಟುವುದಕ್ಕಿಂತ ಮೊದಲೇ ಕುಲಾವಿ ರೆಡಿಯಾಗಿಟ್ಟುಕೊಂಡವರಂತೆ ಆತುರಕ್ಕೆ ಬಿದ್ದಿರುವ ಕೆಲವರು ವಿವಿಧ ಪಕ್ಷಗಳಲ್ಲಿ ಮುಂದಿನ ಅಭ್ಯರ್ಥಿ ತಾನೇ ಎಂದು ಬಿಂಬಿಸುತ್ತಿದ್ದಾರೆ. ಇಂತಹವರ ಪಟ್ಟಿ ಹನುಮಂತನ ಬಾಲವನ್ನೂ ಮೀರಿಸುವಂತಿದೆ. ಆದರೆ ಮಂಡ್ಯದ ಹಾಲಿ ಜೆಡಿಎಸ್ ಎಮ್ಮೆಲ್ಲೆ ಎಂ.ಶ್ರೀನಿವಾಸ್ ಸತತ ಎರಡುಬಾರಿ ಆಯ್ಕೆಯಾಗಿದ್ದರೂ ಸಹ ಮುಂದಿನ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ತಪ್ಪಿಸುವ ಸಂಚೊಂದು ಜೆಡಿಎಸ್‌ನಲ್ಲೇ ಹುಟ್ಟಿರುವುದರಿಂದ ಹಾಲಿ ಶಾಸಕ ಎಂಎಸ್ ಗಡಗಡ ಎನ್ನತೊಡಗಿದ್ದಾರೆ!


ಶ್ರೀನಿವಾಸ್

ಎಂ.ಎಸ್.ಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ಸಿಗೋದು ಡೌಟ್ ಎಂಬುದು ಸದ್ಯಕ್ಕೆ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಹಬ್ಬುತ್ತಿರುವ ಸುದ್ದಿ. ಆದರೆ ಹಿಂದಿಗಿಂತಲೂ ಹೆಚ್ಚು ಕ್ಷೇತ್ರದಲ್ಲಿ ಹಿಡಿತ ಸಾಧಿಸಿರುವ ಶ್ರೀನಿವಾಸ್ ಇನ್ನೂ ಆಶಾಭಾವನೆ ಇಟ್ಟುಕೊಂಡಿದ್ದಾರೆ.


ಜೆಡಿಎಸ್‌ನಿಂದ ಮುಂದಿನ ಅಭ್ಯರ್ಥಿಗಳು:

ಅಶೋಕ್ ಜಯರಾಂ: ಮಂಡ್ಯ ಜಿಲ್ಲೆಯಲ್ಲಿ ಜನಪ್ರಿಯರಾಗಿದ್ದ ತನ್ನ ತಂದೆಯ ಹೆಸರನ್ನ ಈ ಯುವಕ ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾನೆ. ಈತ ಟಿಕೆಟ್‌ಗಾಗಿ ಮಾತ್ರವಲ್ಲದೆ ಚುನಾವಣೆಗೇ ತಯಾರಿ ನಡೆಸುತ್ತಿರುವಂತಿದೆ ಈತನ ವರಸೆ. ಅಶೋಕ್ ಜಯರಾಂ ಗ್ರಾಮೀಣಾಭಿವೃದ್ಧಿ ಸಂಸ್ಥೆಯಡಿ ಗ್ರಾಮಪಂಚಾಯ್ತಿ ಸದಸ್ಯರುಗಳ ತರಬೇತಿ, ಆರೋಗ್ಯ ಶಿಬಿರಗಳು, ಕ್ರೀಡಾ ಕೂಟಗಳು ಇತ್ಯಾದಿಗಳನ್ನು ಸಾಕಷ್ಟು ಅಬ್ಬರದಿಂದಲೇ ನಡೆಸುತ್ತಿದ್ದಾರೆ. ಆತನಿಗೆ ಬೆಂಬಲವಾಗಿ ಕೆಲವು ಹಳೆಯ ಜೆಡಿಎಸ್ ಪಂಟರುಗಳು ಮತ್ತು ಎಂಎಸ್ ವಿರೋಧಿಗಳು ಇದ್ದಾರೆ. ಚಲುವರಾಯಸ್ವಾಮಿ ತನ್ನ ಗುರುವಿನ ಋಣ ತೀರಿಸಲು ಅಶೋಕನನ್ನು ಬೆಂಬಲಿಸುತ್ತಿದ್ದಾನೆ ಎನ್ನಲಾಗುತ್ತಿದೆ.

ಡಾ. ಶಂಕರೇಗೌಡ: '5 ರೂ. ಡಾಕ್ಟರು' ಎಂದು ಹೆಸರುವಾಸಿಯಾದ ಈ ಚರ್ಮವೈದ್ಯನನ್ನು ಅಂಬರೀಷ್ ವಿರುದ್ಧ ಎಂಪಿ ಚುನಾವಣೆಗೇ ನಿಲ್ಲಿಸುವ ವದಂತಿ ಈ ಹಿಂದೆ ಕೇಳಿ ಬಂದಿತ್ತು. ಆದರೆ ಕಳೆದ ಜಿ.ಪಂ. ಚುನಾವಣೆಯಲ್ಲಿ ಇವರು ಕಣಕ್ಕಿಳಿದು ಗೆದ್ದೂ ಬಿಟ್ಟರು. ಸ್ಥಳೀಯ ಸಂಸ್ಥೆ ಚುನಾವಣೆಯ ಈ ಗೆಲುವನ್ನು ಬರಲಿರುವ ಎಂಎಲ್‌ಎ ಚುನಾವಣೆಗೆ ಮಾಡಿಕೊಂಡ ತಯಾರಿ ಎಂತಲೂ ಕೆಲವರು ಹೇಳುತ್ತಾರೆ.

ಗಾಣಿಗ ರವಿಕುಮಾರ್: ಬೆಂಗಳೂರು ಸಿಟಿ ಚಾನಲ್, ಕೇಬಲ್ ಮಾಫಿಯಾದಿಂದ, ಲ್ಯಾಂಡ್ ಮಾಫಿಯಾದಿಂದ ಸಾಕಷ್ಟು ಹಡಬೇ ದುಡ್ಡು ದುಡಿದುಕೊಂಡು ಬಂದಿದ್ದಾನೆ ಎನ್ನಲಾದ ರವಿಕುಮಾರ್ ಸದ್ಯಕ್ಕೆ ಮಂಡ್ಯದ ಕಟೌಟ್ ಖಳನಾಯಕ. ಬಸರಾಳು ಹೋಬಳಿಯ ಈ ಯುವಕ ಈಗ ಖರ್ಚು ಮಾಡುತ್ತಿರುವ ಪರಿ, ಜನರು ಈತನಿಂದ ಹಣ ಕೀಳುತ್ತಿರುವ ವರಸೆ ನೋಡಿದರೆ, ಚುನಾವಣೆ ಹೊತ್ತಿಗೆ ಉತ್ಸಾಹ ಉಳಿದುಕೊಂಡಿರುತ್ತದಾ ಎಂಬುದೇ ಡೌಟು.

ಎಂ.ಜೆ.ಚಿಕ್ಕಣ್ಣ: 'ಎಚ್.ಡಿ.ಕುಮಾರಸ್ವಾಮಿ ಅಭಿಮಾನಿ ಸಂಘ'ದ ಹೆಸರಿನಲ್ಲಿ ಕುಮಾರಣ್ಣನಿಗೆ ಮಸ್ಕಾ ಹೊಡೆದರೆ ಏನಾದರೂ ಗಿಟ್ಟುತ್ತದೆಂಬ ಪ್ರಯತ್ನ ಮಾಡುತ್ತಿರುವ ಚಿಕ್ಕಣ್ಣರೂ ಸದ್ಯ ರೇಸಿನಲ್ಲಿದ್ದಾರೆ. ಎಮ್ಮೆಲ್ಲೆ ಆಗದಿದ್ದರೆ ಎಮ್ಮೆಲ್ಸಿಯಾದರೂ ಸಿಗುತ್ತದೆ ಎಂಬುದು ಇವರ ಹುಚ್ಚು ಎಣಿಕೆ. 'ಚೆಲುವರಾಯಸ್ವಾಮಿ 50' ಕಾರ್ಯಕ್ರಮದ ಸಂದರ್ಭದಿಂದಲೂ ಈತನ ಪ್ರಯತ್ನ ನಡೆದಿತ್ತು. ಸದ್ಯಕ್ಕೆ ಮುಂದಿನ ಚುನಾವಣೆಯಲ್ಲಿ ಎಂಎಸ್‌ಗೆ ಟಿಕೆಟ್ ಕೈತಪ್ಪುವಂತೆ ಮಾಡುವುದನ್ನು ಈತ ತನ್ನ ಮೊದಲ ಅಜೆಂಡಾ ಮಾಡಿಕೊಂಡಿದ್ದಾನೆ.


ಚಿಕ್ಕಣ್ಣ


ಮೀರಾ

ಕೆ.ಎಸ್.ವಿಜಯಾನಂದ: ಕೆ.ವಿ.ಶಂಕರೇಗೌಡರ ಮೊಮ್ಮಗ ಜಿ.ಪಂ ಸದಸ್ಯ ವಿಜಯಾನಂದನೂ ಮುಂದಿನ ಎಮ್ಮೆಲ್ಲೆಯಾಗುವ ಆಕಾಂಕ್ಷಿ. ತನ್ನ ತಾತನ ಹೆಸರಿನ ಮೇಲೆ ರಾಜಕಾರಣ ಮಾಡುತ್ತಿರುವ ಈತ ಜೇಬಲ್ಲಿ ಹಣವಿಲ್ಲದ ಬಡಪಾಯಿ ಅಭ್ಯರ್ಥಿಯಾಗಿದ್ದಾನೆ. ಈಗಿನಿಂದ ಆಕಾಂಕ್ಷಿಗಳ

ಹಣವೇ ಮುಖ್ಯವಾಗಿರುವ ಇಓ ಗೌಡರ್ ಸಾಹೇಬರಿಗೆ ಕಾಮಗಾರಿ ಪ್ರಾಮಾಣಿಕವಾಗಿ-ಜನ ಪರವಾಗಿ ಆಗಬೇಕಂತೇನೂ ಇಲ್ಲ, ಹಣಕ್ಕಾಗಿ ಆತ ಸುಳ್ಳು ಕಾಮಗಾರಿ ದಾಖಲೆ ಸೃಷ್ಟಿಸಿರುವ ಕ್ರಿಮಿನಲ್ ಕೆಲಸಗಳು ಮುಂಡಗೋಡಿನ ಪ್ರತಿ ಹಳ್ಳಿಯಲ್ಲಿ ಕಾಣಿಸುತ್ತದೆ. ಅಟ್ಟಣಗಿ ಮತ್ತು ಬಾಚಣಕಿ ಎಂಬ ಹಳ್ಳಿಗಳ ಸರ್ಕಾರಿ ಶಾಲೆಯ ಒಂದೊಂದು ಕೋಣೆ ತಲಾ 30,000 ರೂ ವ್ಯಯಿಸಿ ಕಟ್ಟಿಸಲಾಗಿದೆ ಎಂಬ ದಾಖಲೆ ತಾಪಂನಲ್ಲಿದೆ. ಆದರೆ ಈ ಮೊತ್ತ ಸಂಪೂರ್ಣ ಸ್ವಾಹಾ ಬಸನಗೌಡರ್ ಅಂಡ್ ಕೋ ಮಾಡಿದೆ. ತಾಪಂನ ಆವರಣದಲ್ಲೇ ಹಳೆಯ ಪಕ್ಕಾ ಗಟಾರಕ್ಕೆ ಸಿಮೆಂಟ್ ಗಿಲಾಯ ಮಾಡಿರುವ ಇಓ ಬಸನಗೌಡರ್-ಶಾಸಕ ಪಾಟೀಲ್ ಪಟಾಲಂ ಹೊಸ ಗಟಾರ ನಿರ್ಮಿಸಲಾಗಿದೆ ಎಂದು ರೆಕಾರ್ಡ್ಸ್ ತಯಾರಿಸಿ ಬರೋಬ್ಬರಿ 4.90 ಲಕ್ಷ ಗುಳುಂ ಮಾಡಿದೆ!


ಇಂಥ ಕಳ್ಳ ಕಾಮಗಾರಿ ಸಾಲು-ಸಾಲಾಗಿ ಬಸನಗೌಡರ್ ಮಾಡಿದ್ದಾರೆ. ದೊಡ್ಡ ಮೊತ್ತದ ಕಿಕ್‌ಬ್ಯಾಕ್ ಕಿಸೆಗಿಳಿಸಿದ್ದಾರೆ. ಕುದುರೆನಾಲಾ, ನಾಗನೂರು, ಕೂಸುರ, ಕಳಕೀರಾ, ಬಡ್ಡಿಗೇಡಿ ಶಾಲೆಗಳ ಒಂದೊಂದು ಕೊಠಡಿಗಳ ರಿಪೇರಿಗೆಂದು 2.50 ಲಕ್ಷ ಮಂಜೂರು ಆಗಿತ್ತು. ಇದನ್ನೆಲ್ಲ ಸ್ವಲ್ಪ ಸುಣ್ಣ-ಬಣ್ಣ ಬಳಿದು ನುಂಗಲಾಗಿದೆ. ಇಂದೂರ ಬಾಲಕರ ವಸತಿ ನಿಲಯದ ಕಿಟಕಿ-ಬಾಗಿಲು ದುರಸ್ತಿ ನೆಪದಲ್ಲಿ 50 ಸಾವಿರ ಸ್ವಾಹಾ ಆಗಿದೆ. ಮುಂಡಗೋಡಿನ 17 ರಸ್ತೆಗಳ ದುರಸ್ತಿಗೆಂದು ಮಂಜೂರಾಗಿದ್ದ 10 ಲಕ್ಷ 80 ಸಾವಿರ ರೂ.ಗಳಲ್ಲಿ ನಾಲ್ಕು ರಸ್ತೆಗಳ ಕೆಲಸ ಏನೇನೂ ಮಾಡದೆ ಹಣ ಹೊಡೆದರೆ, ಉಳಿದ 13 ರಸ್ತೆಗಳ ರಿಪೇರಿ ನೆಪಕಷ್ಟೇ ಮಾಡಲಾಗಿದೆ. ಇದರಲ್ಲಿ ನಿಕ್ಕಿ 10 ಲಕ್ಷ ಇಓ ಗೌಡರ್-ಎಮ್ಮೆಲ್ಲೆ ಪಾಟೀಲರಿಗೆ ಲಾಭವಾಗಿದೆ ಎಂದು ಜನರಾಡಿಕೊಳ್ಳುತ್ತಿದ್ದಾರೆ. ಸಮುದಾಯ ಭವನಗಳು, ಅಂಗನವಾಡಿ ಕಟ್ಟಡಗಳು ಮತ್ತು ಕಾಂಕ್ರೀಟ್ ರಸ್ತೆ ಮುಂತಾದ ಕಾಮಗಾರಿಯ ಬರೋಬ್ಬರಿ 40.23 ಲಕ್ಷ ರೂ.ನಲ್ಲಿ ಮುಕ್ಕಾಲುಭಾಗ ಕಳ್ಳ ಆಳ್ವಿಕರ ಪಾಲಾಗಿದೆ. ಈ ಅವ್ಯವಹಾರದ ಬಗ್ಗೆ ತಾಲ್ಲೂಕಿನಲ್ಲಿ ಕೂಗೆದ್ದಾಗ ಇಓ ಗೌಡರ್ ಕೇಸನ್ನು ಯಶಸ್ವಿಯಾಗಿ ಮುಚ್ಚಿಹಾಕಿದ್ದಾರೆ. ಶಾಸಕನೇ ಬೆನ್ನಿಗಿರುವಾಗ ಗೌಡರ್‌ಗೆ ಯಾರ ಹೆದರಿಕೆ?

ಅಕ್ರಮ-ಅನ್ಯಾಯ-ಅನಾಚಾರದ ಬಗ್ಗೆ ನಿಷ್ಠುರ ತನಿಖೆಯಾದರೆ ಇಓ ಗೌಡರ್-ಎಮ್ಮೆಲ್ಲೆ ಪಾಟೀಲರ ಬಣ್ಣ ಬಯಲಾಗುವುದು ಗ್ಯಾರಂಟಿ. ಆದರೆ ಆಡಳಿತ ಪಕ್ಷದ ಶಾಸಕನ ವಿರುದ್ಧ ತನಿಖೆ ಮಾಡುವ ತಾಕತ್ತು ಯಾರಿಗಿದೆ? ಅತ್ತ ಪಕ್ಕದ ಶಿರಸಿ-ಸಿದ್ದಾಪುರದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಗ್ಯಾಂಗು ಇಂಥದ್ದೇ ದೋಖಾ ಅಭಿವೃದ್ಧಿ ಕಾಮಗಾರಿ ನಡೆಸುತ್ತಿರುವುದರಿಂದ ಆತನಿಗೂ ಖದೀಮ ಪಾಟೀಲನ ಪ್ರಶ್ನಿಸುವ ನೈತಿಕ ಧೈರ್ಯ ಇಲ್ಲದಾಗಿದೆ. ಆದರೆ ಇಓ ಗೌಡರ್ ತಾನಿನ್ನೂ ಮುಂಡಾಗೋಡ ತಾಪಂ ಕಾರ್ಯನಿರ್ವಾಹಕ ಕುರ್ಚಿಯಲ್ಲೇ ಇದ್ದರೆ ದೊಡ್ಡ ರಗಳೆಯಾಗುತ್ತದೆಂದು ಈಗ ಮುಂಡಗೋಡಿನ ಎಸಿಎಫ್ ಕುರ್ಚಿಗೆ ಶಾಸಕ ಪಾಟೀಲರ ಕೃಪೆಯಿಂದ ನೆಗೆದಿದ್ದಾರೆ. ಮುಂಡಗೋಡಿನ ಸಮೃದ್ಧ ಕಾಡಿಗಿನ್ನೂ ಗಂಡಾಂತರ ಗ್ಯಾರಂಟಿ ಎಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲೇ ಗುಸುಗುಸು ಎದ್ದಿದೆ.

ಬಸನಗೌಡರ್ ಮುಂಡಗೋಡಿನ ತಾಪಂನಲ್ಲಿರಲಿ ಇಲ್ಲವೇ ಅರಣ್ಯ ಇಲಾಖೆಯಲ್ಲಿರಲಿ ಶಾಸಕ ಪಾಟೀಲರಿಗೇನೂ ಹಾನಿ ಇಲ್ಲ ಬಿಡಿ. ಏಕೆಂದರೆ ಗೌಡರಿಂದ ಬರುವ ಮಾಮೂಲಿ ಪಾಟೀಲರಿಗೆ ಬಂದೇ ಬರುತ್ತದೆ. ಮುಂಡಗೋಡಿನ ತಾಪಂಗಿಂತ ಫಾರೆಸ್ಟ್ ಡಿಪಾರ್ಟ್‌ಮೆಂಟೇ ಫಲವತ್ತಾಗಿದೆ!

ದುರಾದೃಷ್ಟವೆಂದರೆ ಮುಂಡಾಗೋಡಿನ ಮಂದಿಯದು. ದರೋಡೆಕೋರ ಅಧಿಕಾರಿ-ಶಾಸಕರ ನಡುವೆ ಮುಂಡಾಗೋಡು ದಿಕ್ಕೆಟ್ಟುಹೋಗಿದೆ. ಶಾಸಕ ಪಾಟೀಲ ಮನೆಗೆ ಹೋಗದೇ ಮುಂಡಾಗೋಡಿಗೆ ಮುಕ್ತಿ ಖಂಡಿತಾ ಇಲ್ಲ!!

• ನಹುಷ



ಪಟ್ಟಿಯಲ್ಲಿದ್ದರೆ, ಇನ್ನೊಂದು 20 ವರ್ಷಕ್ಕಾದರೂ ಎಮ್ಮೆಲ್ಲೆ ಆಗಬಹುದೆಂಬುದು ಈ ಕೀಲಾರದ ಕುಡಿಯ ದೂರದಾಸೆ.

ಮೀರಾ ಶಿವಲಿಂಗಯ್ಯ: ಮಂಡ್ಯದ ಅನುಮಾನಾಸ್ಪದ ಕಪ್ಪುಹಣದ ಕುಳ ಮೀರಾ ಶಿವಲಿಂಗಯ್ಯರ ಹೆಸರೂ ಸಹ ಜೆಡಿಎಸ್‌ನಲ್ಲಿ ಕೇಳಿ ಬರುತ್ತಿರುವ ಮತ್ತೊಂದು ಕ್ಯಾಂಡಿಡೇಟ್ ಹೆಸರು. ಆದರೆ ಮಂಡ್ಯದಲ್ಲಿ ಇವರ ಜೊತೆ ಎನ್.ಜಿ.ಓ. ಸ್ಟಾಫ್‌ಗಳನ್ನು ಬಿಟ್ಟರೆ ಇತರೆ ಬೆಂಬಲಿಗರು ಅಂತಾ ಒಬ್ಬರೂ ಇಲ್ಲ. ಆದರೆ ಬಿಎಂಐಸಿ ರಸ್ತೆಗೆ ರೈತರ ಸಮಾಧಿ ಮೇಲೆ ರಸ್ತೆ ನಿರ್ಮಿಸಲು ಸಹಕರಿಸಿದ್ದಕ್ಕೆ ಭೂಗಳ್ಳ ಖೇಣಿಯಿಂದ ಕೋಟಿಗಟ್ಟಲೇ ಹಣ ಪಡೆದಿರುವ ಶಿವಲಿಂಗಯ್ಯನ ಹಣ ಮತ್ತು ಮೀರಾ; ಎನ್.ಜಿ.ಓ ಹೆಸರಿನಲ್ಲಿ ಸುಳ್ಳು ಲೆಕ್ಕ ನೀಡಿ ಸರ್ಕಾರಕ್ಕೆ ವಂಚಿಸಿರುವ ಕೋಟಿಗಟ್ಟಲೆ ಹಣವನ್ನೇ ಈ ದಂಪತಿಗಳು ನಂಬಿಕೊಂಡಿದ್ದಾರೆ.

ಕಾಂಗೈಗೆ ಗೆಲ್ಲುವ ಸಾಮರ್ಥ್ಯವಿರುವ ಅಭ್ಯರ್ಥಿಗಳ ಬರ ಇದೆ. ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಪುರಾತನ ಕಾಂಗೈಗ ಆತ್ಮಾನಂದ ಇದ್ದರೂ, ಜನರನ್ನ ಹಿಡಿದಿಡುತ್ತಿದ್ದ ಸಹೋದರ ಡಾ.ಸತ್ಯಾನಂದರ ವಿರುದ್ಧ ಆಸ್ತಿ ವಿಚಾರದಲ್ಲಿ ಕೋರ್ಟ್ ಮೆಟ್ಟಿಲನ್ನು ಹತ್ತಿದ್ದು ನೆಗೆಟಿವ್ ಪಾಯಿಂಟ್. ಹಾಗಾಗಿ ಆತ್ಮಾನಂದ ಸದ್ಯಕ್ಕೆ ಮಾಸು ಮತ್ತು ಬೇಸು ಇಲ್ಲದ ಪುರಾತನ ಅಭ್ಯರ್ಥಿ.

ಈ ಮಧ್ಯೆ ಅಂಬರೀಷ್ ಶ್ರೀರಂಗಪಟ್ಟಣದಲ್ಲಿ ಸೋತು, ಎಂಪಿ ಚುನಾವಣೆಯಲ್ಲಿ ಸತತ ಸೋಲಿನಿಂದ ಕಂಗೆಟ್ಟು, ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ನೆಲೆ ಕಂಡುಕೊಳ್ಳುವ ಪ್ರಯತ್ನ ಮಾಡುವ ಆಕಾಂಕ್ಷೆಯೊಂದಿಗೆ, ಈಗ 3-4 ತಿಂಗಳವರೆಗೆ ಮಂಡ್ಯದ ಕಾರ್ಯಕ್ರಮಗಳಲ್ಲಿ ಖಾಯಂ ಅತಿಥಿಯಾಗಿದ್ದರು. ಈ ಬಗ್ಗೆ 'ಲಂಕೇಶ್'ನಲ್ಲಿ ವರದಿ ಪ್ರಕಟವಾಗಿತ್ತು, ಆದರೆ ಈಚೆಗ್ಯಾಕೋ ಅಂಬರೀಷಪ್ಪ ಪತ್ತೆಯೇ ಇಲ್ಲ, ಹೀಗಾಗಿ ಮಂಡ್ಯದಲ್ಲೇನಿದ್ದರೂ ಜೆಡಿಎಸ್‌ಗೇ ಛಾನ್ಸ್ ಎಂಬುದೇ ಈ ಪಾಟ ಆಕಾಂಕ್ಷಿಗಳಿರಲು ಕಾರಣವಾಗಿದೆ.

- ಲಕ್ಷ್ಮಣ್ ಚೀರನಹಳ್ಳಿ

"ಮನುಷ್ಯ ಕತ್ತಲೆಗೆ ಒಗ್ಗಿಕೊಳ್ಳಬೇಕು ಗೊತ್ತುಂಟಾ"

ಕಾಂಗ್ರೆಸ್ ಪಕ್ಷ ನಿಷ್ಠಾವಂತ ಶ್ರಮಿಕ ನಾಯಕರಿಗೆ ಸೂಕ್ತ ಸ್ಥಾನಮಾನ ಕೊಟ್ಟು, ಸರಿಯಾಗಿ ನಡೆಸಿಕೊಳ್ಳಬೇಕೆಂದು ಬಂಗಾರಪ್ಪ ಕರೆಕೊಟ್ಟಿದ್ದಾರಂತಲ್ಲಾ, ಈ ಕಡೆಗೆ ಕಿವಿಗೊಟ್ಟ ಕಾಂಗ್ರೆಸ್ಸಿಗರು "ಬಂ ಸರಿಯಾಗಿಯೇ ಹೇಳಿದ್ದಾರೆ. ನಿಷ್ಠಾವಂತರೂ ಅಲ್ಲದ, ಶ್ರಮಿಕರೂ ಅಲ್ಲದ ಪಾರ್ಟಿ ಪೀಡೆಗಳನ್ನು ಎಲ್ಲಿಬೇಕೊ ಅಲ್ಲಿರಿಸಿದೆ. ಇದಕ್ಕೆ ತಕ್ಕ ಉದಾಹರಣೆ ಎಂದರೆ ಬಂ ಅವರ ಈಗಿನ ಸ್ಥಿತಿ" ಎಂದು ನಗಾಡಿದವಂತಲ್ಲಾ.

ಕಳೆದ ಶತಮಾನದಿಂದಲೂ ಕಾಂಗ್ರೆಸ್ಸಿನ ಕಾರ್ಯಕರ್ತರಾಗಿ ದುಡಿಯುತ್ತಿರುವ ಕಾಂಗ್ರೆಸ್ ತಿಮ್ಮಪ್ಪನಿಗೆ ಅಲ್ಲಲ್ಲ ಕಾಗೋಡು ತಿಮ್ಮಪ್ಪನಿಗೆ ಎಂಭತ್ತು ವರ್ಷ ತುಂಬಿದ ಸಭೆಗೆ ಹೋಗಿದ್ದ 'ಬಂ' ಇನ್ನೇನು ತಮಗೂ ಎಂಬತ್ತಾಗುವ ಸಮಯ ನೆನೆಸಿಕೊಂಡು ಜೆಡಿಎಸ್‌ನಲ್ಲೇ ಇರುವುದೊ, ಕಾಂಗ್ರೆಸ್ ಕಡೆಗೆ ಹೋಗುವುದೊ ಎಂಬ ಅಡ್ಡಗೋಡೆ ದೀಪದ ಮಾತನ್ನಾಡುತ್ತಿದ್ದಾರಂತಲ್ಲಾ, ಥೂತ್ತೇರಿ!

* * * *

ಥೂತ್ತೇರಿ
ಯಾಹೂ

ದಶಕಗಳಿಂದಲೂ ಕಾಂಗ್ರೆಸ್ ರಾಜಕಾರಣ ಮಾಡುತ್ತಿದ್ದರೂ ಶಿವಮೊಗ್ಗ ಜಿಲ್ಲೆಯ ಲೀಡರಾಗದೆ ಉಳಿದುಕೊಂಡಿರುವ ಕಾಗೋಡು ತಿಮ್ಮಪ್ಪ ಸ್ವತಃ ಸೋದರಳಿಯನ ವಿರುದ್ಧ ಎರಡು ಭಾರಿ ಸೋತ ಆಘಾತದಿಂದ ಸಭೆಯಲ್ಲೇ ಕುಸಿದು ಬೀಳುತ್ತಿದ್ದರೂ, ಜಿಲ್ಲೆಯಲ್ಲಿ ಕಾಂಗ್ರೆಸ್ ಕಟ್ಟುವ ಜನರನ್ನಾಗಲಿ, ನಾಯಕರನ್ನಾಗಲಿ ತಯಾರು ಮಾಡದೆ ಕುಸಿದು ಬೀಳುವ ಸ್ಥಿತಿಯಲ್ಲೇ ಕಾಂಗ್ರೆಸ್ಸನ್ನೂ ಇಟ್ಟಿದ್ದಾರಂತಲ್ಲಾ.

ಕಾಂಗ್ರೆಸ್‌ನ ಈ ಸ್ಥಿತಿ ನೋಡಿ ವಾರೆಯಾಗಿ ನಗುತ್ತಿರುವ 'ಬಂ' "ಸದ್ಯದ ಕರ್ನಾಟಕದ ಯಾವುದೇ ಸಮಸ್ಯೆಗೆ ಪರಿಹಾರವೆಂದರೆ ಕುಮಾರಣ್ಣ ಮುಖ್ಯಮಂತ್ರಿಯಾಗಬೇಕು, ಮಧು ಶಾಸಕನಾಗಬೇಕು, ವಸಂತೆ ಸೋಲಬೇಕು, ಹಾಗೆಯೇ ನಾನು ಪುನಃ ಶಿಕಾರಿಪುರದಲ್ಲಿ ನಿಂತು ಎಡೂರಪ್ಪನನ್ನು ಸೋಲಿಸಬೇಕು" ಎನ್ನುತ್ತಿದ್ದಾರಂತಲ್ಲಾ, ಇದನ್ನು ಕೇಳಿದ ಜೆಡಿಎಸ್‌ನ ಗುಲಾಮಿ ಸಂತತಿ ಬಿದ್ದುಬಿದ್ದು ನಗುತ್ತಿದೆಯಂತಲ್ಲಾ, ಥೂತ್ತೇರಿ!

* * * *

ಕಡೆಗಾಲದಲ್ಲಿ 'ಬಂ' ವಾಸವಾಗಿರುವ ಪಾರ್ಟಿಯ ಪ್ರಸಿಡೆಂಟರಾದ ಕುಮಾರಸ್ವಾಮಿಯವರು ಗಾಂಧಿ ಜಯಂತಿಯ ದಿವಸ ಗಾಂಧಿಯನ್ನು ನೆನೆಸಿಕೊಂಡು ಗಾಂಧಿ ಜಯಂತಿ ಪ್ರಯುಕ್ತ ಯಾವುದನ್ನೂ ಮುಟ್ಟುವಂತಿಲ್ಲವಲ್ಲ ಎಂಬುದು ಹೊಳೆದ ಕೂಡಲೇ "ಗಾಂಧೀಜಿ ದೇಹಕ್ಕೆ ಉತ್ತಮವಾದ ಡ್ರಿಂಕ್ಸ್ ಇದ್ದಂಗೆ. ನಿಜಕ್ಕೂ ಗಾಂಧೀತತ್ವದ ಟಾನಿಕ್ಕನ್ನು ನಾವು ನೀರು ಸೋಡಾ ಇಲ್ಲದೆ ಬರಿ ರಾ ಕುಡಿದರೆ ಸಾಕು ಆದರ್ಶ ಪುರುಷರಾಗುತ್ತೇವೆ" ಎಂದು ಪಾರ್ಟಿ ಆಫೀಸಿನಲ್ಲಿ ಕರೆಕೊಟ್ಟರಂತಲ್ಲಾ.

"ಇವತ್ತು ಏನು ಒಂದು ಗಾಂಧಿ ಜಯಂತಿ ಬಂದಿದೆ, ಈ ದಿನ ನಾವು ಗಾಂಧೀಜಿ ಆದರ್ಶಗಳನ್ನು ಪಾಲಿಸಿ ಮೈಗೂಡಿಸಿಕೊಂಡು ಅದರಂತೆ ನಡೆದದ್ದೇ ಆದರೆ ನಿಜಕ್ಕೂ ನಮ್ಮ ದೇಶ ಒಂದು ಉತ್ತಮ ಮಟ್ಟದ ಭವಿಷ್ಯವನ್ನು ಹೊಂದಿರತಕ್ಕಂತ ದೇಶ ಆಗೋದರಲ್ಲಿ ಯಾವುದೇ ಅನುಮಾನಬೇಡಿ. ಇವತ್ತು ನಮ್ಮ ಜೆಡಿಎಸ್ ಪಾರ್ಟಿ ಮಾತ್ರ ಅಲ್ಲ ಎಲ್ಲಾ ಪಾರ್ಟಿಗಳೂ ಗಾಂಧೀಜಿಯನ್ನು ಗೌರವಿಸಬೇಕಿದೆ. ರಾಜಕಾರಣಿಗಳ ಭ್ರಷ್ಟ ಕೆಲಸ ನೋಡಿ ಯುವ ಜನಾಂಗ ರಾಜಕೀಯದಿಂದ ದೂರ ಸರಿತಾ ಇದೆ. ಹಾಗಾಗಿ ನಾವು ಅವರಿಗೆಲ್ಲಾ ಧೈರ್ಯ ತುಂಬಿ ಯಾವುದೇ ಓದು, ವಿದ್ವತ್ತು ಡಿಗ್ರಿ ಇಲ್ಲದೆ ಸುಖವಾಗಿ ರಾಜಕಾರಣದಲ್ಲಿ ಜೀವನ ಮಾಡಬಹುದು ಎಂಬುದಕ್ಕೆ ತಕ್ಕ ಉದಾಹರಣೆಗಳನ್ನು ಕೊಟ್ಟು ರಾಜಕಾರಣಕ್ಕೆ ಹುರಿದುಂಬಿಸಿ ತರತಕ್ಕಂತ ಕೆಲಸ ಮಾಡದೆಯಿದ್ರೆ, ನಾವು ಗಾಂಧೀಜಿ ತತ್ವಕ್ಕೆ ದ್ರೋಹ ಬಗೆದಂಗಾಗುತ್ತೆ ಎಂಬತಕ್ಕಂತ ಮಾತನ್ನ ಹೇಳ್ಳಿಕ್ಕೆ ಇಚ್ಛೆಪಡ್ತಿನಿ" ಎಂದರಂತಲ್ಲಾ, ಥೂತ್ತೇರಿ!!

* * * *

ಯಾವಾಗೆಂದರೆ ಆವಾಗ ಕೈಕೊಡುತ್ತಿರುವ ಕರಂಟಿನ ಮಂತ್ರಿಯಾದ ಶೋಭರನ್ನು ಮಾತನಾಡಿಸಿ ಕರಂಟು ಕೇಳಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್: "ಕಾಣದಂತೆ ಮಾಯವಾದನೊ, ನಮ್ಮ ಶಿವಾ ಕೈಲಾಸ ಸೈರಿಕೊಂಡನೊ ಕೊಡುವುದನ್ನು ಕೊಟ್ಟು....."

"ಹಲೋ ಯಾರು?"

"ಮೇಡಂ ನಮಸ್ತೆ, ನಾನು ಯಾಹು ಪತ್ರಕರ್ತ."

"ಏನು ಯಾಹು ಅವರೆ, ಈಚೆಗೆ ನೀವು ಸಿಕ್ಕಲಿಲ್ಲಾ."

"ನೀವು ಹುಡುಕಿದ್ರೆ ಸಿಕ್ಕತಿದ್ದೆ ಮೇಡಂ."

"ನಾನು ಯಂತಕ್ಕೆ ಹುಡುಕುವುದು."

"ಸಿಕ್ಕಲಿಲ್ಲ ಅಂದ್ರಲ್ಲಾ ಅದಕಂಗಂದೆ. ಅದಿರ್ಲಿ ಮೇಡಂ ಏನೀತರ ಲೋಡ್ ಶೆಡ್ಡಿಂಗ್?"

"ಅದು ಯಂತ ಆಯ್ತು ಅಂದರೆ, ಜೋಗದಲ್ಲಿ ಮಹಾತ್ಮಾ ಗಾಂಧಿ ಪವರ್‌ಹೌಸಿಗೆ ನೀರು ಬರುವ ಶಿರೂರು ಕೆರೆ ಹೊಡೆದು, ಅಲ್ಲಿ ಎಂಟು ಜನರೇಟರ್ ಕೆಲಸ ನಿಲ್ಲಿಸಿವೆ. ಆಂಧ್ರದಿಂದ ಕಲ್ಲಿದ್ದಲು ಬರುವುದು ನಿಂತಿರುವುದರಿಂದ ನಮ್ಮ ಥರ್ಮಲ್ ಘಟಕ ಕಾರ್ಯ ನಿರ್ವಹಿಸುವುದು ಕಷ್ಟವಾಗಿದೆ. ಹಾಗಾಗಿ ಲೋಡ್ ಶೆಡ್ಡಿಂಗ್ ಅನಿವಾರ್ಯವಾಗಿದೆ."

"ಕರಂಟಿಗಾಗಿ ನಿಮ್ಮಲ್ಲಿ ಯಾವುದೇ ಯಜ್ಞ, ಯಾಗ, ಹೋಮ ಇಲ್ಲವೆ ಮೇಡಂ?"

"ಕರಂಟು ತಯಾರಿಸಲು ನೀರು ಅಥವಾ ಕಲ್ಲಿದ್ದಲು ಬಿಟ್ಟರೆ ಪರ್ಯಾಯ ಮಾರ್ಗವಿಲ್ಲ."

"ತಮಾಷಿಗೇಳಿದೆ ಮೇಡಂ. ನೀವು ಇನ್ನು ಖಾತೆ ವಿಷಯ ತಿಳಕೊಬೇಕು ಅಂದಿದ್ರಿ."

"ನಾನೀಗಾಗಲೇ ಪರಿಪೂರ್ಣವಾಗಿ ತಿಳಿದುಕೊಂಡಿದ್ದೇನೆ."

"ಅಂಗಿದ್ರೆ ಚೆನ್ನಾಗಿ ಕರಂಟ್ ಕೊಡಬೇಕಾಗಿತ್ತು!"

"ಕೇಂದ್ರದವರು ನಮ್ಮ ಪಾಲನ್ನು ಸರಿಯಾಗಿ ಕೊಟ್ಟಿದ್ದರೆ ನಾನು ನಿಮಗೆ ಸರಿಯಾಗಿ ಕೊಡ್ತಿದ್ದೆ."

"ಕಾತೆ ಹೊಸದಾಗಿ ಪಡೆದಾಗ ನೀವು ಆರು ಗಂಟೆ ಕೊಡ್ತಿನಿ ಅಂದಿದ್ರಿ. ಆರು ಗಂಟೆ ಬೇಡಿ ಮೇಡಂ, ರಾತ್ರಿ ಉಂಡು ಮಲಗೊವರಿಗೂ ಕೊಟ್ರು ಸಾಕು."

"ಅಷ್ಟು ಕೊಡ್ತಾಯಿದ್ದೀನಲ್ಲಾ?"

"ಇಲ್ಲ ಮೇಡಂ, ಈ ಕತ್ತಲೆ ಬದುಕು ಸಾಕಾಗಿದೆ. ಮನುಷ್ಯ ಈ ಹಾಳು ಕರಂಟಿಗೆ ಎಷ್ಟು ಒಗ್ಗಿಕೊಂಡವ್ನೆ ಅಂದ್ರೆ ಕರಂಟು ಹೋದ ಕೂಡ್ಲೆ ಜೀವವೆ ಹೋದಂಗೆ ಸುಮ್ಮನಿರತನೆ."

"ಹಾಗೆ ಇರಬಾರದು. ಬರ್ತಾಯಿರುವ ದಿನಗಳಿಗೆ ಹೊಂದಿಕೊಳ್ಳುವ ಸಲುವಾಗಿ ಮನುಷ್ಯ ಕತ್ತಲೆಯಲ್ಲಿ ಬದುಕುವುದನ್ನು ಕಲಿತುಕೊಳ್ಳಬೇಕು."

"ಮೇಡಂ, ನಾವು ಜೀವ ಪಡೆದದ್ದೇ ಕತ್ತಲಲಿ. ದಿನದ ಹನ್ನೆರಡು ಗಂಟೆನ ಕತ್ತಲೇ ಕಳದಿದ್ದಿವಿ. ಓದಿದ್ದು ಸೀಮೆಎಣ್ಣೆ ಬುಡ್ಡಿಲಿ. ಈಗ ಮತ್ತೆ ಬುಡ್ಡಿನ ಈಚೆಗೆ ತಗಿಯೋ ತರ ಮಾಡಿದ್ದಿರಿ. ಇದರ ಹೊಣೆ ನೀವೇ ಹೊರಬೇಕು."

"ನಾನು ಆಗಲೆ ಹೇಳಿದೆನಲ್ಲಾ, ಕೇಂದ್ರದ ಪಾಲು ಸರಿಯಾಗಿ ಬಂದಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ."

"ಎಲ್ಲಾ ವಿಷಯಕ್ಕೂ ಕೇಂದ್ರವನ್ನು ದೂರೋದಕ್ಕೆ ನೀವು ಒಬ್ಬರೆ ಬಾಕಿಯಿದ್ರಿ. ನಮ್ಮ ಎಲ್ಲಾ ಸಮಸ್ಯೆಗೆ ನಿಮ್ಮ ಪಾಲೆಷ್ಟು ಅನ್ನದನ್ನ ನೀವು ತಿಳಕೊಳ್ಳಲೇಯಿಲ್ಲ."

"ತಿಳಿದುಕೊಂಡಿದ್ದೇವೆ. ಈಗ ಸ್ವತಃ ನನ್ನ ಮನೆಯಲ್ಲಿ ಕರೆಂಟಿಲ್ಲ ಗೊತ್ತುಂಟ?"

"ಕತ್ಲಲೆ ಇದೀರ ಮೇಡಂ?"

"ಹೌದು."

"ಹೋಗ್ಲಿ ಬಿಡಿ. ನಿಮ್ಮನ್ನ ಇಂಧನ ಸಚಿವರನ್ನಾಗಿ ಮಾಡಿದ ಎಡೂರಪ್ಪನಿಗೇ ಫೋನ್ ಮಾಡ್ತಿನಿ."

"ಅವರು ವಿದ್ಯುತ್ ಸಮಸ್ಯೆ ಚರ್ಚಿಸಲು ಇಲ್ಲೇ ಬರುವುದುಂಟು. ಆಗಲೇ ಫೋನ್ ಮಾಡಿ."


"ಥೂತ್ತೇರಿ!!!"



ಸೀರಿಯಲ್ ನಟಿ ಶ್ರೀಗೌರಿಯ ನಿಗೂಢ ಸಾವು

ಟಿವಿಯಲ್ಲಿ ಕಾಣಿಸಿಕೊಳ್ಳಬೇಕು ಎಂಬ ತೆವಲಿಗೆ ಬಿದ್ದು ಮನೆಯನ್ನು ತೊರೆದ, ಶೋಕಿ ಜೀವನ ಶೈಲಿಗಾಗಿ ತನ್ನ ದೇಹವನ್ನೇ ಒತ್ತೆ ಇಟ್ಟ, ತನ್ನ ವೈಯಕ್ತಿಕ ಬದುಕನ್ನು ನಾಶ ಮಾಡಿಕೊಂಡ, ಜನಪ್ರಿಯತೆ ಎಂಬ ಕನಸಿನ ಕುದುರೆಯನ್ನೇರಿ ಹೊರಟು ಸಾವನ್ನಪ್ಪಿದವರಲ್ಲಿ ಶ್ರೀಗೌರಿ ಮೊದಲಿಗಳೂ ಅಲ್ಲ, ಕೊನೆಯವಳೂ ಅಲ್ಲ.





ಕಿರುತೆರೆಯ ಕರಾಳ ಹೊಸ್ತಿಲಿನಲ್ಲಿ ಮತ್ತೊಂದು ಹೆಣ ಬಿದ್ದಿದೆ...

ಇತ್ತೀಚೆಗೆ ಕಿರುತೆರೆಯಲ್ಲಿ ಕಾಣಿಸಿಕೊಳ್ಳುವ ಹುಚ್ಚಿಗೆ ಬಿದ್ದು ತಮ್ಮ ಬದುಕು ಹಾಳು ಮಾಡಿಕೊಂಡ ಹುಡುಗಿಯರು ಅದೆಷ್ಟೋ ಮಂದಿ. ಅವರಲ್ಲಿ ಸುಸಂಸ್ಕೃತ ಮಧ್ಯಮವರ್ಗದ ಮನೆತನದಿಂದ ಬಂದ ಹೆಣ್ಣುಮಕ್ಕಳೇ ಹೆಚ್ಚು. ಕಾಲೇಜು ದಿನಗಳಲ್ಲೇ ಕೊಂಚ ಚೆಂದಕ್ಕಿರುವ ಹೆಣ್ಣುಮಕ್ಕಳು ಟೀವಿಯ ಸೆಳೆತಕ್ಕೆ ಬಿದ್ದು ತಮ್ಮ ಊರು, ಮನೆ ತೊರೆದು ಅವಕಾಶಗಳನ್ನು ಅರಸಿ ಬೆಂಗಳೂರಿಗೆ ಬರುತ್ತಾರೆ. ಆದರೆ ಕಿರುತೆರೆಯಲ್ಲಿ ಅವಕಾಶ ಗಿಟ್ಟಿಸುವುದು ಅಷ್ಟು ಸುಲಭದ ಮಾತಲ್ಲ. ಅಂಥವರಲ್ಲಿ ಕೆಲವರು ಚಿತ್ರರಂಗದಲ್ಲಿ ಕಡೇಪಕ್ಷ ಜೂನಿಯರ್ ಆರ್ಟಿಸ್ಟ್ ಆಗಿ ಅದು ಹೇಗೋ ಜೀವನ ಸಾಗಿಸುತ್ತಾರೆ. ಆದರೆ ಹಲವರು ಏನೇ ಆದರೂ ತಮ್ಮ ಆಸೆಯನ್ನು ಈಡೇರಿಸಿಕೊಳ್ಳಬೇಕೆಂಬ ಬಯಕೆಯಿಂದ ವಿವಿಧ ರೀತಿಯ ಸಮಸ್ಯೆ ಶೋಷಣೆಗಳಲ್ಲಿ ಸಿಲುಕಿಕೊಂಡು ಕೊನೆಗೆ ತಮ್ಮ ಪ್ರಾಣವನ್ನೇ ಕಳೆದುಕೊಳ್ಳುತ್ತಾರೆ. ಅಂತಹ ಹುಡುಗಿಯೊಬ್ಬಳು ಈಗ ಶವವಾಗಿದ್ದಾಳೆ.


ಆಕೆಯ ಹೆಸರು ಶ್ರೀಗೌರಿ

ವಾಸ್ತವವಾಗಿ ಈಕೆಯ ನಿಜವಾದ ಹೆಸರು ಶಬನಂ. ಹಾವೇರಿ ಜಿಲ್ಲೆಯ ಬ್ಯಾಡಗಿಯ ಮುಸ್ಲಿಂ ಮನೆತನದ ಹುಡುಗಿಯಾದ ಶಬನಂ ತಾನು ಮುಸಲ್ಮಾನ್ ಎಂದು ಗೊತ್ತಾದರೆ ಕಿರುತೆರೆ, ಚಿತ್ರರಂಗದಲ್ಲಿ ಅವಕಾಶಗಳು ಸಿಗುವುದಿಲ್ಲ ಎಂಬ ಕಾರಣಕ್ಕೆ ತನ್ನ ಹೆಸರನ್ನು ಶ್ರೀಗೌರಿ ಎಂದು ಬದಲಿಸಿಕೊಂಡಿದ್ದಳು. ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದ ಶ್ರೀಗೌರಿ ತನ್ನ ಗಂಡನನ್ನು ಬಿಟ್ಟು ಬೆಂಗಳೂರಿನ ಗಾಯತ್ರಿನಗರದಲ್ಲಿರುವ ಒಂದು ಪಿಜಿ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಿದಳು.

ಶ್ರೀಗೌರಿ ದೂರದ ಹಾವೇರಿಯಿಂದ ಬೆಂಗಳೂರಿಗೆ ಬಂದು ಟಿವಿ ಲೋಕಕ್ಕೆ ಎಂಟ್ರಿ ಪಡೆಯಲು ಪ್ರಯತ್ನಿಸಿದಳು. ಆರಂಭದ ದಿನಗಳಲ್ಲಿ ಈಕೆಗೆ ಸಣ್ಣಪುಟ್ಟ ಅವಕಾಶವೂ ಸಿಗದೆ ಬೆಂಗಳೂರಿನಲ್ಲಿ ಸಿಕ್ಕಾಪಟ್ಟೆ ಅಲೆದಾಡಿದಳು. ಈ ಮಧ್ಯೆ ಟಿವಿಯಲ್ಲಿ ಚಾನ್ಸು ಕೊಡಿಸ್ತೀನಿ ಎಂದ ಕೆಲವು ಕೋ-ಆರ್ಡಿನೇಟರ್‌ಗಳು ಈಕೆಯನ್ನು ತಮಗೆ ಬೇಕಾದಂತೆ ಬಳಸಿಕೊಂಡಿದ್ದೂ ಆಯಿತು. ಅದೆಲ್ಲ ಹಾಗೇ ಮುಂದುವರಿಯದಿದ್ದರೆ ಪ್ರಾಯಶಃ ಶ್ರೀಗೌರಿ ಇವತ್ತು ಯಾವುದೋ ಅನಾಮಿಕ ಶವವಾಗಿರುತ್ತಿದ್ದಳು.

ಆದರೆ ಆಕೆಯಲ್ಲಿದ್ದ ಪ್ರತಿಭೆಯನ್ನು ಗಮನಿಸಿ ಶ್ರೀಗೌರಿಗೆ ಒಂದು ದೊಡ್ಡ ಬ್ರೇಕ್ ಕೊಟ್ಟಿದ್ದು ಸಿಹಿಕಹಿ ಚಂದ್ರು. ಚಂದ್ರು ಮಾಲೀಕತ್ವದ 'ಫೈನಲ್ ಕಟ್ ಪ್ರೊಡಕ್ಷನ್' ನಿರ್ಮಿಸಿದ 'ಪಾರ್ವತಿ ಪರಮೇಶ್ವರ' ಧಾರಾವಾಹಿಯಲ್ಲಿ ಶ್ರೀಗೌರಿಗೆ ಪಾರ್ವತಿ ಪಾತ್ರವನ್ನೇ ಕೊಟ್ಟಿದ್ದರು. ಅಲ್ಲಿಯತನಕ ಅವಕಾಶವೇ ಇಲ್ಲದೆ ಒದ್ದಾಡುತ್ತಿದ್ದ ಶ್ರೀಗೌರಿಗೆ 'ಪಾರ್ವತಿ ಪರಮೇಶ್ವರ' ಧಾರಾವಾಹಿಯಲ್ಲಿ ಲೀಡ್ ರೋಲ್ ಸಿಕ್ಕಿದ್ದು ಆಕೆಯ ಅದೃಷ್ಟದ ಬಾಗಿಲನ್ನೇ ತೆರೆದಿತ್ತು. ಈ ಧಾರಾವಾಹಿಯಿಂದಾಗಿ ಆಕೆಗೆ ಜನಪ್ರಿಯತೆಯೂ ಸಿಕ್ಕಿತು. ಆದರೆ ಪಾಪ್ಯುಲಾರಿಟಿ ಬರುತ್ತಿದ್ದಂತೆಯೇ ಆಕೆಯ ಮನಸ್ಸಿನಲ್ಲಿ ಸಿನಿಮಾದಲ್ಲೂ ನಟಿಸಬೇಕು ಎಂಬ ಹುಚ್ಚು ಪ್ರಾರಂಭವಾಯಿತು.

ಸಿಹಿಕಹಿ ಚಂದ್ರು ತಮ್ಮ ಸೀರಿಯಲ್ಲುಗಳಲ್ಲಿ ನಟಿಸುವ ಕಲಾವಿದರನ್ನು ತಿಂಗಳ ಸಂಬಳಕ್ಕೆ ನೇಮಿಸಿಕೊಳ್ಳುತ್ತಾರೆ. ಎಲ್ಲರಿಗೂ ವಾರಕ್ಕೊಂದು ದಿನ ರಜಾ ಬಿಟ್ಟರೆ ಮತ್ತೆ ಯಾರೂ ರಜೆ ಕೇಳುವ ಹಾಗಿಲ್ಲ. ಅಷ್ಟೇ ಅಲ್ಲ, ತಮ್ಮ ಸೀರಿಯಲ್ ಮುಗಿಯುವತನಕ ಬೇರೆ ಧಾರಾವಾಹಿಗಳಲ್ಲಿ, ಸಿನಿಮಾಗಳಲ್ಲಿ ನಟಿಸುವಂತಿಲ್ಲ. ಇಂತಹ ವಿವಿಧ ನಿಬಂಧನೆಗಳಿದ್ದರೂ ಶ್ರೀಗೌರಿ ಪದೇ ಪದೇ ರಜೆ ಕೇಳಲು ಶುರು ಮಾಡಿದಳು. ಒಮ್ಮೆ "ಊರಿನಲ್ಲಿ ನಾನು ಜಮೀನು ಖರೀದಿಸಿದ್ದೇನೆ. ಅದರ ರಿಜಿಸ್ಟ್ರೇಷನ್‌ಗೆ ಹೋಗಬೇಕು" ಎಂದು ಅನುಮತಿ ಪಡೆದು ಹೋಗಿದ್ದಳು. ಆದರೆ ಆಕೆ ಊರಿಗೂ ಹೋಗಲಿಲ್ಲ, ಜಮೀನೂ ಖರೀದಿಸಿರಲಿಲ್ಲ, ಇನ್ನು ಅದರ ರಿಜಿಸ್ಟ್ರೇಷನ್ ಕೆಲಸವೂ ಇರಲೇ ಇಲ್ಲ, ಬದಲಾಗಿ ಆಕೆ ಚಿರಂಜೀವಿ ಸರ್ಜಾ ನಟಿಸುತ್ತಿದ್ದ 'ಗಂಡೆದೆ' ಚಿತ್ರದ ಶೂಟಿಂಗ್‌ನಲ್ಲಿ ಭಾಗವಹಿಸಿದ್ದಳು. ಈ ವಿಚಾರ ಸಿಹಿಕಹಿ ಚಂದ್ರು ಕಿವಿಗೆ ಬಿದ್ದಾಗ ಅವರು ಆಕೆಯನ್ನು ಯಗ್ಗಾ ಮುಗ್ಗಾ ಝಾಡಿಸಿದ್ದರು.



ಪಾರ್ವತಿ ಪರಮೇಶ್ವರ ಧಾರಾವಾಹಿಯಲ್ಲಿ ಶ್ರೀಗೌರಿ

ಇದಾದ ಕೆಲ ದಿನಗಳ ನಂತರ ತಾನು ನಾಗರಾಜ್ ಎಂಬಾತನನ್ನು ಪ್ರೀತಿಸಿದ್ದೇನೆ, ತಾವಿಬ್ಬರು ಮದುವೆ ಕೂಡ ಆಗಿದ್ದೇವೆ, ಆತನೊಂದಿಗೆ ಹನಿಮೂನ್‌ಗೆ ಹೋಗಬೇಕು ಎಂದು ಶ್ರೀಗೌರಿ "ಫಾರ್ಟಿ ಡೇಸ್ ರಜಾ ಬೇಕು" ಎಂದು ಮತ್ತೆ ಚಂದ್ರು ಅವರ ಬಳಿ ಅನುಮತಿ ಕೇಳಲು ನಿಂತಳು.

ಆದರೆ ಈಕೆ ಮದುವೆ, ಹನಿಮೂನ್ ಎಂದೆಲ್ಲ ನೆಪ ಹೇಳಿ ಮೂರ್ನಾಲ್ಕು ಸಿನಿಮಾಗಳಲ್ಲಿ ನಟಿಸುವ ಪ್ಲಾನು ಮಾಡಿದ್ದು ಚಂದ್ರುಗೆ ಅದಾಗಲೇ ಗೊತ್ತಾಗಿತ್ತು. ಹೀಗಾಗಿ "ನೀನು ಇನ್ನು ಮುಂದೆ ಯಾವತ್ತೂ ನಮ್ಮಲ್ಲಿ ಕೆಲಸಕ್ಕೆ ಬರಲೇ ಬೇಡ. ಆರಾಮಾಗಿ ಹನಿಮೂನು ಮುಗಿಸ್ಕೋ" ಎಂದು ಹೇಳಿ ಆಕೆಯನ್ನು ಫೈನಲ್ ಕಟ್ ಸಂಸ್ಥೆಯಿಂದ ಪರ್ಮನೆಂಟಾಗಿ ಕಟ್ ಮಾಡಿ ಕಳಿಸಿದ್ದರು.

'ಜಂಗ್ಲಿ', 'ವಿನಾಯಕ ಗೆಳೆಯರ ಬಳಗ', 'ಪಂಚಾಮೃತ' ಸೇರಿದಂತೆ ಒಂದಿಷ್ಟು ಸಿನಿಮಾಗಳಲ್ಲಿ ಶ್ರೀಗೌರಿ ನಟಿಸಿದಳಾದರೂ ಅವೆಲ್ಲಾ ಹಾಗೆ ಬಂದು ಹೀಗೆ ಹೋಗುವ ನಾಲಾಯಕ್ಕು ಪಾತ್ರಗಳಾಗಿದ್ದವು. ಅದಕ್ಕಿಂತ ಮುಖ್ಯವಾಗಿ ಸೀರಿಯಲ್‌ಗಳಲ್ಲಿ ನಟಿಸುವಾಗ ಕೈತುಂಬ ಸಂಪಾದಿಸುತ್ತಿದ್ದ ಶ್ರೀಗೌರಿಗೆ ಸಿನಿಮಾಗಳಲ್ಲಿ ಸಿಗುತ್ತಿದ್ದ ಹರಕು-ಮುರುಕು ಪಾತ್ರಗಳು ಮತ್ತು ಚಿಲ್ಲರೆ ಸಂಭಾವನೆ ಸಾಕಾಗುತ್ತಿರಲಿಲ್ಲ. ಆಗ ಮತ್ತೆ ಕಿರುತೆರೆಗೆ ಹಿಂದಿರುಗುವ ಪ್ರಯತ್ನ ಮಾಡಿದಳು. ಆದರೆ ಫೈನಲ್ ಕಟ್‌ನಂಥ ಶಿಸ್ತಿನ ಸಂಸ್ಥೆಯಲ್ಲೇ ಈಕೆ ಹೆಸರು ಕೆಡಿಸಿಕೊಂಡಿದ್ದರಿಂದ ಬೇರೆ ಪ್ರೊಡಕ್ಷನ್‌ನವರು ಈಕೆಗೆ ಪಾತ್ರಗಳನ್ನು ಕೊಡಲು ಹಿಂಜರಿದರು. "ಫೈನಲ್ ಕಟ್‌ನಿಂದ ನಾನು ಹೊರ ಬಂದ ಮೇಲೆ ನನಗೆ ಎಲ್ಲೂ ಚಾನ್ಸ್ ಸಿಗುತ್ತಿಲ್ಲ. ಆ ಸಂಸ್ಥೆಯಲ್ಲಿರುವ ಶಶಿಕುಮಾರ್ ಎಂಬ ಪ್ರೊಡಕ್ಷನ್ ಮ್ಯಾನೇಜರ್ ನನ್ನ ಮೇಲೆ ಇಲ್ಲದ್ದನ್ನೆಲ್ಲ ಹೇಳಿ ಅಪಪ್ರಚಾರ ಮಾಡ್ತಿದ್ದಾನೆ. ಅದರಿಂದಾಗಿ ನನಗೆ ಸಿಗುವ ಅವಕಾಶಗಳೂ ಮಿಸ್ ಆಗ್ತಿವೆ..." ಎಂದು ಶ್ರೀಗೌರಿ ತನ್ನ ಆತ್ಮೀಯರಲ್ಲಿ ಅಳಲು ತೋಡಿಕೊಂಡಿದ್ದಳು.

ಇಷ್ಟಾದ ನಂತರವೂ ಆಕೆ 'ಮಹಾನವಮಿ', 'ರಾಘವೇಂದ್ರ ವೈಭವ','ಎಸ್ಸೆಸ್ಸೆಲ್ಸಿನನ್‌ಮಕ್ಳು' ತರಹದ ಧಾರಾವಾಹಿಗಳಲ್ಲಿ ಅವಕಾಶಗಳನ್ನು ಗಿಟ್ಟಿಸಿಕೊಂಡಳು. ಆದರೆ ಅವುಗಳಿಂದ ಆಕೆಯ ವೃತ್ತಿ ಬದುಕಾಗಲಿ, ಆರ್ಥಿಕ ಸ್ಥಿತಿಯಾಗಲಿ ಉದ್ಧಾರವಾಗಲಿಲ್ಲ. ಹೀಗೆ ಇತ್ತ ಟಿವಿಯಲ್ಲಿ ಅವಕಾಶಗಳು ಕಡಿಮೆಯಾಗಿ, ಅತ್ತ ಗಂಡನಿಂದಲೂ ದೂರವಾಗಿದ್ದ ಶ್ರೀಗೌರಿ ಕಡೆಗೆ ಸಿಲುಕಿದ್ದು 'ಸೀರಿಯಲ್ ಸೆಕ್ಸ್ ರ‍್ಯಾಕೆಟ್'ನಲ್ಲಿ.

ಇಂದು ಸೀರಿಯಲ್ ಉದ್ಯಮ ಅದೆಷ್ಟು ಗಬ್ಬೆದ್ದಿದೆಯೆಂದರೆ ಅದರಲ್ಲಿರುವ ಕೆಲವು ಮಹಿಳೆಯರು ಕಿರುತೆರೆ ಪಹಿವಾಟಗಿಂತ ಮೈಕಸುಬಿನಲ್ಲೇ ತಮ್ಮನ್ನು ಹೆಚ್ಚು ತೊಡಗಿಸಿಕೊಳ್ಳುತ್ತಿದ್ದಾರೆ. ಒಮ್ಮೆ ಸೀರಿಯಲ್‌ಗಳಲ್ಲಿ ಚಿಕ್ಕ ಪುಟ್ಟ ಪಾತ್ರಗಳಲ್ಲಿ ನಟಿಸಿದರೂ ಸಾಕು, ಶೋಕಿಗೆ ಬೀಳುವ ಹುಡುಗಿಯರು ತಮ್ಮ ದೇಹವನ್ನೇ ಮಾರಿಕೊಂಡು ವಿಲಾಸಿ ಜೀವನಕ್ಕೆ ಹೊಂದಿಸಿಕೊಳ್ಳುತ್ತಾರೆ. ಶ್ರೀಗೌರಿ ಕೂಡಾ ಇದಕ್ಕೆ ಹೊರತಾಗಿರಲಿಲ್ಲ. ಅವಕಾಶ ಕೊಡುತ್ತೇವೆ ಎಂದು ಹುಸಿ ನಂಬಿಕೆ ತೋರಿದವರೊಂದಿಗೆಲ್ಲಾ ಅಫೇರ್ ಶುರು ವಿಟ್ಟುಕೊಂಡಳು. ತನಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಯಾರ‍್ಯಾರೋ ಏಜೆಂಟರುಗಳ ಮೂಲಕ ವ್ಯಾಪಾರದ ವಸ್ತುವಾದಳು.

ಕೆಎಎಸ್ ಓದಿದ್ದು ನಿಜವಾ?

ಶ್ರೀಗೌರಿಗೆ ವಿಪರೀತ ಸುಳ್ಳು ಹೇಳುವ ಚಾಳಿಯೂ ಇತ್ತು, ಮಾತೆತ್ತಿದರೆ ಈಕೆ "ನಾನು ಐಎಎಸ್ ಪರೀಕ್ಷೆ ಬರೆದಿದ್ದೀನಿ" ಎಂದು ತನ್ನನ್ನು ತಾನೇ ಹೊಗಳಿಕೊಳ್ಳುತ್ತಿದ್ದಳು. ವಾಸ್ತವವಾಗಿ ಈಕೆ ಯಾವ ಐಎಎಸ್, ಕೆಎಎಸ್ ಪರೀಕ್ಷೆಗಳನ್ನೂ ಬರೆದಿರಲಿಲ್ಲ. ಬದಲಾಗಿ ನಾಲ್ಕು ವರ್ಷಗಳ ಹಿಂದೆ ಧಾರವಾಡದಲ್ಲಿರುವ ಕ್ಲಾಸಿಕ್ ಕೋಚಿಂಗ್ ಸೆಂಟರ್‌ನಲ್ಲಿ ಕೆಎಎಸ್-ಐಎಎಸ್‌ಗೆ ನಡೆಸುವ ಫೌಂಡೇಶನ್ ಕೋರ್ಸ್ ಸೇರಿದ್ದಳಷ್ಟೆ. ಅಷ್ಟೇ ಅಲ್ಲ, ಅಲ್ಲಿನ ಕೋರ್ಸ್ ಪ್ರಾರಂಭವಾಗುವ ಮುನ್ನವೇ ಧಾರವಾಡದ ತಹಶೀಲ್ದಾರ್ ಮತ್ತು ಡಿಸಿ ಆಫೀಸುಗಳಿಗೆ ಹೋಗಿ "ನಾನು ಐಎಎಸ್ ಪರೀಕ್ಷೆ ಬರೀತಿದೀನಿ. ನಂಗೆ ಮಾಹಿತಿಗಳನ್ನು ಕೊಡಿ" ಎಂದು ದುಂಬಾಲು ಬಿದ್ದಿದ್ದಳು. ಈ ವಿಚಾರ ಕೋಚಿಂಗ್ ಸೆಂಟರ್‌ನ ಮುಖ್ಯಸ್ಥ ಲಕ್ಷ್ಮಣ್ ಉಪ್ಪಾರ್ ಅವರಿಗೆ ಗೊತ್ತಾಗಿ ಆಕೆಯನ್ನು ಕರೆಸಿ "ಮೊದಲು ಓದಿ ಪರೀಕ್ಷೆ ಬರೆಯೋದನ್ನು ಕಲಿ. ಪ್ರಾಕ್ಟಿಕಲ್ ಆಗಿ ಕಲಿಯೋಕೆ ಹೋಗಿ ನಮ್ಮ ಸಂಸ್ಥೆಯ ಮಾನ ತೆಗೀಬೇಡ" ಎಂದು ಬೈದು ಬುದ್ಧಿ ಹೇಳಿದ್ದರು. ಹಾಗೆ ಅಂದಿದ್ದೇ ತಡ ಕೋಚಿಂಗ್ ಸೆಂಟರ್‌ನಿಂದ ಕಾಲುಕಿತ್ತ ಶ್ರೀಗೌರಿ ಅನಂತರ ಪ್ರತ್ಯಕ್ಷವಾಗಿದ್ದು ಟಿವಿ ಸೀರಿಯಲ್ಲುಗಳಲ್ಲಿ!

ಇಷ್ಟೆಲ್ಲ ಹಿನ್ನೆಲೆಯಿರುವ ಶ್ರೀಗೌರಿ ಮೂರ್ಛೆ ರೋಗದಿಂದ ನರಳುತ್ತಿದ್ದಳು. ಈ ಖಾಯಿಲೆ ಆಕೆಯನ್ನು ಕೀಳರಿಮೆಗೂ ದೂಡಿತ್ತು. ಇಂತಹ ಶ್ರೀಗೌರಿ ಕಳೆದ ಶನಿವಾರ ತಾನು ವಾಸವಿದ್ದ ಪಿಜಿ ಸೆಂಟರ್‌ನಲ್ಲೇ ಉಸಿರು ಚೆಲ್ಲಿ ಮಲಗಿದ್ದಳು.

ಆಕೆ ಆತ್ಮಹತ್ಯೆ ಮಾಡಿಕೊಂಡಳಾ? ಅಥವಾ ಯಾರಾದರು ಆಕೆಯನ್ನು ಕೊಲೆ ಮಾಡಿದರಾ? ಅಥವಾ ಆಕೆಯನ್ನು ಪೀಡಿಸುತ್ತಿದ್ದ ಮೂರ್ಛೆ ರೋಗಕ್ಕೆ ಬಲಿಯಾದಳಾ?

ಈ ಯಾವ ಪ್ರಶ್ನೆಗಳಿಗೂ ಸದ್ಯ ಸುಬ್ರಹ್ಮಣ್ಯಪುರ ಠಾಣೆಯ ಪೊಲೀಸರಲ್ಲಿ ಉತ್ತರಗಳಿಲ್ಲ. ಪೋಸ್ಟ್‌ಮಾರ್ಟಂ ರಿಪೋರ್ಟ್ ಬರುವತನಕ ಯಾವುದೂ ಖಚಿತವಾಗಿ ಗೊತ್ತಾಗುವುದಿಲ್ಲ ಎಂಬುದು ಅವರ ತರ್ಕ.

ಒಟ್ಟಿನಲ್ಲಿ ಟಿವಿಯಲ್ಲಿ ಕಾಣಿಸಿಕೊಳ್ಳಬೇಕು ಎಂಬ ತೆವಲಿಗೆ ಬಿದ್ದು ಮನೆಯನ್ನು ತೊರೆದ, ಶೋಕಿ ಜೀವನ ಶೈಲಿಗಾಗಿ ತನ್ನ ದೇಹವನ್ನೇ ಒತ್ತೆ ಇಟ್ಟ, ತನ್ನ ವೈಯಕ್ತಿಕ ಬದುಕನ್ನು ನಾಶ ಮಾಡಿಕೊಂಡ, ಜನಪ್ರಿಯತೆ ಎಂಬ ಕನಸಿನ ಕುದುರೆಯನ್ನೇರಿ ಹೊರಟು ಸಾವನ್ನಪ್ಪಿದವರಲ್ಲಿ ಶ್ರೀಗೌರಿ ಮೊದಲಿಗಳೂ ಅಲ್ಲ, ಕೊನೆಯವಳೂ ಅಲ್ಲ. ಬದಲಾಗಿ ಆಕೆಯ ಬದುಕು ಮತ್ತು ಸಾವು ಬಣ್ಣಬಣ್ಣವಾಗಿ ಅಂದವಾಗಿ ಕಾಣುವ ಮನರಂಜನಾ ಲೋಕದ ಕರಾಳ ಮುಖ...

• ಅರುಣ್ ಕುಮಾರ್.ಜಿ

ಬಳ್ಳಾರಿ: ಡಿಕೆಶಿ ಶಿಷ್ಯನ ದೋಖಾ ಡೀಲ್

ಬಳ್ಳಾರಿ ನಗರ ಕಾಂಗ್ರೆಸ್‌ನ ಅಧ್ಯಕ್ಷ ಕಂ ಡಿ.ಕೆ.ಶಿ ಯ ಬಲಗೈ ಬಂಟ ಅಂತ ತನ್ನನ್ನು ತಾನು ಪರಿಚಯಿಸಿಕೊಳ್ಳುವ ಆಂಜನೇಯಲು ಒಂದೇ ಸೈಟನ್ನು ಇಬ್ಬಬ್ಬರಿಗೆ ಮಾರಾಟ ಮಾಡಿದ ಹಗರಣವೊಂದರಲ್ಲಿ ಬೆತ್ತಲಾಗಿ ನಿಂತಿದ್ದಾನೆ. ಈತ ಬಳ್ಳಾರಿ ಸಮೀಪದ ಗುಗ್ಗರಹಟ್ಟಿಯಲ್ಲಿರುವ ತನ್ನ ಜಾಗದಲ್ಲಿ ಹುಟ್ಟದೊಂದೆರಡು ಸೈಟುಗಳನ್ನು ಲೇ ಔಟ್ ಮಾಡಿಸಿಕೊಂಡು ಅವುಗಳ ಹೆಸರಿನಲ್ಲಿ ಭಾರೀ ಬಿಜಿನೆಸ್‌ಗಿಳಿದಿದ್ದನು. ಇದನ್ನಾತ 2007 ರಲ್ಲಿ ಪಿ.ಶೇಕ್ ಮೊಹಿನುದ್ದೀನ್ ಎಂಬಾತನಿಂದ ಕೊಂಡುಕೊಂಡಿದ್ದಾಗಿ ಹೇಳಿಕೊಳ್ಳುತ್ತಾನಾದರು, ಅದಕ್ಕೂ ಸರಿಯಾದ ದಾಖಲೆಗಳಿಲ್ಲ, ಒಂದೇ ಸೈಟಿಗೆ ಹಲವರತ್ತಿರ ಅಡ್ವಾನ್ಸ್ ಪಡೆದು ಅವರಿಗೆ ಖೋತಾ ಅಗ್ರಿಮೆಂಟ್ ಮಾಡಿಸಿಕೊಟ್ಟು ಯಾಮಾರಿಸುವುದು, ಅವರು ವಾಪಾಸ್ಸು ದುಡ್ಡು ಕೇಳಲು ಬಂದಾಗ ಅವರಿಗೆ ತನ್ನ ಪೊಲಿಟಿಕಲ್ ಪವರ್ ಬಳಸಿ ಜೀವ ಬೆದರಿಕೆ ಹಾಕಿ ಸುಮ್ಮನಾಗಿಸುವುದೇ ಇವನ ಕಸುಬು.




ಇದೇ ಬಳ್ಳಾರಿಯ ಬಿ. ಗೋವಿಂದಪ್ಪ ಎಂಬಾತ ಲಾರಿ ಓಡಿಸಿಕೊಂಡು ಒಂದಷ್ಟು ಕಾಸು ಅಂತ ಮಾಡಿಕೊಂಡಿದ್ದ. ಒಂದು ಸೈಟು ಮಾಡಿಕೊಂಡರೆ ಜನ್ಮ ಸಾರ್ಥಕವಾಯ್ತೆನ್ನುವ ಆಸೆಯಲ್ಲಿ ಯೋಗ್ಯ ಸೈಟಿನ ತಲಾಷಿನಲ್ಲಿದ್ದವನಿಗೆ ಆಂಜನೇಯಲುನ ಪರಿಚಯವಾಗಿತ್ತು, ಒಂದಷ್ಟು ನೈಸು ಮಾತನ್ನಾಡಿ ರೆಗ್ಯುಲರ್ ಭಾಟಿಯಲ್ಲಿ ತನ್ನ ಪರಾಕು ಪುರಾಣವನ್ನೆಲ್ಲ ತಾನೆ ಒದರಿಕೊಂಡು ಗೋವಿಂದಪ್ಪನ ವಿಶ್ವಾಸ ಗಿಟ್ಟಿಸಿಕೊಂಡ ನಂತರ ಗುಗ್ಗರಹಟ್ಟಿಯ ತನ್ನ ಮಿನಿ ಲೇ ಔಟಿಗೆ ಕರೆದುಕೊಂಡು ಹೋಗಿ, ಸರ್ವೆ ನಂಬರ್ 724/2 ರ 40ಟ್ಸ್20 ಅಳತೆಯ ಪ್ಲಾ ಟ್ ನಂಬರ್ 35 ನ್ನು ತೋರಿಸಿ, ಇದೇ ನಿನಗೆ ಮಾರಬೇಕೆಂದಿರುವ ಸೈಟು ಎಂದಿದ್ದನು. ಇದರಲ್ಲಿ ಯಾವ ಮೋಸವೂ ಇಲ್ಲ, ಎಲ್ಲಾ ಪಕ್ಕಾ ವ್ಯವಹಾರ ಎಂಬ ನಂಬಿಕೆ ಮೂಡಿಸಲು ಅಡ್ವಾನ್ಸ್ ಹಣಕ್ಕೆ ಇದೇ ಸೈಟಿಗೆ ಬಾಂಡ್ ಪೇಪರ್ ಮೇಲೆ ಅಗ್ರಿಮೆಂಟ್ ಮಾಡಿಕೊಡುವುದಾಗಿಯೂ ತಿಳಿಸಿದ್ದನು. ನಡುವಿನ ಒಂದಿಬ್ಬರ ಚೌಕಾಶಿಯ ನಂತರ ಆ ಇಡೀ ಸೈಟು ಒಂದು ಲಕ್ಷದ ಐವತ್ತೊಂದು ಸಾವಿರಕ್ಕೆ ಮಾರಾಟವಾಗಿತ್ತು.

2008ರ ಜುಲೈ 14ನೇ ತಾರೀಖು ನಿಗದಿಯಾದ ಮೊತ್ತದಲ್ಲಿ ಒಂದು ಲಕ್ಷದ ನಲವತ್ತಾರು ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಗೋವಿಂದಪ್ಪನಿಂದ ಪಡೆದ ಆಂಜನೇಯಲು, ಬಾಂಡ್ ಪೇಪರ್ ಮೇಲೆ ಅಗ್ರಿಮೆಂಟ್ ಮಾಡಿಕೊಂಡು ಉಳಿದ ಐದು ಸಾವಿರ ಬ್ಯಾಲೆನ್ಸ್ ನೀಡಿದ ತಕ್ಷಣ ಯಾವುದೇ ತಕರಾರು ತೆಗೆಯದೆ ರಿಜಿಸ್ಟ್ರೇಷನ್ ಮಾಡಿಕೊಡುವುದಾಗಿ ಅದನ್ನು ನೋಟರಿ ಮಾಡಿಸಿ ಗೋವಿಂದಪ್ಪನ ಕೈಗಿತ್ತು ರೊಕ್ಕವನ್ನು ತನ್ನ ಜೇಬಿಗಿಳಿಸಿಕೊಂಡಿದ್ದನು. ಆದರೆ ರಿಜಿಸ್ಟ್ರೇಷನ್ ವಿಷಯ ಬಂದಾಗಲೆಲ್ಲ ಆಂಜನೇಯಲು ಏನೋ ಒಂದು ನೆಪ ಹೇಳಿ ಮುಂದೂಡುತ್ತಲೇ ಬಂದಿದ್ದ ಒಂದು ವರ್ಷ ಕಳೆದರೂ ಸೈಟಿನ ಒಡೆತನದ ಖಾತ್ರಿ ಮೂಡದಿದ್ದಾಗ ಗೋವಿಂದಪ್ಪನಿಗೆ ಸಣ್ಣದಾಗಿ ಅನುಮಾನ ಕಾಡಲಾರಂಭಿಸಿತ್ತು, ಈ ನಡುವೆ ಆಂಜನೇಯಲು ಅದೇ ಸೈಟನ್ನು ಪಿ.ಮಾರಿ ಎಂಬುವವರಿಗೆ ಮಾರಾಟಮಾಡಿ ಅವರಿಂದಲೂ ಅಡ್ವಾನ್ಸ್ ಪಡೆದು ಅಗ್ರಿಮೆಂಟ್ ಮಾಡಿಕೊಟ್ಟಿದ್ದಾನೆ ಎಂಬ ವಿಷಯ ಗೋವಿಂದಪ್ಪನ ಕಿವಿಗೆ ಬಿದ್ದಿತು. ನಿಜ ಸಂಗತಿ ತಿಳಿಯಲು ಮಾರಿಯವರ ಮನೆಗೆ ಹೋದಾಗಲೇ ಇಬ್ಬರಿಗೂ, ತಾವು ಆಂಜನೇಯಲುವಿನಿಂದ ಮೋಸ ಹೋಗಿರುವುದು ಖಾತ್ರಿಯಾಗಿತ್ತು.

ಗೋವಿಂದಪ್ಪನಿಗೆ ಅಗ್ರಿಮೆಂಟ್ ಮಾಡಿಕೊಟ್ಟ ಏಳು ದಿನದಲ್ಲೆ ಅಂದರೆ 2008ರ ಜುಲೈ 21ರಂದು ಮಾರಿಗೂ ಅದೇ ಸೈಟು ಮಾರಾಟ ಮಾಡಿದ ಹಾಗೆ ಅಗ್ರಿಮೆಂಟ್ ಮಾಡಿಕೊಡಲಾಗಿತ್ತು, ಸರಿಯಾಗಿ ಒಂದು ವಾರದ ಅಂತರದಲ್ಲೆ ಒಂದೇ ಸೈಟನ್ನು ಇಬ್ಬಬ್ಬರಿಗೆ ಮಾರುತ್ತಾನೆಂದರೆ ಈತ ಅದಿನ್ನೆಂತ ನಿಸ್ಸೀಮ ವ್ಯವಹಾರಸ್ಥನಾಗಿರಬೇಡ. ಆದರೆ ಮಾರಿಯವರ ಅಗ್ರಿಮೆಂಟನ್ನು ಆಂಜನೇಯಲು ಮಧುಸೂದನ್ ಎಂಬ ಮತ್ತೊಬ್ಬನೊಟ್ಟಿಗೆ ಸೇರಿ ಸರ್ವೆ ನಂಬರ್ 724/2ನ 35 ಮತ್ತು 36 ಪ್ಲಾಟ್ ಸಂಖ್ಯೆಯ ಅಕ್ಕ ಪಕ್ಕದ ಎರಡು ಸೈಟನ್ನು ಒಟ್ಟಿಗೆ ಮಾರಿರುವುದಾಗಿ ಬರೆದುಕೊಟ್ಟಿದ್ದರೂ, ಅದರಲ್ಲಿ ಒಂದು ಸೈಟು ಆದಾಗಲೆ ಗೋವಿಂದಪ್ಪನಿಗೆ ಮಾರಿದುದಾಗಿತ್ತು, ವಿಷಯ ತಿಳಿದ ಕೂಡಲೆ ಗೋವಿಂದಪ್ಪ ಆಂಜನೇಯಲುವಿನ ಬೆನ್ನಿಗೆ ಬಿದ್ದು ಒಂದೋ ಸೈಟು ನೀಡು; ಇಲ್ಲವೇ ಹಣ ವಾಪಾಸು ಕೊಡು ಎಂದು ಪೀಡಿಸಿದ್ದನು. ಇತ್ತ ಇದೇನು ದೊಡ್ಡ ವಿಷಯವೇ ಅಲ್ಲವೆನ್ನುತ್ತಾ ಆಂಜನೇಯಲು ನೆಗ್ಲೆಕ್ಟ್ ಮಾಡಿಕೊಂಡು ಬಂದದ್ದು ಮಾತ್ರವಲ್ಲ , ಹೀಗೆ ಪೀಡಿಸಿದರೆ ಪರಿಣಾಮ ನೆಟ್ಟಗಿರಲಿಕ್ಕಿಲ್ಲ ಎಂಬರ್ಥದ ಡೈಲಾಗ್ ಎಸೆದಿದ್ದನು. ತನಗಾದ ಈ ವಂಚನೆಯ ವಿರುದ್ಧ ಬಳ್ಳಾರಿಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಗೋವಿಂದಪ್ಪ ದೂರು ನೀಡಿದ್ದಾನಾದರೂ, ಆಂಜನೇಯಲುವಿನ ಪೊಲಿಟಿಕಲ್ ಅಬ್ಬರದ ಮುಂದೆ ಅದು ಎಷ್ಟು ಗಟ್ಟಿಯಾಗಿ ಉಳಿಯುತ್ತೆ ಎಂಬುದೆ ಸದ್ಯದ ಪ್ರಶ್ನೆ.

ಆಂಜನೇಯಲುವಿನ ಕರಾಳ ಚರಿತ್ರೆ

ಈ ಆಂಜನೇಯಲು ಮೂಲತಃ ಆಂಧ್ರದ ಗಡೇಕಲ್ಲಿನವನು. ಅಲ್ಲಿನ ಬಡ ದಲಿತ ಕುಟುಂಬಗಳಿಗೆ ತಣ್ಣನೆಯ ವಂಚನೆಮಾಡಿ, ತಲೆ ಮರೆಸಿಕೊಳ್ಳಲು ಬಳ್ಳಾರಿ ಸೇರಿಕೊಂಡಿದ್ದಾನೆಂಬ ಕರಾಳ ಚರಿತ್ರೆಯೂ ಇವನ ಬೆನ್ನಿಗಿದೆ. ನಾಲ್ಕಾರು ಉದ್ದಿಮೆಯ ಹೆಸರಿನಲ್ಲಿ ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಲೋನ್ ಪಡೆದು ಮುಂಡಾಯಿಸಿ ನೆಲೆ ಗಟ್ಟಿ ಮಾಡಿಕೊಂಡವನು, ಅದೇಗೊ ಡಿ.ಕೆ. ಶಿವಕುಮಾರ್ ಮತ್ತವನ ತಮ್ಮ ಡಿ.ಕೆ. ಸುರೇಶನ ಸಲುಗೆ ಸಂಪಾದಿಸಿಕೊಂಡಿದ್ದನು. ಇವರು ಬೇನಾಮಿ ದಂಧೆಗಳ ಪರಿಶೀಲನೆಗೆ ಬಳ್ಳಾರಿಗೆ ಬಂದಾಗ ಅವರ ಎಲ್ಲಾ ಅಗತ್ಯಗಳನ್ನು ಪೂರೈಸುವ ಪವರ್‌ಆಫ್ ಅಟಾರ್ನಿಯೇ ತಾನು ಅಂತ ನಾಚಿಕೆಬಿಟ್ಟು ಹೇಳಿಕೊಳ್ಳುವ ಈತ ಅದೆಂತಹ ತಲೆ ತೀಡುವ ಜಾಯಮಾನದವನೆಂದರೆ ತನ್ನ ವರ್ಚಸ್ಸಿಗೋಸ್ಕರ ಬಳ್ಳಾರಿ ಕಾಂಗ್ರೆಸ್ಸನ್ನೇ ವಿಂಗಡಿಸಿ ಬಳ್ಳಾರಿ ನಗರ ಹಾಗೂ ಬಳ್ಳಾರಿ ಗ್ರಾಮೀಣ ಕಾಂಗ್ರೆಸ್ ಅನ್ನೊ ಎರಡು ಭಾಗಮಾಡಿದ್ದ, ನಗರ ಕಾಂಗ್ರೆಸ್ಸಿಗೆ ತಾನೇ ಅಧ್ಯಕ್ಷನೆಂಬ ಅಪ್ಪಣೆ ಪತ್ರವನ್ನು ಜಿ. ಪರಮೇಶ್ವರ್‌ರಿಂದ ದೊರಕಿಸಿಕೊಂಡಿದ್ದಾನಾದರೂ, ಆ ಸ್ಥಾನಕ್ಕೆ ತಕ್ಕುನಾದ ಒಂದೇ ಒಂದು ಕ್ವಾಲಿಟಿಯೂ ಇವನಲ್ಲಿ ಕಾಣುವುದಿಲ್ಲ, ಹಾಗೆ ನೋಡಲು ಹೋದರೆ ಸ್ಪಷ್ಟ ಕನ್ನಡವೆನ್ನುವುದೇ ಈತನಿಗೆ ತಿಳಿದಿಲ್ಲ, ಈ ಲೆವೆಲ್ಲಿನ ದಗಲ್ಬಾಜಿಯನ್ನು ಕಾಂಗ್ರೆಸ್ ನೆಚ್ಚಿಕೊಂಡು ಹೋದರೆ ಅವಕಾಶವನ್ನು ಮತ್ತೊಮ್ಮೆ ಕಳೆದುಕೊಳ್ಳದೆ ಬೇರೆ ವಿಧಿಯೇ ಇರುವುದಿಲ್ಲ, ಯಾಕೆಂದರೆ, ಜನ ಬೆಂಬಲ ಹಾಗೂ ಸಂಘಟನೆಯ ಚಾತುರ್ಯತೆ ಕಿಂಚಿತ್ತೂ ಇಲ್ಲದ ಆಂಜನೇಯಲು, ಈಗಾಗಲೆ ಬಳ್ಳಾರಿಯ ಕುರುಬ, ಲಿಂಗಾಯತ, ವಾಲ್ಮೀಕಿ ಸಮಾಜಗಳ ವಿರೋಧಿ ಎಂಬ ಹಣೆಪಟ್ಟಿಯನ್ನೂ ಹಚ್ಚಿಕೊಂಡು ಕೂತಿದ್ದಾನೆ.



ರಿಯಲ್ ಎಸ್ಟೇಟಿನ ಹೆಸರಿನಲ್ಲಿ ಅಕ್ರಮ ಸೈಟು ವ್ಯವಹಾರವನ್ನೇ ವೃತ್ತಿಯಾಗಿಸಿಕೊಂಡಿರುವ ಈತ ಮಾತೆತ್ತಿದರೆ ಸಾಕು, ಡಿ.ಕೆ ಶಿವಕುಮಾರನ ಬಳ್ಳಾರಿಯ ದಂಧೆಗಳಿಗೆ ತಾನೆ ಇನ್‌ಚಾರ್ಜು, ಇನ್ನು ಡಿ.ಸಿ ಸಾಹೇಬರಂತು ತನ್ನ ಖಾಸಾ ದೋಸ್ತು, ಎಸ್.ಪಿ.ಯವರನ್ನಂತು ಕೇಳಲೇಬೇಡಿ ಖುದ್ದು ನನ್ನದೇ ಬಳಗ ಎಂಬ ಪರಾಕುಗಳನ್ನು ಹೇಳಿಕೊಂಡು ತಿರುಗಾಡುತ್ತಿರುತ್ತಾನೆ. ಒಟ್ಟಾರೆ ಪಕ್ಕಾ 420ಯೊಬ್ಬ ರಾಜಕಾರಣದಲ್ಲಿ ಅದೇನೇನೋ ಬಿಲ್ಡಪ್ ಕೊಟ್ಟುಕೊಳ್ಳಬಹುದೋ ಅವನ್ನೆಲ್ಲಾ ಕೊಟ್ಟುಕೊಂಡು ತನ್ನದೇ ಆದ ಖಾದಿ ಗತ್ತೊಂದನ್ನು ಸೃಷ್ಟಿಸಿಕೊಂಡಿದ್ದಾನೆ. ಆರ್.ಟಿ.ಐ ಆ್ಯಕ್ಟನ್ನು ಬಳಸಿಕೊಂಡು ಫಲಭರಿತ ಇಲಾಖೆಯ ಅಧಿಕಾರಿಗಳನ್ನೆ ಸದ್ದೆಂಡು, ಟ್ರಾನ್ಸ್‌ಫರ್ ಅಂತಾ ಬೆದರಿಸಿ ತನ್ನ ಕೆಲಸಗಳನ್ನು ಸಾಧಿಸಿಕೊಳ್ಳುವ ಐನಾತಿ ಐಡಿಯಾಗಳೂ ಇವನಲ್ಲಿ ಸಾಕಷ್ಟಿರಬೇಕಾದರೆ, ಸಾಮಾನ್ಯ ಜನರನ್ನು ಸುಮ್ಮನೆ ಬಿಟ್ಟಾನೆಯೆ? ಸೈಟು ಕೊಡಿಸ್ತೀನಿ, ಮನೆ ಕಟ್ಟಿಸಿಕೊಡ್ತೀನಿ ಅನ್ನೊ ಆಸೆಗಳನ್ನು ಹುಟ್ಟಿಸಿ ನಾಮ ಹಾಕುವುದರಲ್ಲಿ ಈತ ಇಡೀ ಬಳ್ಳಾರಿಗೇ ಫೇಮಸ್!


ರೆಡ್ಡಿ ಮೇಲೂ ಸದ್ದು!

ಸಿ.ಬಿ.ಐ.ನವರು ಬಿಗಿದ ಪಟ್ಟಿಗೆ ಶಾಶ್ವತವಾಗಿ ಚಂಚಲಗೂಡ ಹಕ್ಕಿಯಂತೆ ಒದ್ದಾಡುತ್ತಿರುವ ರೆಡ್ಡಿಯ ಹೆಸರನ್ನೂ ಬಳಸಿಕೊಳ್ಳುವುದನ್ನೀತ ಮರೆತಿಲ್ಲ, ಜನಾರ್ದನ ರೆಡ್ಡಿ ಅತ್ತ ಜೈಲು ಸೇರುತ್ತಿದ್ದಂತೆ ಬಳ್ಳಾರಿ ಬಿಜೆಪಿಗರಿಗೆ ಗ್ರಹಚಾರ ಒಂದೊಂದಾಗಿ ಶುರುವಾಗಿದ್ದವು. ಇದನ್ನೆ ಬಂಡವಾಳ ಮಾಡಿಕೊಂಡ ಆಂಜನೇಯಲು ಒಂದಿಷ್ಟು ಸುದ್ದಿ ಮಾಡುವ ಮಸಲತ್ತಿಂದ ಪತ್ರಿಕಾಗೋಷ್ಠಿ ಕರೆದು ಬಳ್ಳಾರಿಯ ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆಯ ಎಲ್ಲಾ ಬಿಜೆಪಿಗರೂ ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿದ್ದು, ಈಗ ಸಿಬಿಐ ಭೀತಿಯಿಂದ ತಲೆಮರೆಸಿಕೊಂಡಿದ್ದಾರೆ ಅಂತ ಅನೌನ್ಸು ಮಾಡಿದ್ದ ಇದರಿಂದ ಕೆರಳಿದ ಬಿಜೆಪಿಗರು ತನ್ನ ಮೇಲೆ ಮುಗಿಬೀಳಲಿದ್ದಾರೆಂಬ ಮಾಹಿತಿ ಸಿಗುತ್ತಿದ್ದಂತೆಯೇ ಒಂದೆರಡು ದಿನ ಕಣ್ಮರೆಯಾಗಿ ಮತ್ತೆ ಕಾಣಿಸಿಕೊಂಡವನೆ ತಾನಿಷ್ಟು ದಿನ ಮುಖ್ಯಮಂತ್ರಿ ಸದಾನಂದರ ಜೊತೆ ಮಾತುಕತೆ ನಡೆಸಿ ಬಂದಿದ್ದೇನೆ, ರೆಡ್ಡಿಗಳ ಮೇಲೆ ಏನು ದಾಖಲೆ ಬೇಕಾದರೂ ಒದಗಿಸಬಲ್ಲೆ ಎಂದವರಿಗೆ ತಿಳಿಸಿದ್ದೇನೆ , ಅವರಂತು ಫುಲ್ ಖುಷ್ ಆಗಿಬಿಟ್ಟಿದ್ದಾರೆ, ಆದಷ್ಟು ಬೇಗನೆ ನನ್ನನ್ನು ಕರೆದು ಮಾಹಿತಿ ಪಡೆದುಕೊಳ್ಳಲಿದ್ದಾರೆ. ಯಾರಾದರು ನನ್ನ ತಂಟೆಗೆ ಬಂದರೆ ಸದಸ್ಯತ್ವವನ್ನೇ ಕ್ಯಾನ್ಸಲ್ ಮಾಡಿಸ್ತೀನಿ ಅಂತ ಹೇಳಿಕೊಂಡು ತಿರುಗಲು ಪ್ರಾರಂಭಿಸಿದ್ದ, ಮೊದಲೇ ಗಾಲಿ ಇಲ್ಲದೆ ದಿಕ್ಕೆಟ್ಟ ಬಿಜೆಪಿ ಕ್ಯಾಂಡಿಡೇಟುಗಳು ಇದ್ದರೂ ಇರಬಹುದೇನೊ, ಯಾರಿಗೆ ಬೇಕು, ಅನ್ನಯ್ಯ ಹೊರಬರುವವರೆಗೆ ತೆಪ್ಪಗಿದ್ದುಬಿಡೋಣ ಅಂತ ಸದ್ಯಕ್ಕೆ ಸುಮ್ಮನಾಗಿದ್ದಾರೆ.

...ಬಿಜೆಪಿ ನೆರಳು?

...5

ಮಲ್ಲೇಶ್‌ಗಿಂತಲೂ ದಿನೇಶ್ ಗುಂಡೂರಾವ್ ವಿರುದ್ಧ, ಅದಕ್ಕೆ ಗಾಂಧಿನಗರದ ಕೌನ್ಸಿಲರ್ ನಟರಾಜ್, ...ಳಿಪುರದ ಚಕ್ರ ಪತ್ನಿ ಕ್ವೀನ್ ಎಲಿಜಬೇತ್, ದಯಾನಂದ ನಗರದ ಮುನಿರಾಜು ಪತ್ನಿ ಶಕೀಲ, ಕಾಟನ್‌ಪೇಟೆಯ ವಸಂತ ಕುಮಾರಿ ಮುಂತಾದ ದಿನೇಶ್ ಗುಂಡೂರಾವ್ ಬೆಂಬಲಿತ ಎಲ್ಲಾ ಕಾಂಗ್ರೆಸ್ ಕೌನ್ಸಿಲರ್‌ಗಳ ವಿರುದ್ಧವೂ ಅಕ್ರಮ ...ಮಗಾರಿಯ ಪುಕಾರೆಬ್ಬಿಸಿದ.



ನಾಗನ ಈ ಎಲ್ಲಾ ಹಾವಳಿ ಮತ್ತು ಆತನ ವಿರುದ್ಧ ಪೊಲೀಸ್ ನಿಷ್ಕ್ರಿಯತೆಯನ್ನು ಸೂಕ್ಷ್ಮವಾಗಿ ಗಮನಿಸಿದ ಕೌನ್ಸಿಲರ್ ಮಲ್ಲೇಶ್, ಇಷ್ಟರಲ್ಲೇ ತನ್ನ ಹತ್ಯೆಗೂ ಆತ ...ಯತ್ನಿಸಬಹುದೆಂಬ ಲೆಕ್ಕ ಹಾಕಿದ್ದಾರೆ. ರಕ್ಷಣೆಗೆ ಪೊಲೀಸರನ್ನೂ ಜೊತೆಗಿಟ್ಟುಕೊಂಡಿದ್ದಾರೆ. ಆದರೆ ಬಲಿಯಾಗಿದ್ದು ಪಕ್ಕದ ವಾರ್ಡಿನ ನಟರಾಜ್!

ಪಾಲಿಕೆ ಪಾಲಿಟಿಕ್ಸ್


ನಟರಾಜ್ ಹುಟ್ಟಾ ದಿನೇಶ್ ಗುಂಡೂರಾವ್ ಅಭಿಮಾನಿ. ಈತನ ತಂದೆ ಸುಂದರಂ ಮೂಲತಃ ತಮಿಳುನಾಡಿನ ಸೇಲಂನವನು. ಆ ...ಕ್ಕೆ ಬೆಂಗಳೂರಿಗೆ ವಲಸೆ ಬಂದು ಶುರುವಿನಲ್ಲಿ ಕಲಾಸಿಪಾಳ್ಯದ ತರಕಾರಿ ಮಂಡಿಯಲ್ಲಿ ಕೂಲಿಯಾಗಿದ್ದು ಕ್ರಮೇಣ ತಾನೇ ಮಲ್ಲೇಶ್ವರದ ಕಾರ್ಪೊರೇಷನ್ ಮಾರುಕಟ್ಟೆಯಲ್ಲೊಂದು ತರಕಾರಿ ಮಂಡಿ ಆರಂಭಿಸಿದ. ಪಕ್ಕದಲ್ಲೇ ಗುಂಡೂರಾವ್ ಮನೆಯಿತ್ತು. ತಂದೆ ಸುಂದರಂ ಜೊತೆ ಗೂಂಡೂರಾವ್ ಮನೆಗೆ ಹೋಗಿ ಬಂದು ಮಾಡುತ್ತಿದ್ದ ನಟರಾಜ್, ಕ್ರಮೇಣ ದಿನೇಶ್ ಗುಂಡೂರಾವ್ ಶಿಷ್ಯನಾದ. ಅದೇ ಹೊತ್ತಿಗೆ ಸಾಕಷ್ಟು ಖಮಾಯಿಸಿದ್ದ ಅಪ್ಪ ಸುಂದರಂ ತನ್ನ ಬೆಂಗಳೂರಿನ ವ್ಯವಹಾರವನ್ನೆಲ್ಲ ಮಗನಿಗೊಪ್ಪಿಸಿ ತಮಿಳುನಾಡಿಗೆ ವಾಪಸ್ಸಾದ. ಅಲ್ಲೊಂದು ಎಣ್ಣೆ ಫ್ಯಾಕ್ಟರಿ ತೆರೆದ. ಎಂ.ಜಿ.ಆರ್. ಅಭಿಮಾನಿಯಾದ್ದರಿಂದ ಸೇಲಂ ಜಿಲ್ಲಾ ಅಣ್ಣಾ ಡಿಎಂಕೆಗೆ ಕಾರ್ಯದರ್ಶಿಯೂ ಆದ.

ತಮಿಳುನಾಡಿನಲ್ಲಿ ಅಪ್ಪ ಅಣ್ಣಾ ಡಿಎಂಕೆಯಾದರೆ ಮಗ ಬೆಂಗಳೂರಿನಲ್ಲಿ ಕಾಂಗ್ರೆಸ್ ನಾಯಕ. ದಿನೇಶ್ ಗುಂಡೂರಾವ್ ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದೇ ನಟರಾಜನನ್ನು ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಶ್ರೀರಾಂಪುರದ ತಮಿಳರ ಮೇಲೆ ಆತನಿಗೊಂದು ಹಿಡಿತವಿತ್ತು, ದಿನೇಶ್ ಮೊದಲ ಬಾರಿಗೆ ಗಾಂಧಿನಗರದಿಂದ ಗೆದ್ದು ಶಾಸಕರಾದರೆ ಅದರಲ್ಲಿ ದೊಡ್ಡ ಪಾಲು ಈತನದಿತ್ತು, ಹಾಗೆ ನೋಡಿದರೆ ಕಳೆದ ಪಾಲಿಕೆ ಚುನಾವಣೆಯಲ್ಲಿ ಗಾಂಧಿನಗರ ವಾರ್ಡಿನ ಕಾಂಗ್ರೆಸ್ ಟಿಕೆಟ್ಟಿಗಾಗಿ ಅಶೋಕ್ ದಾನಿ, ರಘುನಾಥ್‌ರಂಥ ಹಿರಿಯ ಕಾರ್ಯಕರ್ತರ ಹಿಂದೇ ಇತ್ತು, ಶಾಸಕ ದಿನೇಶ್ ಇವರೆಲ್ಲರನ್ನೂ ಬದಿಗೊತ್ತಿ ನಟರಾಜ್‌ಗೆ ಟಿಕೆಟ್ಟು ಕೊಡಿಸಿದರು.





ಕಳೆದ ಪಾಲಿಕೆ ಚುನಾವಣೆ ಕೂಡ ಮತ್ತೆ ಕಾಂಗ್ರೆಸ್-ಬಿಜೆಪಿಯ ಹಣಾಹಣಿಗೆ ಕಾರಣವಾಯ್ತು. ನಟರಾಜ್ ವಿರುದ್ಧ ಬಿಜೆಪಿಯಿಂದ ನಿಂತಿದ್ದು ಪಿ.ಸಿ. ಮೋಹನ್‌ನ ಪಕ್ಕಾ ಬಂಟ ಕಬ್ಬನ್‌ಪೇಟೆಯ ರಾಮಚಂದ್ರ. ಆದರೆ ಬಾಂಬ್ ನಾಗನ ಕಟ್ಟರ್ ಬೆಂಬಲಿಗ ಮುರುಗನ್ ಕೂಡ ಇದೇ ನಟರಾಜ್ ವಿರುದ್ಧ ಜೆಡಿಎಸ್‌ನಿಂದ ನಿಂತುಬಿಟ್ಟ. ಎಲ್ಲರೂ ಲೆಕ್ಕ ಹಾಕಿದ್ದು ಬಿಜೆಪಿಯ ರಾಮಚಂದ್ರನೇ ಗೆಲ್ಲಬಹುದು ಎಂದು. ಆದರೆ ನಾನೂರು ಮತಗಳ ಅಂತರದಿಂದ ನಟರಾಜ್ ಗೆದ್ದುಬಿಟ್ಟ. ಸೋತ ರಾಮಚಂದ್ರನಿಗೂ ಜೆಡಿಎಸ್‌ನ ಮುರುಗನ್‌ಗೂ ಇದ್ದದ್ದು ಕೇವಲ ನೂರು ಮತಗಳ ಅಂತರ ಮಾತ್ರ.



ಯಾರ ಕೈಚಳಕ?

ನಟರಾಜ್‌ಗೆ 4600 ಮತಗಳು ಬಂದಿದ್ದರೆ ರಾಮಚಂದ್ರನಿಗೆ 4100 ಮತಗಳು ಮತ್ತು ಮುರುಗನ್‌ಗೆ 3900 ಮತಗಳು ಬಂದಿದ್ದವು. ಅಂದರೆ ಸೋತ ಇಬ್ಬರಿಗೂ ಗೆದ್ದವನೊಂದಿಗೆ ಇದ್ದದ್ದು ಕೇವಲ ಐನೂರು ಮತಗಳ ಅಂತರ. ದಿವಾನಾ ಅಲಿಯ ಹತ್ಯೆ ಹೇಗೆ ಗೃಹಮಂತ್ರಿ ಅಶೋಕ್ ಬಲಗೈ ಬಂಟ ಬಸವರಾಜನಿಗೆ ವರವಾಗಿ ಪರಿಣಮಿಸಿತೋ ಅದೇರೀತಿ ಪಿ.ಸಿ. ಮೋಹನ್‌ನ ಶಿಷ್ಯ ರಾಮಚಂದ್ರನಿಗಾಗಿ ನಟರಾಜ್ ಹತ್ಯೆಯಾಗಬೇಕಿತ್ತಾ? ಅದಕ್ಕೆಂದೇ ಪಿ.ಸಿ. ಮೋಹನ್ ಬಾಂಬ್ ನಾಗನನ್ನು ಪೋಷಿಸುತ್ತಾ ಬಂದರಾ? ಆ ಕಾರಣಕ್ಕೇ ಮಲ್ಲೇಶ್ವರಂ ಮತ್ತು ಶ್ರೀರಾಂಪುರದ ಪೊಲೀಸರು ಆತನ ಎಲ್ಲಾ ಅಟ್ಟಹಾಸಗಳನ್ನು ಸಹಿಸಿಕೊಂಡಿದ್ದರಾ? ಅಥವಾ ತನ್ನ ಪರಮಾಪ್ತ ಮುರುಗನ್‌ನ ಅನುಕೂಲಕ್ಕಾಗಿ ಮತ್ತೆ ಉಪಚುನಾವಣೆ ಬರಲೆಂದು ನಾಗನೇ ತನ್ನ ಕ್ರಿಮಿನಲ್ ಆಟ ಆಡಿಬಿಟ್ಟನಾ?

ಒಂದಂತೂ ಸತ್ಯ. ಓರ್ವ ಕೌನ್ಸಿಲರ್‌ನನ್ನು ಕೊಲ್ಲಬೇಕೆಂದರೆ ಅದರ ಹಿಂದೆ ದೊಡ್ಡ ರೊಕ್ಕ ಮತ್ತು ದೊಡ್ಡ ಕೈ ಇರಲೇಬೇಕು. ಅದು ಬಿಲ್ಡರ್ ಚಂದ್ರಪ್ಪನಾ? ವೈಯಾಲಿಕಾವಲ್‌ನ ಮೀಟರ್ ಬಡ್ಡಿ ರೆಡ್ಡಿಗಳಾ? ಮಂತ್ರಿ ಮಾಲ್ ಖದೀಮರಾ? ನಟರಾಜ್‌ಗೆ ಲಂಚ ಕೊಟ್ಟು ಕೈಸುಟ್ಟುಕೊಂಡ ಪಾಲಿಕೆ ಕಂಟ್ರಾಕ್ಟರ್‌ಗಳಾ? ಅಥವಾ ನಟರಾಜನಿಗಿದ್ದ ಕಾಮಲಾಲಸೆಯ ಪ್ರತಿಫಲವಾ?

ಕಮಿಷನರ್ ಮಿರ್ಜಿ ಮಾತ್ರವಲ್ಲ ಮುಖ್ಯಮಂತ್ರಿ ಸದಾನಂದ ಗೌಡರೇ 48 ಗಂಟೆಗಳೊಳಗೇ ಹಂತಕರಾರೆಂದು ಬಹಿರಂಗಪಡಿಸುತ್ತೇವೆಂದು ಹೇಳಿಕೆ ಕೊಡುತ್ತಾರೆಂದರೆ ಕ್ಲೂ ಸಿಕ್ಕಿರಲೇಬೇಕಲ್ಲ- ಯಾರದು?

ಮಂತ್ರಿ ಅಶೋಕನ ಪಿತೂರಿ?

ಮಂತ್ರಿ ಸೋಮಣ್ಣಗೆ ಎಕ್ಕಡದೇಟು





ಎಕ್ಕಡದೇಟಿನ ಪ್ರಸಾದ್

ಕೊಪ್ಪಳದಲ್ಲಿ ಕೈಚಳಕ ಮೆರೆದು ಕರಡಿ ಸಂಗಣ್ಣನನ್ನು ಗೆಲ್ಲಿಸಿ ತಂದ ಸೋಮಣ್ಣನ ವಿಜಯೋನ್ಮಾದಕ್ಕೆ ವಿಧಾನಸೌಧದಲ್ಲಿ ಕಾದಿದ್ದು ಚಪ್ಪಲಿ ಪೂಜೆ!

ಹೊಡೆದವನು ಬಿಜೆಪಿ ಕಾರ್ಯಕರ್ತ. ಪೆಟ್ಟು ತಿಂದದ್ದೂ ಬಿಜೆಪಿಯ ಮಂತ್ರಿ. ಯಾಕೆ ಹೊಡೆದ? ಹೊಡೆಸಿದ್ದು ಯಾರು? ಏನಿದರ ಮರ್ಮ? ಕೆದಕುವವರ್‍ಯಾರು?

ಮುಖ್ಯಮಂತ್ರಿ ಸದಾನಂದಗೌಡರ ಯಡ್ಡಿ ಬಣ ಮತ್ತು ಗೃಹಮಂತ್ರಿ ಅಶೋಕ್ ಅಧಿಪತ್ಯದ ಅನಂತ್‌ಕುಮಾರ್ ಪಾಳಯಗಳ ಒಳಕಚ್ಚಾಟ ಕೊನೆಕೊನೆಗೆ ಚಪ್ಪಲಿ ಏಟಿನ ಅಸಹ್ಯಕ್ಕೆ ಬಂದು ನಿಂತಿದೆ. ಇದನ್ನು ಕೊಪ್ಪಳದ ಜಯಭೇರಿಗೆ ಪ್ರತಿಯಾಗಿ ಯಡ್ಡಿ ವಿರೋಧಿಗಳು ದಳಪತಿ ಸೋಮಣ್ಣನ ಮೇಲೆ ತೀರಿಸಿಕೊಂಡ ಪ್ರತಿಕಾರವೆನ್ನಿ, ಬೆಂಗಳೂರಿನ ಅಧಿಪತ್ಯಕ್ಕಾಗಿ ಅಶೋಕ್ ಮತ್ತು ಸೋಮಣ್ಣನ ಮಧ್ಯೆ ಭುಗಿಲೆದ್ದ ಜಿದ್ದಾಜಿದ್ದಿಯೆನ್ನಿ, ಅನಂತ್‌ಕುಮಾರ್ ಮತ್ತು ಯಡ್ಡಿ ಬಣದ ಮಂತ್ರಿಗಳು ಒಬ್ಬರ ಮೇಲೊಬ್ಬರು ಕತ್ತಿಮಸೆಯುತ್ತಿರುವ ಪರಿಯನ್ನಿ, ಬಿಜೆಪಿ ಸರ್ಕಾರದಲ್ಲಿ ಒಕ್ಕಲಿಗರು ಮತ್ತು ಲಿಂಗಾಯತರ ನಡುವಿನ ಪ್ರಾಬಲ್ಯದ ಹಣಾಹಣಿಯೆನ್ನಿ; ಎಲ್ಲಕ್ಕೂ ಒಂದೇ ಉತ್ತರ ಹೌದೆಂದೇ ಬರುತ್ತದೆ.



ಮೊನ್ನೆ ಅಕ್ಟೋಬರ್ 1 ರ ಅಪರಾಹ್ನ ವಿಧಾನಸೌಧದ ತಮ್ಮ ಚೇಂಬರ್ ಪಕ್ಕದಲ್ಲೇ ಇರುವ ಸಮಿತಿ ಸಭಾಂಗಣದಲ್ಲಿ ರಾಜೀವ್ ಗಾಂಧಿ ವಸತಿ ನಿಮಗದ ಅಧಿಕಾರಿಗಳ ಸಭೆ ನಡೆಸುತ್ತಿದ್ದ ಸೋಮಣ್ಣ ಅರ್ಧದಲ್ಲೇ ಎದ್ದು ಬಂದು ಹೊರಗೆ ತಮಗಾಗಿ ಕಾಯುತ್ತಿದ್ದ ಬೆಂಬಲಿಗರನ್ನು ಮಾತನಾಡಿಸಿದ್ದಾರೆ. ಅದೇನಾಯಿತೋ ಇದ್ದಕ್ಕಿದ್ದಂತೆ ಗುಂಪಿನ ನಡುವಿದ್ದ ಆಸಾಮಿಯೊಬ್ಬ ತನ್ನ ಕಾಲಿಂದ ಚಪ್ಪಲಿ ತೆಗೆದದ್ದೇ ಸೋಮಣ್ಣನ ಮುಖಕ್ಕೆ ಬಾರಿಸಿಬಿಟ್ಟ. ತೂರಿದ ಚಪ್ಪಲಿ ಸರಿಯಾಗಿ ಸೋಮಣ್ಣನ ಕಪಾಳಕ್ಕೇ ಬಡಿದಿದೆ. ಬಿದ್ದ ಮೆಟ್ಟನೇಟಿಗೆ ಅವಾಕ್ಕಾದ ಸೋಮಣ್ಣ 'ಏಯ್... ಯಾರೋ ನೀನು....?' ಎನ್ನುವಷ್ಟರಲ್ಲೇ ಪಕ್ಕ ನಿಂತಿದ್ದ ಸೋಮಣ್ಣನ ಬಂಟ ವಿಶ್ವನಾಥಗೌಡನ ಗ್ಯಾಂಗ್ ಚಪ್ಪಲಿಯಲ್ಲಿ ಹೊಡೆದಾತನನ್ನು ಹಿಡಿದಿದ್ದೇ ಹಿಗ್ಗಾಮುಗ್ಗಾ ಥಳಿಸಿದೆ.

ಇನ್ನೇನು ಯಡವಟ್ಟಾಗುತ್ತೋ ಎಂದು ಹೆದರಿದ ಸೋಮಣ್ಣ ತಾನೇ ಮುನ್ನುಗ್ಗಿ ಒದೆ ತಿನ್ನುತ್ತಿದ್ದ ಚಪ್ಪಲಿ ದಾಳಿಗನನ್ನು ಬಿಡಿಸಿದ್ದಾನೆ. ಅಷ್ಟರಲ್ಲೇ ವಿಧಾನಸೌಧದ ಪೊಲೀಸರು ಬಂದು ಹೊಡೆದವನನ್ನು ಎಳೆದೊಯ್ದಿದ್ದಾರೆ. ಕೇಳಿದರೆ 'ನಾನೂ ಒಬ್ಬ ಬಿಜೆಪಿ ಕಾರ್ಯಕರ್ತ. ಪಕ್ಷದಿಂದ ನನಗೆ ಅನ್ಯಾಯವಾಗಿದೆ. ರೋಸತ್ತು ಸೋಮಣ್ಣಂಗೆ ಚಪ್ಪಲಿಯಲ್ಲಿ ಹೊಡೆದಿದ್ದೇನೆ....' ಇತ್ಯಾದಿ ಏನೇನೋ ಬಡಬಡಿಸುತ್ತಿದ್ದ. ಆತನ ಹಿನ್ನೆಲೆ ವಿಚಾರಿಸಿ ಜೇಬು ತಡಕಾಡಿದ ನಂತರವೇ ಗೊತ್ತಾಗಿದ್ದು ಆತ ಗಂಗೇನಹಳ್ಳಿಯ ಪುಡಿ ಕಂಟ್ರಾಕ್ಟರ್ ೪೫ ರ ವಯಸ್ಸಿನ ಬಿ.ಎಸ್. ಪ್ರಸಾದ್ ಎಂದು. ಮೂಲತಃ ತುಮಕೂರಿನ ಲಿಂಗಾಯತ ಪುಡಾರಿಯಾದ ಪ್ರಸಾದ್ ಇಂಜನಿಯರಿಂಗ್ ಪದವೀಧರ. ಗಂಗೇನಹಳ್ಳಿ ಹಕ್ಕದ ಸಂಜೀವಿನಿ ನಗರದಲ್ಲಿ ಈತನ ಮನೆಯಿದೆ. ತಾನು ಕಳೆದ ಉಪಚುನಾವಣೆಯಲ್ಲಿ ಸೋಮಣ್ಣನ ಪರ ಗೋವಿಂದರಾಜನಗರದಲ್ಲಿ ಸಿಕ್ಕಾಪಟ್ಟೆ ದುಡಿದೆನೆಂದೂ, ಕೊಪ್ಪಳದ ಉಪಚುನಾವಣೆಯಲ್ಲೂ ದುಡಿದೆನೆಂದೂ, ತನಗೆ ಯಾವುದಾದರೂ ನಿಗಮ-ಮಂಡಳಿಗೆ ಅಧ್ಯಕ್ಷನನ್ನಾಗಿ ನೇಮಿಸುವಂತೆ ಮಂತ್ರಿ ಸೋಮಣ್ಣನನ್ನು ಬಗೆಬಗೆಯಾಗಿ ಬೇಡಿಕೊಂಡರೂ ಆತನಿಂದ ನಯಾಪೈಸೆ ಪ್ರಯೋಜನವಾಗಲಿಲ್ಲವೆಂದೂ; ಅದಕ್ಕೇ ಬೇಸತ್ತು ಈ ಕೆಲಸ ಮಾಡಿಬಿಟ್ಟೆ ಎಂದು ಪ್ರಸಾದ್ ಪೊಲೀಸರೆದುರು ಕಂಠಪಾಠ ಒಪ್ಪಿಸುತ್ತಿದ್ದ.

ಇದರ ಸತ್ಯಾಸತ್ಯೆ ಕೆದಕಹೊರಟ ಪತ್ರಕರ್ತರಿಗೆ ಅಚ್ಚರಿಯೆನಿಸಿದ್ದು 'ಆತ ಯಾರೋ ನನಗೆ ಗೊತ್ತೇ ಇಲ್ಲ....' ಎಂದು ಸೋಮಣ್ಣ ಕೈ ಚೆಲ್ಲಿದ ನಂತರವೆ. 'ಇಲ್ಲಿಗೆ ಹತ್ತು ದಿನದ ಹಿಂದೆ ಬಂದು ಏನೋ ಕೆಲಸಕ್ಕೆಂದು ಶಿಫಾರಸ್ಸು ಪತ್ರ ಕೇಳಿದ್ದ. ನೆರವು ಕೇಳಿ ಬರುವ ಪ್ರತಿಯೊಬ್ಬರಿಗೂ ಕೊಡುವಂತೆ ಈತನಿಗೂ ಪತ್ರ ಕೊಟ್ಟಿದ್ದು ಬಿಟ್ಟರೆ ಅದರ ಹಿಂದಾಗಲಿ ಮುಂದಾಗಲಿ ಆತನ್ನು ನೋಡೇ ಇಲ್ಲ. ಅವತ್ತು ಪತ್ರ ಕೊಟ್ಟದ್ದೇ ಕೊನೆ ಆನಂತರ ಆತನನ್ನು ನೋಡುತ್ತಿರುವುದು ಇವತ್ತೆ. ತಾಯಾಣೆಗೂ ಆತ ಯಾರು ಅನ್ನೋದೇ ನನಗೊತ್ತಿಲ್ಲ!'

ಸೋಮಣ್ಣನ ಆಣೆ ಪ್ರಮಾಣ ಕೇಳಿದ ಮೇಲೆ ವಿಜಯನಗರದ ಆತನ ಬೆಂಬಲಿಗರನ್ನು ವಿಚಾರಿಸಿ ನೋಡಿದಾಗಲೂ ಈ ಪ್ರಸಾದ್ ಯಾರು ಎತ್ತ ಎಂಬುದೇ ಯಾರಿಗೂ ಗೊತ್ತಿರಲಿಲ್ಲ, ಅಲ್ಲಿಗೆ ಸೋಮಣ್ಣನ ಪಾಳಯಕ್ಕೀತ ಎಂಟ್ರಿಯಾಗಿದ್ದೇ ಹತ್ತು ದಿನಗಳ ಹಿಂದೆ ಎಂಬುದು ಎಂಥವರಿಗೂ ಅರ್ಥವಾಗುತ್ತಿತ್ತು. ಹಾಗಿದ್ದರೆ ಪ್ರಸಾದ್ ತಾನು ಸೋಮಣ್ಣನ ಬೆಂಬಲಿಗನೆಂದೂ ಆತನಿಗಾಗಿ ದುಡಿದು ಏನೂ ಪ್ರಯೋಜನವಾಗದೇ ಇದ್ದುದ್ದಕ್ಕೆ ರೋಸತ್ತು ಚಪ್ಪಲಿಯಲ್ಲಿ ಹೊಡೆದೆ ಎಂದೂ ಏಕೆ ಸುಳ್ಳು ಹೇಳುತ್ತಿದ್ದಾನೆ? ನಿಜಕ್ಕೂ ಬೆಂಬಲಿಗನೇ ಆಗಿದ್ದರೆ ಏಕೆ ಎಕ್ಕಡದೇಟು ಹಾಕುತ್ತಾನೆ? ಹಾಗಿದ್ದರೆ ಸೋಮಣ್ಣನ ಜೊತೆಗಿದ್ದ ಯಾರಾದರೂ ಆತನ ಗುರುತು ಹಿಡಿಯಬೇಕಿತ್ತಲ್ಲವೆ?



ಅಲ್ಲಿಗೆ ಪ್ರಸಾದ್ ಸೋಮಣ್ಣನ ಬೆಂಬಲಿಗನಲ್ಲ ಮತ್ತು ಆತನಿಗೆ ಸೋಮಣ್ಣನಿಂದ ಅನ್ಯಾಯವಾಗಿಲ್ಲ ಎಂಬುದು ನಿಕ್ಕಿಯಾಗಿತ್ತು. ಸೋಮಣ್ಣನಿಗೆ ಎಕ್ಕಡದೇಟು ಬಿತ್ತೆಂಬ ಸುದ್ದಿ ಕೇಳಿದ್ದೇ ತಡ ದೆಹಲಿಯಿಂದ ಮುಖ್ಯಮಂತ್ರಿ ಸದಾನಂದ ಗೌಡರೇ ಫೋನ್ ಮಾಡಿ ಯೋಗಕ್ಷೇಮ ವಿಚಾರಿಸಿಕೊಂಡಿರುವಾಗ ಗೃಹಮಂತ್ರಿ ಅಶೋಕ್ ಕನಿಷ್ಠ ಸೌಜನ್ಯಕ್ಕಾದರೂ ಸೋಮಣ್ಣನಿಗೆ ಸಾಂತ್ವನ ಹೇಳಬೇಕಿತ್ತಲ್ಲವೆ? ಕಾಟಾಚಾರಕ್ಕೂ ಅಶೋಕ್ ಸೋಮಣ್ಣನ ಯೋಗಕ್ಷೇಮ ವಿಚಾರಿಸಲಿಲ್ಲ ಎಂಬ ಒಂದೇ ಸಂಗತಿಯೇ ಇಡೀ ಪ್ರಕರಣದ ಒಳಮರ್ಮಕ್ಕೆ ಕನ್ನಡಿ ಹಿಡಿದಂತಿತ್ತು.

ತೀರ ಕೆದಕಿ ನೋಡಿದರೆ ಸೋಮಣ್ಣನಿಗೆ ಎಕ್ಕಡದೇಟು ಕೊಟ್ಟ ಬಿ.ಎಸ್. ಪ್ರಸಾದ್ ಜಾತಿಯಲ್ಲಿ ಲಿಂಗಾಯತನಾದರೂ ವೈಯಕ್ತಿಕವಾಗಿ ಗೃಹಮಂತ್ರಿ ಅಶೋಕ್‌ರ ಪಕ್ಕಾ ಶಿಷ್ಯ. ಅಶೋಕ್‌ರ ಅಣ್ಣನ ಮಗ ರವಿ ಎಂಬ ಹಳೇ ಆರೆಸ್ಸೆಸ್ ಕಾರ್ಯಕರ್ತನ ಮನೆಗೆ ಹೊಂದಿಕೊಂಡೇ ಈತನ ಸಂಜೀವಿನಿ ನಗರದ ಮನೆಯಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣ ಭೈರೇಗೌಡರ ವಿರುದ್ಧ ಬ್ಯಾಟರಾಯನಪುರಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದ ಅಶೋಕ್ ತಮ್ಮ ರವಿ ಆರೆಸ್ಸೆಸ್ ಮಟ್ಟಿಗೆ ಅಶೋಕ್‌ಗಿಂತಲೂ ಹಿರಿಕ. ಮುಂಬರುವ ಚುನಾವಣೆಯಲ್ಲಿ ತಮ್ಮ ರವಿಯನ್ನು ದಾಸರಹಳ್ಳಿಗೇ ತಂದು ಹಾಲಿ ಶಾಸಕ ಮುನಿರಾಜುವನ್ನು ಹೊರದಬ್ಬುವ ಅಶೋಕ್ ಹುನ್ನಾರದ ಫಲವಾಗೇ ರವಿ ಈಗ ಬಿಬಿಎಂಪಿಯ ಉತ್ಪತ್ತಿಗೆ ಕೈಹಾಕಿದ್ದಾನೆ. ತನ್ನ ಛೇಲಾ ಪ್ರಸಾದ್‌ಗೆ ಒಂದಷ್ಟು ಬಿಬಿಎಂಪಿ ಕಾಮಗಾರಿಗಳನ್ನೂ ಇದೇ ರವಿ ಅಶೋಕ್ ಮೂಲಕ ಕೊಡಿಸಿದ್ದಾನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇದೇ ಪ್ರಸಾದ್, ಅಶೋಕ್ ತಮ್ಮ ರವಿ ಪರವಾಗಿ ಬ್ಯಾಟರಾಯನಪುರದಲ್ಲಿ ದುಡಿದಿದ್ದ.

ಜಾತಿಯಲ್ಲಿ ಲಿಂಗಾಯತನಾದ ತನ್ನ ಭಟ್ಟಂಗಿಯನ್ನು ಬಳಸಿಕೊಂಡು ಸೋಮಣ್ಣನಿಗೊಂದು ಬಿಸಿ ಮುಟ್ಟಿಸಿದರೆ ಪಕ್ಷ ಮತ್ತು ಸರ್ಕಾರದ ಮಟ್ಟದಲ್ಲಿ ಸೋಮಣ್ಣನಿಗೆ ಮುಖಭಂಗವಾದಂತಾಗಿ ತನ್ನ ದಾರಿ ಸಲೀಸಾಗುತ್ತದೆಯೆಂದು ಮಂತ್ರಿ ಅಶೋಕ್ ಲೆಕ್ಕ ಹಾಕಿರಬಹುದೆ? ಅಥವಾ ಅಣ್ಣನ ಪರವಾಗಿ ತಮ್ಮ ರವಿ ಆ ಕೆಲಸ ಮಾಡಿದನಾ? ಬಹುಶಃ ಅಶೋಕ್ ಮನವೊಲಿಸಲೆಂದು ಸೋಮಣ್ಣನ ಹಳೇ ಶಿಷ್ಯ ಮತ್ತು ಹಾಲಿ ವಿಜಯನಗರದ ಕೌನ್ಸಿಲರ್ ರವೀಂದ್ರ ಇಂಥದ್ದೊಂದು ದುಸ್ಸಾಹಸಕ್ಕೆ ಕೈಯಿಟ್ಟನಾ?

....12

ರಂಭಾಪುರೀ ಜಾತ್ರೇಲಿ ಸಿ.ಎಂ. ಸದಾನಂದರೂ ಚಪ್ಪಲಿ ಪೂಜೆ ವಿರುದ್ಧ ಬೀದಿಗಿಳಿದ ಮಠಾಧೀಶರೂ...!

ಸೋಮಣ್ಣನಿಗೆ ಚಪ್ಪಲಿಯೇಟು ಬಿದ್ದ ಸುದ್ದಿ ಟೀವಿಗಳಲ್ಲಿ ಮಿಂಚಿದ ಮರುಗಳಿಗೆಯಲ್ಲೇ ಅರ್ಧಡಜನ್ ವೀರಶೈವ ಮಠಾಧೀಶರು ಬೀದಿಗಿಳಿದು ಪ್ರತಿಭಟಿಸಿದ್ದರ ಮರ್ಮವೇನು?



ವಿಧಾನಸೌಧದ ಹಿಂಭಾಗದಲ್ಲೇ ಅದೂ ಬಸವಣ್ಣನ ಪ್ರತಿಮೆಯಿರುವ ಚಾಲುಕ್ಯ ಸರ್ಕಲ್ಲಿನಲ್ಲಿ ಕುಪ್ಪೂರು ಗದ್ದುಗೆ ಮಠದ ಸ್ವಾಮೀಜಿ, ಪುರಿಗಾಲಿಯ ಜಯದೇವ ಶಿವಾಚಾರ್ಯಸ್ವಾಮಿ, ಸಿದ್ಧರ ಬೆಟ್ಟದ ಸ್ವಾಮೀಜಿ, ಕಂಬಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿ, ಮಾಲೂರು ಬೆಳ್ಳಾವಿ ಮಠದ ಸ್ವಾಮೀಜಿ ಮತ್ತು ಕಲ್ಲಬಾಳು ಮಠದ ಶಿವಕುಮಾರ ಶಿವಾಚಾರ್ಯ ಸ್ವಾಮಿ ಇತ್ಯಾದಿ ಪುಡಿಪುಡಿ ಮಠಾಧೀಶರೆಲ್ಲ ಬೀದಿಗಿಳಿದು ರಸ್ತೆತಡೆ ನಡೆಸಿಬಿಟ್ಟರು. ಸೋಮಣ್ಣನ ನಂಬಿಕಸ್ತ ಬಂಟರಾದ ಪಾಲನೇತ್ರ ಮತ್ತು ಸಿ.ಎಂ. ರಾಜಪ್ಪ ಮುಂತಾದ ಲಿಂಗಾಯತ ಪುಡಾರಿಗಳ ನೇತೃತ್ವದಲ್ಲಿ ಮಠಾಧಿಪತಿಗಳು ರಸ್ತೆಗಿಳಿದು ಪ್ರತಿಭಟಿಸಿದ್ದು ಬಹುಶಃ ಕ್ರಾಂತಿಯೋಗಿ ಬಸವಣ್ಣನಿಗೆ ಅಪಚಾರವಾದಾಗಲೂ ನಡೆದಿರಲಿಲ್ಲ.


ಇದು ಯಡ್ಡಿ ನಂತರ ಸೋಮಣ್ಣನಿಗೆ ಲಿಂಗಾಯತ ಸಮೂಹದ ಮೇಲೆ ಎಂಥಾ ಹಿಡಿತವಿದೆಯೆಂಬುದಕ್ಕೆ ಸಣ್ಣ ನಿದರ್ಶನವಷ್ಟೇ. ಇಷ್ಟೆಲ್ಲಕ್ಕೂ ಕಾರಣವಾದದ್ದು ಸೋಮಣ್ಣನೇ ನಿಂತು ರಾಜಾಜಿನಗರದ ರಾಮಮಂದಿರ ಆಟದ ಮೈದಾನದಲ್ಲಿ ನಡೆಸುತ್ತಿರುವ ರಂಭಾಪುರಿ ಜಾತ್ರೆ.

ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳಾದ ಪ್ರಸನ್ನ ರೇಣು ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯರನ್ನು ಬೆಂಗಳೂರಿಗೆ ಕರೆಸಿ ಶರನ್ನವರಾತ್ರಿ ದಸರೆಯ ನೆಪದಲ್ಲಿ ಸಮಸ್ತ ಲಿಂಗಾಯತರನ್ನೆಲ್ಲ ಸಂತೆ ಸೇರಿಸಲೆಂದೇ ಸೋಮಣ್ಣ ಕೋಟಿ ಲೆಕ್ಕದ ಕಾರ್ಯಕ್ರಮವನ್ನು ಹಮ್ಮಿಕೊಂಡ. ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 6 ರ ತನಕ ಸತತ ಒಂಭತ್ತು ದಿನಗಳ ಕಾಲ ನಡೆಯುವ ರಂಭಾಪುರಿ ಜಾತ್ರೆಯನ್ನು ಮುಖ್ಯಮಂತ್ರಿ ಸದಾನಂದಗೌಡರೇ ಬಂದು ಉದ್ಘಾಟಿಸಿದರೆ ಅದರ ಕೇಂದ್ರಬಿಂದುವಿನಂತಿದ್ದದ್ದು ಅನಭಿಷಕ್ತ ಸಿ.ಎಂ. ಯಡ್ಡಿ.


ದೇವೇಗೌಡರ ಪುತ್ರ ರೇವಣ್ಣ, ವಿರೋಧಿ ನಾಯಕ ಸಿದ್ಧರಾಮಯ್ಯ, ಕೋರೆ, ಸುರೇಶ್ ಕುಮಾರ್, ರೇಣುಕಾಚಾರ್ಯ, ಬಚ್ಚೇಗೌಡ, ಯಡ್ಡಿ ಮಗ ರಾಘು ಇತ್ಯಾದಿ ಕಂಡಕಂಡ ಮಂತ್ರಿಗಳು, ಶಾಸಕರು, ವಿರೋಧಿ ನಾಯಕರನ್ನೆಲ್ಲ ಕರೆತಂದು ರಂಭಾಪುರಿ ಸ್ವಾಮಿಯ ಸನ್ನಿಧಿಗೆ ಕೆಡವಿದ ಸೋಮಣ್ಣನ ಆರ್ಭಟ, ಬೆಂಗಳೂರಿನುದ್ದಕ್ಕೂ ಹಾಕಿದ ಫ್ಲೆಕ್ಸ್-ಬ್ಯಾನರುಗಳು, ಪುಟಗಟ್ಟಲೇ ಪ್ರತಿಕಾ ಜಾಹೀರಾತು ಕಂಡೇ ಅಶೋಕ್ ಹೊಟ್ಟೆಕಿಚ್ಚಿಗೆ ಬಿದ್ದು ಮೈ ಪರಚಿಕೊಂಡರಂತೆ. ಅತ್ತ ಕೊಪ್ಪಳದಲ್ಲಿ ಸಿ.ಟಿ. ರವಿ ಸೇರಿದಂತೆ ತಾನೂ ಸೇರಿ ಯಡ್ಡಿ ಶಿಷ್ಯ ಸಂಗಣ್ಣ ಕರಡಿಯನ್ನು ಸೋಲಿಸಲಾಗದ ಪೇಚು. ತನ್ನಿಂದ ಬೆಂಗಳೂರು ಉಸ್ತುವಾರಿಯನ್ನು ಕಸಿದುಕೊಳ್ಳುವ ದಿಗಿಲು. ಏನೇ ಕಾಲೆಳೆದರೂ ಮಣಿಯದ ಸೋಮಣ್ಣನ ಚಾಲಾಕು. ಅಶೋಕ್ ಹತಾಶೆ ಸ್ಫೋಟಗೊಳ್ಳಲು ಇಷ್ಟು ಸಾಕಲ್ಲವೆ?

ದಾಸರಹಳ್ಳಿಯಲ್ಲಿ ನಕ್ಕಳಾ ರೂಪಾದೇವಿ

ಯಾರೇ ಕೈಬಿಟ್ಟರೂ ಗೋವಿಂದರಾಜನಗರದ ಕೌನ್ಸಿಲರ್ ಮೋಹನ್‌ಕುಮಾರ್ ತನ್ನ ಕೈಬಿಡಲಾರ ಎಂಬ ಸೋಮಣ್ಣನ ನಂಬಿಕೆ ಹೇಗೆ ಮಣ್ಣುಕಚ್ಚಿದೆಯೆಂದರೆ; ನಿನ್ನೆ ಮೊನ್ನೆ ತನಕ ನೀನೆ ತಂದೆ ನೀನೇ ತಾಯಿ ಎಂದು ಭಜನೆ ಮಾಡುತ್ತಿದ್ದ ಗೊಲ್ಲರ ಮೋಹನಕುಮಾರ ಈಗ ಸಂಜೆಯಾದರೆ ಸಾಕು ಅಶೋಕ್ ಆಸ್ಥಾನದಲ್ಲಿ ಕಂಗೊಳಿಸುತ್ತಿದ್ದಾನೆ. ಜನ್ಮಾಪಿ ಕೌನ್ಸಿಲರ್ ಅಲ್ಲ; ಬಿಬಿಎಂಪಿಯ ಪುಡಿ ಕಂಟ್ರಾಕ್ಟರಿಕೆಗೂ ನಾಲಾಯಕ್ಕಾಗಿದ್ದ ಮಾರುತಿ ಮಂದಿರದ ಐನಾತಿ ಕಾರ್ಪೊರೇಟರ್ ವಾಗೀಶನಿಗೀಗ ಸೋಮಣ್ಣ ಲೆಕ್ಕಕ್ಕೇ ಇಲ್ಲ. ಪುನರ್ಜನ್ಮ ಕರುಣಿಸಿದ ಸೋಮಣ್ಣನಿಗಿಂತಲೂ ವಾಗೀಶನಿಗೀಗ ಅಶೋಕ್ ಮುಖ್ಯ. ಅದು ಕೇವಲ ಜಾತಿಮೋಹ ಮಾತ್ರವಲ್ಲ, ಕೋಟಿಕೋಟಿ ಕಾಮಗಾರಿಯ ರೊಕ್ಕ ನುಂಗುವ ದುರಾಸೆ. ಗೆದ್ದ ರವೀಂದ್ರ ಹೇಗೆ ಜಾತಿ ಲಾಲಸೆಗೆ ಬಿದ್ದು ಸೋಮಣ್ಣನಿಗೆ ಕೈಕೊಟ್ಟನೋ ಹಾಗೇ ವಾಗೀಶನೂ ದೋಖಾ ಮಾಡಿ ಅಶೋಕ್ ತೆಕ್ಕೆಗೆ ಜಾರಿಬಿಟ್ಟ. ಸೋಮಣ್ಣನ ಪಾಳಯದ ಇವರಿಬ್ಬರು ಕೌನ್ಸಿಲರ್‌ಗಳ ದೋಖಾ ಒತ್ತಟ್ಟಿಗಿರಲಿ, ಅಗ್ರಹಾರ ದಾಸರಹಳ್ಳಿಯ ರೂಪಾದೇವಿಗೆ ಏನು ಕಮ್ಮಿಯಾಗಿತ್ತು?



ರೂಪಾದೇವಿ ಹೇಳಿಕೇಳಿ ಸುಂದರಿ. ಯಾವ ಸಿನಿಮಾ ನಟಿಗೂ ಕಮ್ಮಿಯಿಲ್ಲದ ಹಾಗೆ ಹಲ್ಲು ಕಿರಿಯುವುದೂ ಗೊತ್ತು, ಪೋಜು ಕೊಡುವುದೂ ಉಂಟು. ಜನ ಓಟು ಕೊಟ್ಟದ್ದೇ ತನ್ನ ಸೌಂದರ್ಯ ಮತ್ತು ಮಾದಕ ನಗುವಿಗಾಗಿ ಎಂದು ಅದ್ಯಾವ ಕುಯುಕ್ತಿ ಈಕೆಯ ತಲೆ ಹೊಕ್ಕಿತೊ! ಅಷ್ಟಕ್ಕೂ ದಾಸರಹಳ್ಳಿಯ ಜನ ಈಕೆಯನ್ನು ಗೆಲ್ಲಿಸಿದ್ದು ಈಕೆಯ ಮೇಕಪ್ಪಿಗಾಗಲಿ, ಬಿಜೆಪಿಗಾಗಲಿ, ಸೋಮಣ್ಣನ ಕಾರಣಕ್ಕಾಗಲಿ ಅಲ್ಲ, ಈಕೆಯ ಮಾವ ಮುನ್ನರಸಪ್ಪನ ಮುಖ ನೋಡಿ. ಮುನ್ನರಸಪ್ಪ ದಾಸರಹಳ್ಳಿಯ ಹಿರೀಕ ಮತ್ತು ಸಂಭಾವಿತ. ಈಕೆಯ ಗಂಡ ವಿಜಯ್‌ಕುಮಾರ್ ಸಭ್ಯ. ಕಾಂಗ್ರೆಸ್ಸಿಗೆ ನಿಂತಿದ್ದ ಮಲ್ಲಯ್ಯನ ಮಗಳಿಗಿಂತಲೂ ಮುನ್ನರಸಪ್ಪನ ಸೊಸೆ ರೂಪಾದೇವಿಯೇ ಲಾಯಕ್ಕೆಂದು ದಾಸರಹಳ್ಳಿಯ ಜನ ಗೆಲ್ಲಿಸಿದರೆ, ಈಗ ರೂಪಾದೇವಿ ತನ್ನ ಗಂಡ ಮತ್ತು ಮಾವನಿಗೇ ಉಲ್ಟಾ ಹೊಡೆದು ಅಶೋಕ್ ಆಸ್ಥಾನದಲ್ಲಿ ಮಿಂಚುತ್ತಿದ್ದಾಳೆ.


ಚಮನ್



ಜೈಲಿಗೆ ಬಂದ ಗೂಂಡಾ ಚಮನ್
ರೆಡ್ಡಿಗೆ ಪ್ರಾಣಭಯ!

"ಚಮನ್...."

...ದಾಪು ಚಮನ್ ಇವನ ಪೂರ್ತಿ ಹೆಸರು. ...ಕ್ಷದ ಆಂಧ್ರ ರಾಷ್ಟ್ರದ ಪ್ರತಿ ಪ್ರಜೆಗೂ ಗೊತ್ತಿರುವ ...ಕ ಗ್ಯಾಂಗ್‌ಸ್ಟರ್ ದಾದಾಪು ಚಮನ್ ಈಗ ತಾನೇ ... ಕಾಣಿಸಿಕೊಂಡಿದ್ದಾನೆ! ಅಷ್ಟೇ ಅಲ್ಲ ಒಳಗೆ ...ಸಿದ್ದಾನೆ!!

...ಮಗೆ ಆಶ್ಚರ್ಯ-ಗೊಂದಲವಾಗುತ್ತಿದೆಯಾ? ...ದ ಏಳು ವರ್ಷಗಳಿಂದ ತಲೆಮರೆಸಿಕೊಂಡಿದ್ದ ... ಭೂಗತ ಜೀವನದಿಂದ ಹೊರಬಂದು ಆಂಧ್ರ ...ಸರಿಗೆ ಶರಣಾಗಿದ್ದಾನೆ. ಹಾಗೆ ಹೊರಗೆ ...ಕೊಂಡು ಶರಣಾದ ಚಮನ್‌ನನ್ನು ಪೊಲೀಸರು ...ದ್ದಾರೆ. ಚಮನ್ ಈಗ ಜೈಲಿಗೆ ಕಾಲಿರಿಸಿದ್ದಾನೆ. ...ದೀ ಆಂಧ್ರದಾದ್ಯಂತ ಸಂಚಲನ ಸೃಷ್ಟಿಸಿರುವ ಚಮನ್ ... ಪ್ರತ್ಯಕ್ಷವು ರಾಯಲಸೀಮಾ ಪ್ರಾಂತ್ಯದಲ್ಲಿ ಹೊಸ ...ತ್ತೆ ಸೃಷ್ಟಿಸುವ ಭೀತಿಯನ್ನು ಉಂಟು ಮಾಡುತ್ತಿದೆ. ... ಚಮನ್‌ನ ಬೇರೆ ಯಾರೂ ಅಲ್ಲ ಪೆರಿಟಾಲ್ ... ಬಲಗೈ ಬಂಟ! ಜನಾರ್ದನ ರೆಡ್ಡಿಯ ಶತ್ರುಗಳಿವರು. ... ಮತ್ತೆ ಕಾಣಿಸಿಕೊಂಡಿರುವ ಸುದ್ದಿ ಕೇಳಿ ಗಾಲಿ ...ನ ರೆಡ್ಡಿ ನಿಜಕ್ಕೂ ಹೆದರಿ ಹೋಗಿದ್ದಾನೆ!

...ದರಾಬಾದಿನ ಚಂಚಲಗುಡ ಜೈಲಿನಲ್ಲಿರುವ ರೆಡ್ಡಿ ... ಅಕ್ಟೋಬರ್ 3ರಂದು ಸಿಬಿಐ ವಿಶೇಷ ನ್ಯಾಯಾಲ... ಹಾಜರಾಗಬೇಕಿತ್ತು. ಆದರೆ ಪೊಲೀಸರು ರೆಡ್ಡಿಯನ್ನು ...ಗೆ ಕರೆ ತರದೆ ವಿಡಿಯೋ ಕಾನ್ಫರೆನ್ಸ್ ಮೂಲಕವೇ ...ಣೆ ನಡೆಸುವಂತೆ ಕೋರಿದ್ದರು. ಇದಕ್ಕೆ ಸೆಕ್ಯೂರಿಟಿ ... ಇದೆ ಎಂದಿದ್ದಾರೆ ಪೊಲೀಸರು!

...ಗೆಂದರೆ ಆ ಸೆಕ್ಯೂರಿಟಿ ಸಮಸ್ಯೆಗೆ ಚಮನ್ ಕಾರಣ ...ಗುತ್ತದೆ. ಮೊನ್ನೆ ಸೋಮವಾರ ಸಿಬಿಐನವರು ರೆಡ್ಡಿಯ ... ಕಂಪೆನಿ ಮೇಲೆ ಹಾಗೂ ರೆಡ್ಡಿಯ ಹೆಂಡತಿಯಿರುವ ... ಮೇಲೆ ದಾಳಿ ನಡೆಸಿದಾಗ ಶ್ರೀರಾಮುಲು ...ಲ್ಲ. ಆದರ ಬದಲು ರಾಮುಲು ಹೈದರಾಬಾದ್‌ಗೆ ..., ಜನಾರ್ದನ ರೆಡ್ಡಿಯನ್ನು ಕೋರ್ಟ್‌ಗೆ ಕರೆ ...ವ ಬದಲಾಗಿ ವಿಡಿಯೋ ಕಾನ್ಫರೆನ್ಸ್ ನಡೆಸಿ ಎಂದು ...ಸರನ್ನು ಗೋಗರೆಯುತ್ತಿದ್ದ.

...ದಕ್ಕೆ ಚಮನ ಭಯ ಒಂದೇ ಅಲ್ಲ. ಪೋತುಲ ... ಎಂಬ ಇನ್ನೊಬ್ಬನ ಬಗ್ಗೆಯೂ ರೆಡ್ಡಿ ಕ್ಯಾಂಪಿಗೆ ...ಾಗಿದೆ.

...ೋತುಲ ಸುರೇಶ್ ಕೂಡ ಪೆರಿಟಾಲ್ ರವಿಯ ...ಬವನು.

...ಲ್ನೋಟಕ್ಕೆ ಇದೊಂದು ಸಹಜ ವಿದ್ಯಮಾನದಂತೆ ...ಸಹ ರೆಡ್ಡಿಗೆ ಪ್ರಾಣಭೀತಿ ಇದೆ ಎಂಬುದನ್ನು ಇದು ...ಸುತ್ತಿದೆ. ಹಾಗಾಗಿ ರೆಡ್ಡಿ ಈಗ ಜೈಲಿನ ತನ್ನ ...ನಿಂದ ಆಚೆಗೆ ಬರುತ್ತಿಲ್ಲ.

...ರ್ಕಾರಗಳನ್ನೇ ನಡುಗಿಸುತ್ತಿದ್ದ ... ಅಧಿಕಾರಿಗಳು, ಪೊಲೀಸರೂ ...ತೆ ಎಲ್ಲರ ಮೇಲೂ ದಬ್ಬಾಳಿಕೆ ನಡೆ... ಈ ರೆಡ್ಡಿಯಂಥ ಟೆರರ್ ರೆಡ್ಡಿಯೇ ...ದರಿಕೊಂಡಿರುವುದು ಒಬ್ಬನಿಗೆ. ...ನು ಚಮನ್!

...ಲಿ ಹೈದರಾಬಾದಿನ ಇನ್ನೊಂದು ... ಚೆರ್ಲಪಲ್ಲಿ ಜೈಲಿನಲ್ಲಿರುವ ಚಮನ್ ...ಡ್ಡಿ ಇರುವ ಚಂಚಲಗುಡ ಜೈಲಿಗೆ ... ಯತ್ನಿಸುತ್ತಿದ್ದಾನೆ. ಕರ್ನಾಟಕದ ... ಈ ಚಮನ್‌ನ ಪರಿಚಯ ಅಷ್ಟಾಗಿ ...ದರೆ ಆಂಧ್ರದ ರಾಯಲಸೀಮಾದ ...onal War ಬಗ್ಗೆ ಗೊತ್ತಿರು... ಚಮನ್ ವಿಚಾರ ತಿಳಿದಿರುತ್ತದೆ. ...ರಿಟಾಲ್ ರವಿಯ ಬಲಗೈ ... ಕೊಲೆ, ಸುಲಿಗೆ, ಬಾಂಬ್ ...ಂತಹ ರಕ್ತ ಚರಿತ್ರೆಯ ಹಿನ್ನೆಲೆಯ ... ರೆಡ್ಡಿ ಅರೆಸ್ಟಾಗುವ ಕೇವಲ ...ಂಗಳ ಹಿಂದೆ ಆಗಸ್ಟ್ 2ರಂದು ...ಪೊಲೀಸರಿಗೆ ಶರಣಾಗಿದ್ದ. ಅದಕ್ಕೂ ...ದ ಏಳು ವರ್ಷಗಳಿಂದ ಚಮನ್ ...ಸಿಕೊಂಡಿದ್ದ. 2005ರ ಜನವರಿ ... ಹಾಡುಹಗಲೇ ಪೆನುಗೊಂಡದ ...ದೇಶಂ ಶಾಸಕನಾಗಿದ್ದ ಪೆರಿಟಾಲ್ ... ಚೌಧುರಿಯನ್ನು ವೈಎಸ್‌ಆರ್ ...ಸ್ ಪ್ರಾಯೋಜಿತ ಗೂಂಡಾಗಳು ... ಕೊಲೆ ಮಾಡಿದ್ದರು. ಆಗ ...ದ ಚಮನ್ ಇಷ್ಟೂ ವರ್ಷ ... ಹಾಗೂ ಮುಂಬೈನಲ್ಲಿ ಅಡಗಿ ... ಇಂತ ಚಮನ್ ಪೊಲೀಸರಿಗೆ ... ಜೈಲಿನಲ್ಲಿರುವುದಕ್ಕೂ ಈಗ ...ರುವ ಜನಾರ್ದನ ರೆಡ್ಡಿಗೆ ... ಬರುವುದಕ್ಕೂ ಸಂಬಂಧ ... ಇದನ್ನು ತಿಳಿಯಬೇಕೆಂದರೆ ರಾಯಲಸೀಮಾದ ... ಕೊಲೆ-ಪ್ರತಿಕೊಲೆಗಳ ಚರಿತ್ರೆಯನ್ನೊಮ್ಮೆ ...ಬೇಕು. ಏಕೆಂದರೆ ಈ ರೆಡ್ಡಿಗಳು ಪ್ರತಿ ಹಂತ... ... ಹತ್ಯಾ ರಾಜಕೀಯದೊಂದಿಗೆ ಲಿಂಕ್ ಇಟ್ಟು... ...ದ್ದಾರೆ ಆಗಿದ್ದಾರೆ.


ಚಮನ್ ಚೆಲ್ಲಿದ ರಕ್ತ

ರಾಯಲಸೀಮಾದ ರಕ್ತ ರಾಜಕೀಯದ ಬಗ್ಗೆ ಸಂಕ್ಷಿಪ್ತವಾಗಿ ಇಲ್ಲಿ ಹೇಳಬೇಕು.

ಹೈದರಾಬಾದ್‌ನಿಂದ ದಕ್ಷಿಣಕ್ಕೆ ಹೊರಟು ಬಂದರೆ ಸಿಗುವ ಕರ್ನೂಲ್, ಅನಂತಪುರ ಜಿಲ್ಲೆಗಳು ಲಾಗಾಯ್ತಿನಿಂದಲೂ ಬರಸೀಮೆಗಳೇ. ಹಳೆಯ ಪಾಳೆಯಗಾರರಾಗಿದ್ದ ರೆಡ್ಡಿಗಳು ಸ್ವತಂತ್ರ ಭಾರತದಲ್ಲೂ ದೊಡ್ಡ ಭೂಮಾಲೀಕರಾಗಿ ಎಂಎಲ್‌ಎ-ಎಂಪಿಗಳಾಗಿ ಪುನರಾವತಾರವೆತ್ತಿ ತಮ್ಮ ದಬ್ಬಾಳಿಕೆ ಮುಂದುವರೆಸಿದ್ದರು. ಇಲ್ಲಿ ಡೆಮಾಕ್ರಸಿ ಕಾಯ್ದೆ-ಕಾನೂನುಗಳು, ಕೊನೆಗೆ ಪೊಲೀಸರೂ ಕೂಡಾ ಈ ಲ್ಯಾಂಡ್ ಲಾರ್ಡ್‌ಗಳ ವಿನೀತ ಸೇವಕರಂತೆಯೇ ಇರುತ್ತಿದ್ದರು.

• ಪಾರ್ವತೀಶ

ವೈ.ಎಸ್.ರಾಜಶೇಖರ ರೆಡ್ಡಿ, ಜಗನ್ ರೆಡ್ಡಿ, ಕರ್ನಾಟಕದ ಗಾಲಿ ಜನಾರ್ದನ ರೆಡ್ಡಿ ಮುಂತಾದವರೆಲ್ಲ ಈ ದರ್ಪ ದೌಲತ್ತುಗಳನ್ನು ಮೆರೆಯುತ್ತಲೇ ಬೆಳೆದು ಬಂದವರು ಈ ಗುಂಪಿನ ಪ್ರಧಾನ ಪಾತಕಿಯೇ ಮದ್ದೆಲಚೆರವು ಸೂರಿ!



ಇವರೆಲ್ಲ ಮೊದಲಿನಿಂದಲೂ ಕಾಂಗ್ರೆಸ್ ಪಾರ್ಟಿಯಲ್ಲಿದ್ದವರು.

ಮತ್ತೊಂದೆಡೆ ಈ ಗುಂಪಿನ ವಿರುದ್ಧ ತೊಡೆ ತಟ್ಟಿ ನಿಂತವನೇ ಪೆರಿಟಾಲ ರವಿ. ತೆಲುಗುದೇಶಂ ಇವನ ಪಕ್ಷ.

1970-80ರ ದಶಕದಲ್ಲಿ ನೇರ ಯುದ್ಧ ಘೋಷಣೆ ಮಾಡಿಕೊಂಡ ಈ ಎರಡೂ ಬಣಗಳು ನೂರಾರು ಜನರನ್ನು ಕೊಂದು ಹಾಕಿವೆ.


ವೈಎಸ್‌ಆರ್

ಪೆನುಗೊಂಡ ತಾಲ್ಲೂಕಿನ ರಾಮಗಿರಿ ಮಂಡಲ್‌ನ ವೆಂಕಟಾಪುರಂನ ಪೆರಿಟಾಲ ರವಿಯ ತಂದೆ ಪೆರಿಟಾಲ ಶ್ರೀರಾಮುಲುಗೆ ಆಗಲೇ ಮುನ್ನೂರೆಕರೆ ಭೂಮಿಯಿತ್ತು. ಇವನು ಪಕ್ಕದ ಕನಕನಪಲ್ಲಿಯಲ್ಲಿ ಆರುನೂರೆಕರೆ ಜಮೀನು ಹೊಂದಿದ್ದ ಗಂಗಾಲ ನಾರಾಯಣ ರೆಡ್ಡಿಯ ದಬ್ಬಾಳಿಕೆ ವಿರುದ್ಧ ತೊಡೆತಟ್ಟಿ ನಿಂತ. ಇನ್ನೊಬ್ಬ ರಾಕ್ಷಸ ಚೆನ್ನಾಕೋಟಾಪಲ್ಲಿಯ ಚೆನ್ನಾರೆಡ್ಡಿಯ ವಿರುದ್ಧವೂ ಯುದ್ಧ ಘೋಷಣೆ ಮಾಡಿ ಅವರಿಬ್ಬರಿಗೂ ಸೇರಿದ ನೂರಾರು ಎಕರೆ ಭೂಮಿಯನ್ನು ಬಡರೈತರಿಗೆ ಹಂಚಿಸಿಬಿಟ್ಟ ಪೆರಿಟಾಲ ಶ್ರೀರಾಮುಲು. ಇದಕ್ಕೆ ಪೆರಿಟಾಲ ಶ್ರೀರಾಮುಲುಗಿದ್ದ ನಕ್ಸಲೀಯ ಸಿದ್ಧಾಂತದ ಪ್ರೇರಣೆಯೂ ಇತ್ತು.


ಜಗನ್

ಹೀಗಿದ್ದ ಶ್ರೀರಾಮುಲುನನ್ನು 1975ರಲ್ಲಿ ಒಂದು ದಿನ ಬಸ್‌ನಲ್ಲಿ ಹೋಗುತ್ತಿದ್ದಾಗ ಹೊರಗೆಳೆದು ರೆಡ್ಡಿಗಳ ಗುಂಪು ಕೊಚ್ಚಿ ಕೊಂದು ಹಾಕಿತ್ತು. ಅಷ್ಟಕ್ಕೂ ಸುಮ್ಮನಾಗದೆ ಪೆರಿಟಾಲ ರವಿಯ ತಮ್ಮ ಪೆರಿಟಾಲ ಹರಿಯನ್ನು 1982ರಲ್ಲಿ ಪೊಲೀಸರ ಮೂಲಕ ಕೊಲ್ಲಿಸಿಬಿಟ್ಟರು ಭೂಮಾಲೀಕ ರೆಡ್ಡಿಗಳು.

ಈ ಹರಿಗೆ ಆಗ ನಕ್ಸಲ್ ಸಂಪರ್ಕವಿತ್ತಾದ್ದರಿಂದ ಹಾಗೂ ಆಂಧ್ರದಲ್ಲಿ ಕಾಂಗ್ರೆಸ್ ಸರ್ಕಾರ ನಡೆಯುತ್ತಿದ್ದರಿಂದ ರೆಡ್ಡಿಗಳು ಹರಿಯನ್ನು ಲೀಗಲ್ಲಾಗೇ ಮುಗಿಸಲು ಅವಕಾಶ ಸಿಕ್ಕಿತ್ತು.

ಈ ಹತ್ಯೆಗಳು ಪೆರಿಟಾಲ ರವಿಯನ್ನು ಅದೆಷ್ಟು ರೊಚ್ಚಿಗೆಬ್ಬಿಸಿತ್ತೆಂದರೆ ಅವನು ಕೂಡಾ 'ಹೊಡಿ-ಬಡಿ-ಕಡಿ'ಯುವ ಹೊಸ ಗ್ಯಾಂಗ್ ಒಂದನ್ನು ಕಟ್ಟಿದ. ರಾಜಕೀಯ ನೆಲೆಯೂ ಇರಲೆಂದು ತೆಲುಗುದೇಶಂ ಪಾರ್ಟಿಗೆ ಸೇರಿಕೊಂಡ.

ಆಗ ರವಿಯ ಜೊತೆಯಾದವರೇ ದಾದಾಪು ಚಮನ್, ನಾಗೂರ್ ಹುಸೇನ್ , ಪೊತುಲ ಸುರೇಶ್, ಭಾಸ್ಕರ, ಮಧುಸೂದನ್... ಮುಂತಾದವರು.

ಇದರ ನಡುವೆ ಪೆರಿಟಾಲ ರವಿ ಕೆಲಕಾಲ ನಕ್ಸಲರ ಪೀಪಲ್ಸ್ ವಾರ್ ಗ್ರೂಪ್‌ನಲ್ಲೂ ಇದ್ದ. ಆದರೆ ರಾಯಲಸೀಮೆಯಾದ ಫ್ಯಾಕ್ಷನಲ್ ವಾರ್‌ಗೆ ತತ್ವ ಸಿದ್ಧಾಂತ ಆಧರಿತ ಸಂಘರ್ಷಕ್ಕಿಂತ ವ್ಯಕ್ತಿಪ್ರತಿಷ್ಠೆ, ತೋಳ್ಬಲ, ಭಯಾನಕ ಹಿಂಸಾ ಪೀಡಿತ ಸಂಘರ್ಷ ಬೇಕಿತ್ತು. ಹಾಗಾಗಿ ನಕ್ಸಲೀಯರೇ ಪೆರಿಟಾಲ್ ರವಿಯನ್ನು ದೂರವಿಟ್ಟರು. ಆದರೆ ಅಷ್ಟರಲ್ಲಿ ರವಿ ಬಾಂಬು-ಬಂದೂಕಗಳ ಬದುಕನ್ನು ಕಂಡಿದ್ದನಲ್ಲದೆ ಗೆರಿಲ್ಲಾ ಮಾದರಿ ಕೆಲಸಗಳಲ್ಲೂ ಪಳಗಿದ್ದ. ತನ್ನ ತಂದೆ ಹಾಗೂ ತಮ್ಮನನ್ನು ಕೊಂದಿದ್ದ ಸೂರಿಯ ಕುಟುಂಬದ ವಿರುದ್ಧ ಪ್ರತೀಕಾರಕ್ಕಾಗಿ ಕಾದ. ಹಲವರ ಕೊಲೆಗಳೂ ಆದವು.

ಸೂರಿ ಮನೆಗೆ ಚಮನ್ ಬಾಂಬ್

1993ರಲ್ಲಿ ಅನಂತಪುರದ ಕನಕನಪಲ್ಲಿಯ ಮದ್ದಲಚೆರವು ಸೂರಿ ಮನೆಯಲ್ಲಿದ್ದ ಟಿವಿ ಸ್ಫೋಟಿಸಿ ಐದು ಜನ ಸತ್ತರು.



ಈ ಟಿವಿ ರಿಮೋಟ್ ಬಾಂಬ್ ಅನ್ನು ರೆಡಿಮಾಡಿ ಇರಿಸಿದ್ದೇ ಚಮನ್. ಅವತ್ತು ಸೂರಿ ಬಚಾವಾದನಾದರೂ ಅವನ ತಾಯಿ, ಇಬ್ಬರು ತಮ್ಮಂದಿರು, ಮತ್ತಿಬ್ಬರು ಸೂರಿಯ ಬಂಟರು ಸ್ಥಳದಲ್ಲೇ ಸತ್ತರು. ಪೆರಿಟಾಲ್ ರವಿ ಈ ಕೆಲಸಕ್ಕೆ ಕೈಹಾಕಲು ಪ್ರತೀಕಾರದ ದಾಹವೇ ಕಾರಣವಾಗಿತ್ತು.

ಸೂರಿ ಇದಕ್ಕೆ ಕಾರು ಬಾಂಬ್ ಸ್ಫೋಟದ ಮೂಲಕ ಉತ್ತರಿಸಿದ.

1997 ರಲ್ಲಿ ಹೈದರಾಬಾದಿನ ಜುಬಿಲಿ ಹಿಲ್ಸ್‌ನ ಸ್ಟುಡಿಯೋ ಒಂದರಲ್ಲಿ ಕಾರ್ ಬಾಂಬ್ ಒಂದು ಸ್ಫೋಟಿಸಿ 35 ಜನ ಸತ್ತರು. ಪೆರಿಟಾಲ್ ರವಿ ತನ್ನ ತಂದೆಯ ನೆನಪಿನಲ್ಲಿ 'ಶ್ರೀರಾಮುಲಯ್ಯ' ಸಿನಿಮಾ ನಿರ್ಮಿಸುತ್ತಿದ್ದ. ಅದರ ಶೂಟಿಂಗ್‌ನಲ್ಲೇ ಈ ಕಾರ್ ಬಾಂಬ್ ಸ್ಫೋಟಿಸಿದ್ದು.



ಹಾಗೆ ಹೇಳಬೇಕೆಂದರೆ ಇಂಡಿಯಾದ ಮೊದಲ ಕಾರ್ ಬಾಂಬ್ ರೆಡಿ ಮಾಡಿದ್ದು ಮುಜಾಹಿದೀನ್‌ಗಳೂ ಅಲ್ಲ; ಆರೆಸ್ಸೆಸ್‌ನವರೂ ಅಲ್ಲ, ಅದು ರಾಯಲಸೀಮಾದ ಪಾತಕಿಗಳು ಮಾಡಿದ್ದು. ಪೆರಿಟಾಲ ರವಿಯನ್ನು ಮುಗಿಸಲು ಮದ್ದೆಲಚೆರವು ಸೂರಿ ನಡೆಸಿದ ಈ ಪ್ರಯತ್ನ ರವಿಯನ್ನು ಇನ್ನಿಲ್ಲದಂತೆ ರೊಚ್ಚಿಗೆಬ್ಬಿಸಿತ್ತು.



ಚಮನ್ ಒಂದು ಪಕ್ಕಾ ಪ್ಲಾನ್ ಮಾಡಿ ಸೂರಿಯ ಮನೆಯ ಟಿವಿಯೊಳಗೆ ಬಾಂಬ್ ಇಟ್ಟು ರಿಮೋಟ್ ಆನ್ ಮಾಡಿದಾಗ ಸ್ಫೋಟವಾಗುವಂತೆ ಮಾಡಿದ್ದ.

ಬಹುಶಃ ಆಗಿನ್ನೂ ಜನಾರ್ದನ ರೆಡ್ಡಿ ಬಳ್ಳಾರಿಯಲ್ಲಿ ಎನೋಬಲ್ ಇಂಡಿಯಾ ಹೆಸರಿನಲ್ಲಿ ಚೀಟಿಂಗ್ ದಂಧೆಗೆ ಕೈಹಾಕಿದ್ದ ಅಷ್ಟೆ. ಆದರೆ ವೈ.ಎಸ್.ರಾಜಶೇಖರ ರೆಡ್ಡಿ ಜೊತೆಗೆ ಅವನಿಗೆ ಆಗಲೂ ಸಂಪರ್ಕಗಳಿದ್ದವು.

ಈ ಮಧ್ಯೆ 1993ರಲ್ಲಿ ಪೆರಿಟಾಲ ರವಿ ತೆಲುಗುದೇಶಂನಿಂದ ಸ್ಪರ್ಧಿಸಿ ಪೆನುಕೊಂಡಾದ ಶಾಸಕನಾದ. 2005ರಲ್ಲಿ ಕೊಲೆಯಾಗುವವರೆಗೂ ಅಂದರೆ ಸತತ ಐದು ಬಾರಿಯೂ ರವಿ ಪೆನುಕೊಂಡದಿಂದ ಗೆದ್ದೇಗೆಲ್ಲುತ್ತಿದ್ದ. ಇದು ಕೊಲೆ ಪ್ರತಿಕೊಲೆಗಳ, ಹಳೆಯ ಸೇಡಿನ ಲೆಕ್ಕ ಚುಕ್ತಾ ಮಾಡುವ ಹೊಸ ಕೊಲೆಗಳಿಗೆ ನಾಂದಿ ಹಾಡುತ್ತಿತ್ತು.

ಕೊನೆಗಿದು ಹೇಗಾಯಿತೆಂದರೆ ತೆಲುಗುದೇಶಂ ಸರ್ಕಾರವಿದ್ದಾಗ ಪೆರಿಟಾಲ್ ರವಿ ಕೈಮೇಲಾಗಿ ಸೂರಿ ಮತ್ತವನ ಕಾಂಗ್ರೆಸ್ ಗುಂಪು ಏಟು ತಿನ್ನುತ್ತಿತ್ತು, ಅದೇರೀತಿ ಕಾಂಗ್ರೆಸ್ ಸರ್ಕಾರವಿದ್ದಾಗ ಪೆರಿಟಾಲ್ ರವಿ ಕಡೆಯವರ ಕೊಲೆಗಳಾಗುತ್ತಿದ್ದವು.

ಇದು ಪರಾಕಾಷ್ಠೆ ತಲುಪಿದ್ದು 2004ರಲ್ಲಿ, ಕಾಂಗ್ರೆಸ್‌ನ ವೈ.ಎಸ್.ರಾಜಶೇಖರ ರೆಡ್ಡಿ ಮುಖ್ಯಮಂತ್ರಿಯಾದಾಗ.

ವೈಎಸ್‌ಆರ್ ಸಿಎಂ ಆದ ಮಾರನೇ ದಿನದಿಂದಲೇ ರಾಯಲಸೀಮಾದಲ್ಲಿ ತೆಲುಗುದೇಶಂಗೆ ಸೇರಿದ್ದ ನಾಯಕ, ಕಾರ್ಯಕರ್ತರ ಕೊಲೆಗಳು ಶುರುವಾದವು. ಆಗ ಸುಮಾರು ಅರವತ್ತು ಜನರನ್ನು ಸ್ವತಃ ವೈಎಸ್‌ಆರ್ ಕೊಲ್ಲಿಸಿದ. ಆ ರಕ್ತ ರಾಜಕೀಯದ ಭರಾಟೆಯಲ್ಲೇ ತೆಲುಗು ದೇಶಂನ ಪೆರಿಟಾಲ್ ರವಿಯ ಪಡೆಯನ್ನು ಸುತ್ತುವರೆದು ಒಬ್ಬರಾದ ಮೇಲೆ ಇನ್ನೊಬ್ಬರಂತೆ ಕೊಲ್ಲಿಸಲಾಯಿತು.

2004ರಲ್ಲಿ ರವಿಯ ಬಂಟ ಭಾಷಾನನ್ನು ಧರ್ಮಾವರಂನಲ್ಲಿ ಮುಗಿಸಿದರು. 2005ರಲ್ಲಿ ಬಳ್ಳಾರಿಯಲ್ಲಿ ನಡೆದ ಮಾಜಿ ನಕ್ಸಲೈಟ್ ಆರ್‌ಕೆಯ ಹತ್ಯೆಯೂ ಹೀಗೆ ನಡೆದದ್ದು. ಆರ್‌ಕೆ ಕೊಲೆಯಲ್ಲಿ ಗಾಲಿ ಜನಾರ್ದನ ರೆಡ್ಡಿಯ ಕೈವಾಡ ಮತ್ತು ಬೆಂಬಲವಿದ್ದ ಬಗ್ಗೆ ಪೆರಿಟಾಲ್‌ರವಿಗೆ ಅನುಮಾನವಿತ್ತು. ಈ ಆರ್.ಕೆ. ಚಮನ್‌ನ ಖಾಸಾ ದೋಸ್ತ್ ಆಗಿದ್ದ. ಆಗಲೇ ಪೆನುಕೊಂಡ ಶಾಸಕನಾಗಿದ್ದ ಪೆರಿಟಾಲ್ ರವಿಗೆ ತನ್ನ ಕೊನೆಗಾಲ ಬಂತೆಂದು ಗೊತ್ತಾಯಿತೇನೋ. ಚಮನ್ ತಲೆಮರೆಸಿಕೊಳ್ಳುವಂತೆ ಆದೇಶಿಸಿದ. ತಾನು ಒಂದು ವೇಳೆ ಸತ್ತರೂ ರಾಯಲಸೀಮಾಗೆ ಕಾಲಿಡಕೂಡದೆಂದು ಹೇಳಿದ್ದ.

ಅದೇರೀತಿ ಅವತ್ತು ನಾಪತ್ತೆಯಾದ ದಾದಾಪು ಚಮನ್ ಈಗ ಮತ್ತೆ ಕಾಣಿಸಿಕೊಂಡಿದ್ದಾನೆ.

ಮದ್ದೆಲಚೆರವು ಸೂರಿ 2005ರಲ್ಲಿ ವೈಎಸ್‌ಆರ್ ಸರ್ಕಾರದ ಹಾಗೂ ಪೊಲೀಸರ ರಹಸ್ಯ ಬೆಂಬಲದೊಂದಿಗೆ ಪೆರಿಟಾಲ್ ರವಿಯನ್ನೇ ಗುಂಡಿಟ್ಟು ಕೊಲ್ಲಿಸಿದ.

ಚಮನ್ ಆಗಲೂ ರವಿಯ ಶವಸಂಸ್ಕಾರಕ್ಕೆ ಬರಲಿಲ್ಲ.

ರಾಯಲಸೀಮಾದ ಈ ರಕ್ತ ರಾಜಕೀಯ ಅದೆಷ್ಟು ಭಯಾನಕವಾಗಿತ್ತೆಂದರೆ ವೈಎಸ್‌ಆರ್ ಸ್ವತಃ ಮುಖ್ಯಮಂತ್ರಿಯಾಗಿದ್ದರೂ ಸಹ ತನ್ನ ಮಗ ಜಗನ್ ಪ್ರಾಣ ಉಳಿಸಲು ಅವನನ್ನು ಬೆಂಗಳೂರಿಗೆ ಕಳಿಸಿಬಿಟ್ಟ.

ರೆಡ್ಡಿ-ವೈಎಸ್‌ಆರ್ ಲಿಂಕ್‌ಗಳು

ರಾಯಲಸೀಮಾದಲ್ಲಿ ತೆಲುಗುದೇಶಂ ಅನ್ನು ಪೂರ್ತಿ ನಾಮಾವಶೇಷ ಮಾಡಿದ ವೈಎಸ್‌ಆರ್ ಗುಂಪು ನಿರ್ದಿಷ್ಟವಾಗಿ ಪೆರಿಟಾಲ ರವಿ ಗ್ಯಾಂಗ್‌ಅನ್ನು ಮುಗಿಸಿಹಾಕಿತು. ಸ್ವತಃ ಶಾಸಕ ರವಿಗೂ ಸಾಕಷ್ಟು ಪೊಲೀಸ್ ಸೆಕ್ಯೂರಿಟಿ ನೀಡದೆ, ಸ್ವಂತದ ಬಂದೂಕುಧಾರಿ ಬಾಡಿಗಾರ್ಡ್‌ಗಳನ್ನು ಇರಿಸಿಕೊಳ್ಳಲು ಅನುಮತಿ ಕೊಡದೆ ರವಿಯನ್ನು ಏಕಾಂಗಿಯನ್ನಾಗಿಸಿ ಕೊಲೆಗಾರರಿಗೆ ಅನುಕೂಲ ಮಾಡಿಕೊಡಲಾಗಿತ್ತು.


ವೈಎಸ್‌ಆರ್ ಬಯಕೆಯಂತೆ ರವಿ ಹತ್ಯೆಯಾಯಿತು. ಮದ್ದೆಲಚೆರವು ಸೂರಿ ಹತ್ಯೆಯ ಪ್ಲಾನ್ ರೂಪಿಸಿದ್ದ. ಸೂರಿಯ ಬಂಟ ಗೋವರ್ಧನ ರೆಡ್ಡಿ, ಟಿವಿ ಚಾನೆಲ್ ಒಂದರಲ್ಲಿ ಪೆರಿಟಾಲ್ ಮುಗಿಸಿದ್ದು ನಾವೇ ಅಂತ ಎದೆತಟ್ಟಿಕೊಂಡು ಹೇಳಿದ. ಆದರೆ ಚಮನ್ ಇನ್ನೂ ಬದುಕಿದ್ದ. ಅದನ್ನು ಸೂರಿ ಸೇರಿದಂತೆ ಎಲ್ಲರೂ ನಿರ್ಲಕ್ಷಿಸಿದ್ದರು.

ಈ ನಡುವೆ 2009ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಮತ್ತೆ ಗೆದ್ದು ವೈಎಸ್‌ಆರ್ ಎರಡನೇ ಬಾರಿಗೆ ಮುಖ್ಯಮಂತ್ರಿಯಾದ. ಈ ಅವಧಿಯಲ್ಲಿ ಗಾಲಿ ಜನಾರ್ದನ ರೆಡ್ಡಿ ಗಣಿದಂಧೆಗೆ ಕೈಹಾಕಿ ದುಡ್ಡು ಮಾಡಲು ಶುರುಮಾಡಿದ.

ಜನಾರ್ದನ ರೆಡ್ಡಿ & ಬ್ರದರ್ಸ್ ಕರ್ನಾಟಕದಲ್ಲಿ ಬಿಜೆಪಿಗೆ ಸೇರಿದ್ದರೂ ಆಂಧ್ರದಲ್ಲಿ ಅವರೆಲ್ಲಾ ಕಾಂಗ್ರೆಸ್ ಬೆಂಬಲಿಗರು. ಅರ್ಥಾತ್ ತೆಲುಗುದೇಶಂನ ಶತ್ರುಗಳಾಗಿದ್ದರು. ಎಲೆಕ್ಷನ್ ಖರ್ಚಿಗೆಂದು ವೈಎಸ್‌ಆರ್‌ಗೆ ನೂರಾರು ಕೋಟಿ ರೂಪಾಯಿ ನೀಡಿ ಭವಿಷ್ಯದ ಬ್ಯುಸಿನೆಸ್ ಸಂಬಂಧಗಳಿಗೆ ರೆಡ್ಡಿಗಳು ಭದ್ರ ತಳಹದಿ ಹಾಕಿಕೊಂಡರು. ಸ್ವತಃ ತಮ್ಮ ಸಂಬಂಧಿಗಳಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿ ರಾಮದುರ್ಗ ಸೇರಿದಂತೆ ಕರ್ನೂಲ್, ಅನಂತಪುರದಲ್ಲೆಲ್ಲಾ ರಾಜಕೀಯವನ್ನು ತಮ್ಮ ಕಂಟ್ರೋಲಿಗೆ ತೆಗೆದುಕೊಂಡರು.

....16 ನೇ ಪುಟಕ್ಕೆ

ಲೋಕಾಯುಕ್ತ ಇಲಾಖೆ DYSP ಪಾಟೀಲ ಅಂದರ್ ಆಗೋದು ಯಾವಾಗ?



ಲೋಕದ ಡೊಂಕನ್ನು ತಿದ್ದಲು ಹೊರಟಿರುವ ಲೋಕಾಯುಕ್ತ ಇಲಾಖೆಯಲ್ಲೇ ಮಹಾನ್ ಖದೀಮ ಅಧಿಕಾರಿಗಳಿದ್ದಾರೆ. ಪೊಲೀಸ್ ಅಧಿಕಾರಿಗಳಾಗಿದ್ದುಕೊಂಡೇ ಕೊಳ್ಳೆ ಹೊಡೆದ ಅಕ್ರಮ ಆಸ್ತಿಗಳನ್ನು ಕಾಪಾಡಿಕೊಳ್ಳಲು ತಾವೇ ಖುದ್ದು ಲೋಕಾಯುಕ್ತ ಇಲಾಖೆಗೆ ಟ್ರಾನ್ಸ್‌ಫರ್ ಪಡೆದಿದ್ದಾರೆ.

ಹೀಗೆ ಲೋಕಾಯುಕ್ತ ಇಲಾಖೆಯಲ್ಲಿ ಆಶ್ರಯ ಪಡೆದಿರುವ ಹೆಗ್ಗಣಗಳಲ್ಲಿ ಗದಗಿನ ಲೋಕಾಯುಕ್ತ ಕಚೇರಿಯಲ್ಲಿ ಡಿವೈಎಸ್ಪಿಯಾಗಿರುವ ಜೆ.ಆರ್. ಪಾಟೀಲ್ ಪ್ರಮುಖ. ತನ್ನ ಮೈಮೇಲಿನ ಖಾಕಿ ಖದರ್ ತೋರಿಸಿ ಮುಗ್ಧ ಜನರ ರಕ್ತವನ್ನು ಹಣದ ರೂಪದಲ್ಲಿ ಹೀರಿಕೊಂಡಿರುವ ಈತ ಇಲ್ಲಿಯವರೆಗೆ ಕೋಟಿ ಕೋಟಿ ಮೌಲ್ಯದ ಆಸ್ತಿ ಮಾಡಿಕೊಂಡಿದ್ದಾನೆ. ಆದರೆ ಅದನ್ನೆಲ್ಲ ತುಂಬಾ ಉಪಾಯವಾಗಿ ತನ್ನ ತಂದೆ ಮತ್ತು ತಮ್ಮನ ಹೆಸರಿನಲ್ಲಿ ಮಾಡಿದ್ದಾನೆ.

ಅಕ್ರಮ ಆಸ್ತಿ

ಚಿಕ್ಕಪುಟ್ಟ ಕಳ್ಳರಿಗೂ ನಿಯತ್ತು ಎಂಬುದಿರುತ್ತದೆ. ಕನಿಷ್ಠ ಅವರು ಹೊಟ್ಟೆಪಾಡಿಗಾಗಿ ಕಳ್ಳತನ ಮಾಡುತ್ತಾರೆ. ಆದರೆ ಕಲಘಟಗಿಯ ಪೊಲೀಸ್ ಠಾಣೆಯಲ್ಲಿ ಏಳು ವರ್ಷ ಇನ್ಸ್‌ಪೆಕ್ಟರ್ ಆಗಿದ್ದ ಜೆ.ಆರ್.ಪಾಟೀಲ್ ಸಾಹೇಬರು ಯಾವ ನಿಯತ್ತೂ ಇರದ ದೊಡ್ಡ ಮಟ್ಟದ ದರೋಡೆಕೋರ.

ಗೋವಾ ಸೇರಿದಂತೆ ಕರಾವಳಿಯ ಮೂಲೆಗೆ ಸಂಪರ್ಕ ಕಲ್ಪಿಸುವ ಏಕೈಕ ಮಾರ್ಗವಾದ ಕಲಘಟಗಿ ಖಾಕಿ ಅಧಿಕಾರಿಗಳಿಗೆ ಹುಲ್ಲುಗಾವಲಿದ್ದಂತೆ. ಅವರು ಠಾಣೆಯಲ್ಲಿ ಕೂತಿದ್ದರೂ ದಿನವೊಂದಕ್ಕೆ ಸಾವಿರಾರು ರೂಪಾಯಿ ಜೇಬಿಗೆ ಬಂದು ಬೀಳುತ್ತೆ. ಹೀಗಾಗಿಯೇ ಕಲಘಟಗಿಯ ಪೊಲೀಸ್ ಠಾಣೆ ಇಂದಿಗೂ ಭಾರೀ ಬೇಡಿಕೆ ಇರುವ ಜಾಗ. ಇಂತಹ ಜಾಗಕ್ಕೆ ಬಂದು ಕುಳಿತ ಪಾಟೀಲ್ ಇಂದು ಕೋಟಿಗಳ ಲೆಕ್ಕದಲ್ಲಿ ಪ್ರಾಪರ್ಟಿ ಮಾಡಿಕೊಂಡು ದುಂಡಗಾಗಿದ್ದಾನೆ. ಆ ಕಾರಣಕ್ಕೇನೋ ಅವರು ಕಲಘಟಗಿ ಠಾಣೆಯನ್ನು ಸಾಯೋತನಕ ಮರೆಯೋಲ್ಲ ಅಂತಾರಂತೆ!

ಕಲಘಟಗಿ ಪಟ್ಟಣದ ಹೊರವಲಯದ ಬೂದನಗುಡ್ಡ ಮತ್ತು ದಾಸನೂರು ಗುಡ್ಡದಲ್ಲಿ ಬರೋಬ್ಬರಿ 62 ಎಕರೆ ಜಮೀನು ಖರೀದಿಸಿದ ಪಾಟೀಲರು ಅದರಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯನ್ನು ಅವ್ಯಾಹತವಾಗಿ ನಡೆಸಿದ್ದಾರೆ.

ಮಗ ಕಳ್ಳ ಅಪ್ಪ ಮಾಲೀಕ

ಭ್ರಷ್ಟರ ವಿರುದ್ಧ ಬ್ರಹ್ಮಾಸ್ತ್ರ ಬಿಡುತ್ತೇನೆ ಎಂದು ಪೋಸು ಕೊಡುತ್ತಾ ಗದುಗಿನ ಲೋಕಾಯುಕ್ತ ಕಚೇರಿಯಲ್ಲಿ ಕುಳಿತುಕೊಂಡು ಅದೇ ಭ್ರಷ್ಟರಿಂದ ಪ್ರತಿ ತಿಂಗಳು ಮಾಮೂಲಿಯ ಡೀಲ್ ಕುದುರಿಸಿಕೊಳ್ಳುವ ಜೆ.ಆರ್.ಪಾಟೀಲ ತನ್ನ ಹೆಸರಲ್ಲಿ ಬೆಲೆಬಾಳುವ ಯಾವ ಪ್ರಾಪರ್ಟಿಯನ್ನೂ ಖರೀದಿಸಿಲ್ಲ. ಇಂದಲ್ಲ ನಾಳೆ ತನ್ನ ಬುಡಕ್ಕೆ ಬಿಸಿನೀರು ಬಿಡುವ ಅಧಿಕಾರಿಗಳು ಬರಬಹುದು ಎಂಬ ಭಯದಲ್ಲಿ ತಾನು ಕೊಳ್ಳೆ ಹೊಡೆದ ಹಣದಲ್ಲಿ ಖರೀದಿಸಿದ ಬಹುತೇಕ ಪ್ರಾಪರ್ಟಿಗಳನ್ನು ತನ್ನ ತಂದೆ ರಾಮರಾಯ ಈರಪ್ಪ ಪಾಟೀಲ ಮತ್ತು ತಮ್ಮ ಮಹಾಬಳೇಶ್ವರ ಪಾಟೀಲರ ಹೆಸರಿನಲ್ಲಿ ಜಮೆಯಾಗಿಸಿ ಇದು ತನ್ನದಲ್ಲ ಎಂದು ಬೊಗಳೆ ಬಿಡುತ್ತಿದ್ದಾನೆ.

ಪಾಟೀಲನ ತಂದೆ ರಾಮರಾಯ್ ಈರಪ್ಪ ಪಾಟೀಲ್ ಹೆಸರಲ್ಲಿರುವ ಸರ್ವೆ ನಂಬರ್ 34 ಹಿಸ್ಸಾ ಅ3/2ರ 43.13 ಎಕರೆ ಜಮೀನಿನ ಮೇಲೆ ಕಲಘಟಗಿ ವಿಜಯಾ ಬ್ಯಾಂಕ್‌ನಲ್ಲಿ 10.25 ಲಕ್ಷ ರೂಪಾಯಿ ಹಾಗೂ ಪಾಟೀಲರ ಸಹೋದರ ಮಹಾಬಳೇಶ್ವರ ರಾಮರಾಯ ಪಾಟೀಲ್ ಹೆಸರಲ್ಲಿರುವ ಸರ್ವೆ ನಂಬರ್ 34 ಹಿಸ್ಸಾ ಅ3/3ರ 16 ಎಕರೆ ಜಮೀನಿನ ಮೇಲೆ ಅದೇ ಬ್ಯಾಂಕ್‌ನಲ್ಲಿ 10.20 ಲಕ್ಷ... ಒಟ್ಟು 20.45 ಲಕ್ಷ ರೂಪಾಯಿಗಳನ್ನು ಮಾಲೀಕ ಲಕ್ಷ್ಮಣ ಯಲ್ಲಪ್ಪ ಹೊಸಗ ಎಂಬುವವರಿಗೆ ಸಾಲ ಪಡೆದು ಪಾವತಿಸಲಾಗಿದೆ. ಹೀಗೆ ಮಾಡುವುದರಿಂದ ತಾನು ಸಾಲಗಾರ ಎಂಬುದನ್ನು ತೋರಿಸುವುದು ಪಾಟೀಲನ ತಂತ್ರ ಎಂಬುದಂತೂ ಸ್ಪಷ್ಟ.

ಗಣಿಗಾರಿಕೆ ಮೂಲ ಕಸುಬು

ಜಮೀನು ಖರೀದಿಸಿದ ಮರುಕ್ಷಣದಿಂದ ಗಣಿಗಾರಿಕೆಯನ್ನು ಮೂಲ ಕಸುಬಿನಂತೆ ಆಯ್ದುಕೊಂಡಿರುವ ಜೆ.ಆರ್.ಪಾಟೀಲ ತಿಂಗಳಿಗೊಮ್ಮೆ ತನ್ನ ಲೋಕಾಯುಕ್ತ ಕೆಲಸದಿಂದ ಬಿಡುವು ಮಾಡಿಕೊಂಡು ಇಲ್ಲಿಗೆ ಬಂದು ಲೆಕ್ಕ ರೊಕ್ಕ ಎರಡನ್ನೂ ಒಯ್ಯುತ್ತಾನಂತೆ. ಈತ ತನ್ನ ಜಮೀನಿನಲ್ಲಿ ನಡೆಸುತ್ತಿರುವ ಕಲ್ಲು ಗಣಿಗಾರಿಕೆ ಸಂಪೂರ್ಣ ಕಾನೂ… ಬಾಹಿರವಾಗಿದೆ. ಇದಕ್ಕೆ ಪರವಾನಗಿ ಕೂಡ ಸರ್ಕಾರ… ಸಿಕ್ಕಿಲ್ಲ. ಅಲ್ಲದೆ, ಈತನು ಈ ಗಣಿಗಾರಿಕೆಗೆ ಸಂಬಂಧಿಸಿ… ಇಲ್ಲಿಯವರೆಗೂ ಒಂದು ರೂಪಾಯಿ ರಾಯಲ್ಟಿ ಕ… ಇಷ್ಟೆಲ್ಲಾ ಅಕ್ರಮಗಳನ್ನು ತುಂಬಿಕೊಂಡಿರುವ ಪಾಟೀ… ಕಲ್ಲಿನ ಕ್ವಾರಿಗೆ ಇಲ್ಲಿಯವರೆಗೂ ಒಬ್ಬ ಅಧಿಕಾರಿಯೂ ಭ… ನೀಡಿಲ್ಲ. ಅಂದರೆ, ಈ ಕಳ್ಳನ ಜೊತೆಗೆ ಗಣಿ ಇಲಾಖೆ… ಖದೀಮರು ಸೇರಿಕೊಂಡು ಮಿಲಾಪಿ ದಂಧೆ ನಡೆಸುತ್ತಿ… ಅಷ್ಟೆ.

ಈ ಗುಡ್ಡದಲ್ಲಿ 1970ರಿಂದ ಕಲ್ಲು ಗಣಿಗಾ… ಅವ್ಯಾಹತವಾಗಿ ನಡೆಯುತ್ತಿತ್ತು. ಆದರೆ ಈ ಗುಡ್ಡ ಪಶ್ಚಿಮ… ಸಾಲುಗಳಲ್ಲಿ ಬರುತ್ತೆ ಎಂಬ ಕಾರಣಕ್ಕೆ ಸುಪ್ರಿಂ ಕೋ… ಗಣಿಗಾರಿಕೆಗೆ ಬ್ರೇಕ್ ಹಾಕಿ ತೀರ್ಪು ನೀಡಿದೆ. ಆ… ಕೋರ್ಟಿನ ಆದೇಶ ಪಾಟೀಲ್ ಸಾಹೇಬರಿಗೆ ಅನ್ವಯ… ಇಲ್ಲ. ಈ ಅಕ್ರಮ ಕ್ವಾರಿಯಲ್ಲಿ ಸಿಡಿಸುವ ಸಿಡಿಮದ್ದಿ… ಸಾಕಷ್ಟು ಕಷ್ಟ ಅನುಭವಿಸಿದ ಗುಡ್ಡದ ಸುತ್ತಲಿನ ಜನ… ದಂಧೆಯ ವಿರುದ್ಧ ಸಿಡಿದೆದ್ದು ಈ ಕ್ವಾರಿಯನ್ನು ನಿಲ್ಲಿಸು… ಅಧಿಕಾರಿಗಳಿಗೆ ದೂರು ನೀಡಿದರೂ ಅವರು ಕ್ರ… ಮುಂದಾಗದೆ ಪಾಟೀಲ ಹಾಕಿದ ಪ್ರಸಾದ ತಿಂದು ಬ… ಕುಳಿತಿದ್ದಾರೆ.

ಪಾಟೀಲನ ಈ ಅಕ್ರಮ ಕ್ವಾರಿಯಿಂದ ಪ್ರತಿದಿನ 2… 3 ಸಾವಿರ ಲಾರಿಗಳು ಕಲ್ಲನ್ನು ಸಾಗಾಟ ಮಾಡುತ್ತವೆ. ಒ… ಲಾರಿಗೆ 3000 ಹಣ ಪಡೆಯುವ ಪಾಟೀಲನ ವಾ… ಆದಾಯ ಕೋಟ್ಯಂತರ ರೂಪಾಯಿ. ಆದರೆ ಸರ್ಕಾರಕ್ಕೆ… ಟನ್‌ಗೆ 30 ರೂಪಾಯಿ ಕಟ್ಟಬೇಕಾದ ರಾಯಲ್ಟಿಯ… ಕಟ್ಟದೆ ಮುಂದಾಯಿಸಲಾಗುತ್ತಿದೆ.

ಓರ್ವ ಸಾಮಾನ್ಯ ಇನ್ಸ್‌ಪೆಕ್ಟರ್ ಆಗಿದ್ದ ಪಾಟೀಲ ಹ… ಅವರ ಕುಟುಂಬದ ಸದಸ್ಯರು ಕೋಟ್ಯಂತರ ರೂಪಾ… ಮೌಲ್ಯದ ಆಸ್ತಿ ಖರೀಸಿದ್ದಾದರೂ ಹೇಗೆ?

ಭ್ರಷ್ಟಾಚಾರದಲ್ಲಿ ಮುಳುಗೆದ್ದಿರುವ, ವ್ಯವಸ್ಥೆಯ… ಸರಿಪಡಿಸುವ ಉದ್ದೇಶದಿಂದ ಕಾರ್ಯಪ್ರವೃತ್ತವಾಗಿ… ಲೋಕಾಯುಕ್ತ ಇಲಾಖೆಗೆ ನ್ಯಾಯಮೂರ್ತಿ ಸಂತೋ… ಹೆಗ್ಡೆಯಂತಹ ಪ್ರಾಮಾಣಿಕರು ನ್ಯಾಯ ಒದಗಿಸಿ ಕ… ಹೋದರು. ನಂತರ ಬಂದ ನ್ಯಾಯಮೂರ್ತಿ ಶಿವ… ಪಾಟೀಲ ಅಕ್ರಮ ನಿವೇಶನ ಪ್ರಕರಣದಲ್ಲಿ ಆರೋಪ ಹ… ಮನೆ ಸೇರಿದರು. ಮುಂದೆ ಯಾರೇ ಬಂದರೂ ಮೊ… ತಮ್ಮ ಇಲಾಖೆಯನ್ನು ಭ್ರಷ್ಟಾಚಾರದಿಂದ ಮುಕ್ತವಾಗಿ… ಮಾತ್ರ ಜನರ ವಿಶ್ವಾಸ ಗಳಿಸಲು ಸಾಧ್ಯ. ಅದರ… ಸರ್ವೀಸ್‌ನುದ್ದಕ್ಕೂ ಸ್ವಾಹಾ ಎನ್ನುವುದನ್ನೇ ಕಾಯಕವನ… ಕೊಂಡ ಜೆ.ಆರ್ ಪಾಟೀಲನಂತಹ ಜಂತುಗ… ಜೈಲಿಗಟ್ಟದಿದ್ದರೆ ಲೋಕಾಯುಕ್ತದ ಧ್ಯೇಯೋದ್ದೇಶಗ… ಅಪಚಾರವೆಸಗಿದಂತೆ.

• ಹುರಳಿಕುಪ್ಪಿ ವಿನ…

ನೌಕರಿಯುದ್ದಕ್ಕೂ ಭಾನಗಡಿ

ಮೂಲತಃ ಖಾನಾಪುರ ತಾಲೂಕಿನವನಾದ ಜೆ.ಆರ್.ಪಾಟೀಲ ಪಕ್ಕಾ ಸ್ವಜಾತಿಪ್ರಿಯ. ಈ ಹಿಂದೆ ಬೆಳಗಾವಿ, ಧಾರವಾಡದ ವಿದ್ಯಾಗಿರಿ, ಧಾರವಾಡ ರೂರಲ್ ಮತ್ತು ಸಂಚಾರಿ ಠಾಣೆ, ಹುಬ್ಬಳ್ಳಿಯ ವಿದ್ಯಾನಗರ, ಕಲಘಟಗಿಯಲ್ಲಿ ಪೊಲೀಸ್ ಇಲಾಖೆಯಲ್ಲಿ ದರ್ಬಾರು ನಡೆಸಿದವನು ಪಾಟೀಲ. ಅಲ್ಲಿಂದ ಲೋಕಾಯುಕ್ತಕ್ಕೆ ಬಡ್ತಿ ಮೇಲೆ ತಾನೇ ಖುದ್ದು ಬಯಸಿ ಟ್ರಾನ್ಸ್‌ಫರ್ ಪಡೆದು ಸದ್ಯ ಗದುಗಿನಲ್ಲಿ ತಳವೂರಿದ್ದಾನೆ.

ಬೆಳಗಾವಿಯ ಖಾನಾಪುರದಲ್ಲಿದ್ದಾಗ ಭೂಗತ ಪಾತಕಿ ಪ್ರವೀಣ ಶಿಂತ್ರೆಯೊಂದಿಗೆ ಗೆಳೆತನವಿರಿಸಿಕೊಂಡಿದ್ದ ಪಾಟೀಲರು ಗೋವಾದಿಂದ ಅಕ್ರಮ ಸಾರಾಯಿಯನ್ನು ರಾಜ್ಯಕ್ಕೆ ತಂದು ಮಾರಾಟ ಮಾಡುವ ಜಾಲದೊಂದಿಗೆ ಅನ್ಯೋನ್ಯವಾಗಿದ್ದರು. ಹುಬ್ಬಳ್ಳಿಯಲ್ಲಿದ್ದಾಗಲೂ ಈತನ ಪರಾಕ್ರಮವನ್ನು ಜನ ಹಾಡಿ ಉಗುಳಿದ್ದರು.

ವಿಶ್ವೇಶ್ವರ ನಗರದ ಏರಿಯಾದಲ್ಲಿ ಕಾಡಸಿದ್ದೇಶ್ವರ ಕಾಲೇಜಿನ ವಿದ್ಯಾರ್ಥಿಗಳ ಕೊಲೆ ಪ್ರಕರಣ ಇಡೀ ರಾಜ್ಯ ಬೆಚ್ಚಿ ಬೀಳುವಂತೆ ಮಾಡಿತ್ತು. ಆ ಕೇಸಿನಲ್ಲಿ ಪಾಟೀಲ ತಿಂದಿದ್ದಕ್ಕೆ ಲೆಕ್ಕವೇ ಇಲ್ಲ ಅಂತ ಈಗಲೂ ಅಲ್ಲಿಯ ಜನ ಹೇಳುತ್ತಾರೆ. ಮಾಜಿ ಮಂತ್ರಿ ಎಸ್.ಆರ್.ಮೋರೆ ಮತ್ತವನ ಬಲಗೈ ಪತ್ರಕರ್ತನೊಬ್ಬ ಇವನಿಗೆ ಗಾಡ್‌ಫಾದರ್‌ಗಳಂತೆ.

ಒಮ್ಮೆ ಲೋಕಾಯುಕ್ತ ಅಧಿಕಾರಿಗಳು ಭ್ರಷ್ಟನೊಬ್ಬನ ಅಕ್ರಮ ಆಸ್ತಿ ಮೇಲೆ ರೇಡ್ ಹಾಕಿದಾಗ ಆತನಿಗೆ ಪಾಟೀಲ ಮೊದಲೇ ಮಾಹಿತಿ ನೀಡಿ ಸೂಟ್‌ಕೇಸ್ ತುಂಬಾ ಹಣ ಪಡೆದಿದ್ದ ಎಂದು ಕೆಲವು ಪ್ರಾಮಾಣಿಕ ಅಧಿಕಾರಿಗಳು ಲೋಕಾಯುಕ್ತದ ಎಡಿಜಿಪಿ ಆರ್.ಕೆ.ದತ್ತ ಅವರಿಗೆ ದೂರು ಕೊಟ್ಟು ಪಾಟೀಲನ ಎತ್ತಂಗಡಿಗೆ ಯತ್ನಿಸಿದ್ದರು.


ಆದರೆ ಪಾಪಿ ಚಿರಾಯು ಎಂಬಂತೆ ಜೆ.ಆರ್.ಪಾಟೀಲ ಇನ್ನೂ ಇದೇ ಇಲಾಖೆಯಲ್ಲೇ ಮುಂದುವರೆದಿದ್ದಾನೆ.

ಸೋಮಣ್ಣಗೆ ಎಕ್ಕಡದೇಟು

....10

ಇಲ್ಲಿ ಯಾವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಏಕೆಂದರೆ ಸೋಮಣ್ಣ ಮತ್ತು ಅಶೋಕ್ ನಡುವಿನ ಜಿದ್ದಾಜಿದ್ದಿ ಸದ್ಯ ಯಾವ ಮಟ್ಟಕ್ಕಿದೆಯೆಂದರೆ; ಯಾರನ್ನು ಯಾರು ಮುಗಿಸಿದರೂ ಅಚ್ಚರಿಯಿಲ್ಲ. ಯಡ್ಡಿಗೆ ಮುಖ್ಯಮಂತ್ರಿಗಿರಿ ಕೈ ತಪ್ಪಿದ ನಂತರ ಬಿಜೆಪಿ ಅಕ್ಷರಶಃ ಇಬ್ಭಾಗವಾಗಿ ಹೋಗಿದೆ. ಒಂದೆಡೆ ಶೆಟ್ಟರ್, ಈಶ್ವರಪ್ಪ ಅಶೋಕ್ ನೇತೃತ್ವದ ಅನಂತ್‌ಕುಮಾರ್ ಬಣವಾದರೆ ಅದನ್ನು ಶತಗತಾಯ ಹಣಿಯಲು ಸದಾನಂದ ಗೌಡ, ನಿರಾಣಿ, ಸೋಮಣ್ಣ, ಕರಂದ್ಲಾಜೆ, ರೇಣುಕಾಚಾರ್ಯರ ಯಡ್ಡಿ ಬಣ ಕತ್ತಿಮಸೆಯುತ್ತಿದೆ. ಈ ಪೈಕಿ ನೇರಾನೇರ ಮುಖಾಮುಖಿಯಾಗಿರುವುದು ಸೋಮಣ್ಣ ಮತ್ತು ಅಶೋಕ್ ಮಾತ್ರ!

ಇವತ್ತಲ್ಲ ನಾಳೆ ತಾನು ಬೆಂಗಳೂರು ಉಸ್ತುವಾರಿ ಮಂತ್ರಿಯಾಗಲೇಬೇಕೆಂಬುದು ಸೋಮಣ್ಣನ ಬಿಗಿಪಟ್ಟು. ಸದ್ಯ ಚಿನ್ನದ ಗಣಿಯಂತಿರುವ ಬಿಬಿಎಂಪಿಯನ್ನು ಆಳುತ್ತಿರುವುದು ಗೃಹಮಂತ್ರಿ ಅಶೋಕ್. ಹೆಸರಿಗೆ ದಾಸರಹಳ್ಳಿ ಶಾಸಕ ಮುನಿರಾಜನ ಶಿಷ್ಯೆ ಶಾರದಮ್ಮ ಮೇಯರಾದರೂ ಇಡೀ ಬಿಬಿಎಂಪಿಯನ್ನು ಅಶೋಕ್ ಪರವಾಗಿ ನಿಯಂತ್ರಿಸುತ್ತಿರುವವನು ಕೇಡಿ ಉಪಮೇಯರ್ ಹರೀಶ. ಒಂದೆಡೆ ಅನಂತ ಕುಮಾರ್ ಬೇನಾಮಿ ಸುಬ್ಬಣ್ಣನಿಗೂ ಪಾಲುದಾರನಾಗಿ ಮತ್ತೊಂದೆಡೆ ಅಶೋಕ್ ಪರ ಬಿಬಿಎಂಪಿಯ ಎಲ್ಲಾ ಡೀಲುಗಳನ್ನು ಸಂಭಾಳಿಸುವ ಉಪಮೇಯರ್ ಹರೀಶನಿಂದಾಗಿ ಸೋಮಣ್ಣನೇ ನಿಂತು ಗೆಲ್ಲಿಸಿದ ವಿಜಯನಗರ ಮತ್ತು ಗೋವಿಂದರಾಜನಗರ ವ್ಯಾಪ್ತಿಯ ಹದಿನಾಲ್ಕು ಮಂದಿ ಬಿಜೆಪಿ ಕೌನ್ಸಿಲರ್‌ಗಳ ಪೈಕಿ ಚಂದ್ರಾಲೇಔಟಿನ ಒಬ್ಬ ಉಮೇಶ್ ಶೆಟ್ಟಿಯನ್ನು ಬಿಟ್ಟರೆ ಮಿಕ್ಕೆಲ್ಲರೂ ಅಶೋಕ್ ಜೊತೆ ಕೈಜೋಡಿಸಿದ್ದು ಸೋಮಣ್ಣನಿಗಾದ ದೊಡ್ಡ ಮುಖಭಂಗ!



ಅಶೋಕ್ ತಮ್ಮ ರವಿ


ಒಬ್ಬ ಉಪಮೇಯರ್ ಹರೀಶ್ ಮಾತ್ರವಲ್ಲ, ಸೋಮಣ್ಣನೇ ಸಾಕಿ ಬೆಳೆಸಿದ ರೌಡಿ ಕೌನ್ಸಿಲರ್ ರವೀಂದ್ರನೇ ಕೈಕೊಟ್ಟು ಅಶೋಕ್ ಪಾಳಯಕ್ಕೆ ನೆಗೆದುಬಿಟ್ಟ. ಸೋಮಣ್ಣನಿಂದಲೇ ಬಿಬಿಎಂಪಿಗೆ ಗೆದ್ದು ಬಂದಿದ್ದರೂ ಸೋಮಣ್ಣನ ಕಡುವೈರಿ ಅಶೋಕ್ ಬೆನ್ನಿಗೆ ಈ ಎಲ್ಲಾ ಕೌನ್ಸಿಲರ್‌ಗಳು ನಿಲ್ಲುತ್ತಾರೆಂದರೆ ಅದಕ್ಕಿರುವ ಕಾರಣ ಬಿಬಿಎಂಪಿಯ ಮೇಲೆ ಅಶೋಕ್‌ಗಿರುವ ಹಿಡಿತ.

ಎಲ್ಲಿ ಸೋಮಣ್ಣನ ಜೊತೆ ಗುರುತಿಸಿಕೊಂಡರೆ ತಮ್ಮ ವಾರ್ಡಿಗೆ ಹರಿದುಬರುವ ಮೇಯರ್ ಫಂಡು ತಪ್ಪುತ್ತೋ, ದುಡ್ಡು ಹೊಡೆಯಲು ಏನೆಲ್ಲ ಅಡ್ಡಗಾಲಿಡುತ್ತಾರೋ ಎಂಬುದು ಸೋಮಣ್ಣನ ಶಿಷ್ಯರ ಅಳುಕು. ಸೋಮಣ್ಣನ ಬಂಟರ ಪೈಕಿ ಖತರ್‌ನಾಕ್ ರವೀಂದ್ರನನ್ನು ಮುಂದೊಮ್ಮೆ ಎಮ್ಮೆಲ್ಲೇ ಮಾಡುವ ಮಟ್ಟಕ್ಕೆ ಅಶೋಕ್ ಎತ್ತಿಕಟ್ಟಿದ್ದೂ ಸೋಮಣ್ಣನಿಗೆ ನುಂಗಲಾರದ ತುತ್ತು.

ಹೀಗಾಗಿ ಅಶೋಕ್ ಬಾಲ ಕತ್ತರಿಸದೇ ಸೋಮಣ್ಣನಿಗೆ ವಿಧಿಯಿಲ್ಲ. ಕಳೆದ ಚುನಾವಣೆಯಲ್ಲಿ ಒಳಗೊಳಗೇ ಎದುರಾಳಿ ಲೇಔಟ್ ಕೃಷ್ಣಪ್ಪನ ಜೊತೆ ಕೈಜೋಡಿಸಿ ತನ್ನನ್ನು ಅಶೋಕ್ ಸೋಲಿಸಿದ್ದು, ತನ್ನ ವಿರುದ್ಧ ಒಕ್ಕಲಿಗರ ಅಶ್ವತ್ಥನಾರಾಯಣನನ್ನು ಎತ್ತಿಕಟ್ಟಿದ್ದು, ಕೆಲ ದಿನಗಳ ಕಾಲ ಮಂತ್ರಿಗಿರಿಯೇ ಇಲ್ಲದಂತೆ ಮಾಡಿದ್ದು; ಇತ್ಯಾದಿ ಅಶೋಕ್ ನೀಡಿದ ಪ್ರತಿಕಾಟವನ್ನೂ ಸೋಮಣ್ಣ ಸಹಿಸಿಕೊಂಡೇ ಬಂದ. ಹೇಗೂ ಮುಖ್ಯಮಂತ್ರಿ ಯಡ್ಡಿಯ ನೆರಳಿತ್ತಲ್ಲ; ಇವತ್ತಲ್ಲ ನಾಳೆ ಅಶೋಕ್‌ಗೊಂದು ಗತಿ ಕಾಣಿಸಲು ಸೋಮಣ್ಣ ನಡೆಸಿದ ಹೋರಾಟವಾದರೂ ಎಂಥಾದ್ದು?

ತನ್ನ ಛೇಲಾ ಮೂಟೆ ಮಂಜನನ್ನು ಎತ್ತಿಕಟ್ಟಿ ಅಶೋಕ್ ವಿರುದ್ಧ ಭೂಕಬಳಿಕೆಯ ಕೇಸು ಹಾಕಿಸಿದ. ಅಶೋಕ್ ವಿರುದ್ಧ ಯಡ್ಡಿ ಬಣದಿಂದ ಪರ್ಯಾಯ ಒಕ್ಕಲಿಗರ ನಾಯಕನೊಬ್ಬನನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಮೊದಲು ರಾಜರಾಜೇಶ್ವರಿ ನಗರದ ಶಾಸಕ ಎಂ. ಶ್ರೀನಿವಾಸ್‌ರಿಗೆ ಟಾನಿಕ್ ಕೊಟ್ಟ. ಅದು ಫಲ ಕೊಡದೇ ಹೋದಾಗಲೇ ಸೋಮಣ್ಣನ ಕಣ್ಣಿಗೆ ಬಿದ್ದಿದ್ದು ಚನ್ನಪಟ್ಟಣದ ಯೋಗೇಶ್ವರ್. ತಾನೇ ನಿಂತು ಯೋಗೇಶ್ವರ್‌ನನ್ನು ಸೋಮಣ್ಣ ಗೆಲ್ಲಿಸಿಕೊಂಡ. ಮಂತ್ರಿ ಮಾಡಿಸಿದ್ದೂ ಆಯ್ತು. ಹಂಚಿ ತಿನ್ನುವ ಅಶೋಕ್ ಎಲ್ಲಿ, ತಾನೇ ನುಂಗುವ ಯೋಗೇಶ್ವರ್ ಎಲ್ಲಿ?

ಇಷ್ಟೇ ಆಗಿದ್ದರೆ ಅಶೋಕ್ ಈ ಪಾಟ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಸೋಮಣ್ಣ ತನ್ನ ವಿರುದ್ಧ ಕಳೆದ ಚುನಾವಣೆಯಲ್ಲಿ ದ್ರೋಹವೆಸಗಿದ ಒಬ್ಬಬ್ಬನೇ ಅಶೋಕ್ ಅನುಯಾಯಿಗಳನ್ನು ಹುಡುಹುಡುಕಿ ಮಟ್ಟಾ ಹಾಕತೊಡಗಿದ. ವಿಜಯನಗರದ ಒಂದಾನೊಂದು ಕಾಲದ ಬಿಜೆಪಿ ನಾಯಕ ಕುರುಬರ ರವೀಂದ್ರ, ಕಾವೇರಿಪುರದ ಮಂಜುನಾಥ್, ಮಾಜಿ ಡೆಪ್ಯೂಟಿ ಮೇಯರ್ ಪುಟ್ಟರಾಜು, ಕೈಗಾರಿಕಾ ನಗರದ ಗಂಗಭೈರಯ್ಯ, ಗೋವಿಂದರಾಜನಗರದ ಚನ್ನಪ್ಪ, ಗಂಗಬೈರನ ಛೇಲಾ ರವಿಕುಮಾರ್, ದಾಸರಹಳ್ಳಿ ಮುದ್ದಪ್ಪ ಹೀಗೆ ಅಶೋಕ್ ನಿಷ್ಠ ಒಬ್ಬೊಬ್ಬರೇ ಮೂಲ ಬಿಜೆಪಿ ನಾಯಕರನ್ನು ಸೋಮಣ್ಣ ಇನ್ನಿಲ್ಲದಂತೆ ತುಳಿದುಬಿಟ್ಟ.



ಮತ್ತೊಂದೆಡೆ ಯಡ್ಡಿಯ ಲಿಂಗಾಯತ ಲಾಬಿಯಲ್ಲಿ ಸೋಮಣ್ಣ ಮಂಚೂಣಿಗೆ ಬಂದದ್ದು ಅಶೋಕ್ ಪಾಲಿಗೆ ದೊಡ್ಡ ಅನಾಹುತವಾಗಿ ಪರಿಣಮಿಸಿತು. ಒಂದೆಡೆ ಸಿದ್ಧಗಂಗೆ ಸಾಮ್ರಾಜ್ಯದಲ್ಲಿ ಸೋಮಣ್ಣ ಹಿಡಿತ ಸಾಧಿಸಿದ್ದು, ಸುತ್ತೂರಿನಲ್ಲಿ ವೀರಶೈವ ಮಹಾಧಿವೇಶನದಲ್ಲಿ ಮಿಂಚಿದ್ದು, ಹೊಸ ಮುಖ್ಯಮಂತ್ರಿ ಆಯ್ಕೆಯಲ್ಲಿ ನಿರಾಣಿ ಜೊತೆ ಸೇರಿ ಲಿಂಗಾಯತರ ದಂಡು ಕಟ್ಟಿದ್ದು, ಯಡ್ಡಿ ಬಣದ ಸದಾನಂದಗೌಡರೇ ಮುಖ್ಯಮಂತ್ರಿಯಾಗುವಲ್ಲಿ ಸೋಮಣ್ಣ ಪ್ರಮುಖ ಪಾತ್ರ ವಹಿಸಿದ್ದು ಅಶೋಕ್ ಹೊಟ್ಟೆಯಲ್ಲಿ ಕಲಿಸಿದಂತಾಯ್ತು.


ಇನ್ನೇನು ಮುಂಬರುವ ಸಂಪುಟ ವಿಸ್ತರಣೆಯಲ್ಲಿ… ಎರಡು ಖಾತೆಗಳ ಪೈಕಿ ಸಾರಿಗೆಯನ್ನು ಕಿತ್ತುಕೊಳ್ಳ… ಶತಸಿದ್ಧ. ಇದಕ್ಕೂ ಸೋಮಣ್ಣನೇ ಬತ್ತಿಯಿಟ್ಟಿದ್ದಾ… ಅಶೋಕ್ ಗರಮ್ಮಾದರೆ ಮತ್ತೊಂದೆಡೆ ಬೆಂಗಳ… ಉಸ್ತುವಾರಿಗೂ ಸೋಮಣ್ಣನೇ ಬರುತ್ತಾನೆಂಬ ಪುಕಾರ… ಈ ಎಲ್ಲ ಹೊಟ್ಟೆ ಸಂಕಟದ ನಡುವೆಯೇ ಕ… ಉಪಚುನಾವಣೆಯಲ್ಲಿ ಸೋಮಣ್ಣ ತನ್ನ ಕಿಲಾ… ಮಾಡಿಬಿಟ್ಟ. ಕೊಪ್ಪಳದ ಬಿಜೆಪಿ ಅಭ್ಯರ್ಥಿ ಕರಡಿ ಸ… ಹೇಳಿಕೇಳಿ ಯಡ್ಡಿಯ ಪರಮ ನಿಷ್ಠ. ಅ… ಒಳಗೊಳಗೇ ಸೋಲಿಸಿ ಯಡ್ಡಿಗೊ… ಬರೆಹಾಕಲು ಅನಂತ್, ಶೆಟ್ಟರ್, ಅಶೋ… ಈಶ್ವರಪ್ಪ ಎಲ್ಲರೂ ಕೈಜೋಡಿಸಿಬಿಟ್ಟರು.

ಯಡ್ಡಿ ವಿರೋಧಿ ಬಿಜೆಪಿ ನಾಯಕರ… ಕದ್ದೂಮುಚ್ಚಿ ಕಾಂಗ್ರೆಸ್ ಅಭ್ಯರ್ಥಿ ಹಿಟ್ನಾಳ… ಗೆಲ್ಲಿಸಲು ನಡೆಸಿದ ರಣತಂತ್ರ ಗೊತ್ತಾ… ಸೋಮಣ್ಣ ನೇರವಾಗಿ ಕೊಪ್ಪಳಕ್ಕೆ ಕೈ… ಅದು ಬಿಜೆಪಿ-ಕಾಂಗ್ರೆಸ್ ಜಿದ್ದಾಜಿದ್ದಿಗಿಂ… ಯಡ್ಡಿ ಮತ್ತು ಅನಂತ್, ಸೋಮಣ್ಣನ… ಅಶೋಕ್ ಬಣಗಳ ಜಂಗಿಕುಸ್ತಿಯಾ… ಕೊಪ್ಪಳಕ್ಕೆ ಅಶೋಕ್, ಶೆಟ್ಟರ್, ಅ… ಈಶ್ವರಪ್ಪ ಯಾರೂ ಕಾಲಿಡದ ಹಾಗೇ ನೋಡಿಕೊಂ… ಸೋಮಣ್ಣ. ಒಂದೆಡೆ ಕೊಪ್ಪಳದಲ್ಲಿ ಸೋಮಣ್ಣ… ಕೈಚಳಕ, ತನ್ನ ವಿರುದ್ಧ ಪರ್ಯಾಯ ಒಕ್ಕಲಿಗ ನಾಯಕನ… ಯೋಗೇಶ್ವರ್‌ನನ್ನು ಹುಟ್ಟುಹಾಕಿದ್ದು, ತನ್ನಿಂದ… ಖಾತೆಯನ್ನು ಕಿತ್ತುಕೊಳ್ಳಲು ನಡೆಸಿದ ಷಡ್ಯಂತ್ರ ಮತ್ತು… ಬೆಂಗಳೂರು ಉಸ್ತುವಾರಿ ಮಂತ್ರಿಯಾಗಲು ಆಡು… ಆಟ ಕಂಡ ಅಶೋಕ್ ಹತಾಶೆ ಅಂತಿಮವಾಗಿ ಎಕ್ಕಡ… ಮಟ್ಟಕ್ಕೆ ಬಂತೆ?

ಹೌದೆನ್ನಲು ಇದಕ್ಕಿಂತಲೂ ಪುರಾವೆ ಏಕೆ? ಕಾರ… ಬೇಕೆ?

• ರಾ. ಸೋಮನ…

ಮೂಡಿಗೆರೆ: ಲಂಚಕೋರ ಆರ್‌ಐ ಪೂರ್ಣೇಶನ ಬೆಂಗಾವಲಿಗೆ ನಿಂತವರು




ಮೂಡಿಗೆರೆ ಕಂದಾಯ ಇಲಾಖೆಯಲ್ಲಿ ಖದೀ ... ತಾರಕಕ್ಕೇರಿದೆ. ಇಲ್ಲಿ ಬಡ ರೈತರಿಗೆ ... ಬಹುತೇಕ ಕಡತಗಳು ನಾಪತ್ತೆಯಾಗು ..., ಪೋಡಿ, ಖಜಾನೆ, ಸಬ್ ರಿಜಿಸ್ಟ್ರಾರ್‌ಗಳಲ್ಲಿ ... ಅಧಿಕಾರಿಗಳ ಅಟ್ಟಹಾಸ ಮಿತಿ ಮೀರಿದೆ. ...ಗನಿಂದ ಹಿಡಿದು ಉಪ ವಿಭಾಗಾಧಿಕಾರಿ ... ಒಪ್ಪಿಸದಿದ್ದರೆ ಜಪ್ಪಯ್ಯ ಅಂದರೂ ಕಡತ ... ಇಡುವುದಿಲ್ಲ. ಈ ಸಮಸ್ಯೆಯಿಂದ ...ನ್ಯರು ತತ್ತರಿಸಿ ಹೋಗಿದ್ದಾರೆ. ಇದರ ...ಕ್ಕೆ ಬಿಜೆಪಿ ಶಾಸಕ ಎಂ.ಪಿ.ಕುಮಾರಸ್ವಾಮಿ ... ಯಾವೊಬ್ಬ ಜನಪ್ರತಿನಿಧಿಯೂ ...ದಿರುವುದು ಇಲ್ಲಿನ ದುರಂತ.

...ಬೆಗೆ ಗೋಣಿಬೀಡು ಭಾಗದ ರಾಜಸ್ವ ...ಪೂರ್ಣೇಶ ಮೂರ್ತಿ ಲೋಕಾಯುಕ್ತ ಬಲೆಗೆ ... ಈ ದಗಾಕೋರ ಯಾವ ಪರಿಯಲ್ಲಿ ... ದಂಧೆಗೆ ಇಳಿದಿದ್ದನೆಂದರೆ, ಕಂಡಕಂಡ ...ಬಾಯಿಟ್ಟು ಗಲೀಜು ಮೆತ್ತಿಕೊಂಡಿದ್ದಾನೆ. ... ಚಂದ್ರೇಗೌಡನೆಂಬ ಬಡ ರೈತನಿಗೆ ಭೂಮಿ ...ವಿಚಾರದಲ್ಲಿ ಅನಾಮತ್ತು ಒಂದೂವರೆ ಲಕ್ಷ ...ಜು ಹೋಗಿ ಎಡವಟ್ಟು ನಡೆದು ಸಿಕ್ಕಿಬಿದ್ದಿದ್ದಾನೆ. ಈತ ಎಂತಹ ಹರಾಮಿ ...ಂದರೆ ಸುಲಿಗೆಯಿಂದ ಅರಮನೆ ಕಟ್ಟಿ ಐಶಾರಾಮಿ ಜೀವನ ...ದ್ದಾನೆ.

...ತಿಕರಾದರೂ ಸರಿ, ಹೆಂಡತಿಯ ತಾಳಿ ಮಾರಿಯಾದರೂ ಸರಿ, ಕೆಲಸ ...ಕಾದರೆ ಪೂರ್ಣೇಶನ ಹುಂಡಿಗೆ ಹಣ ತಂದು ಹಾಕಬೇಕು. ಇಲ್ಲದಿದ್ದರೆ ... ವಿಲೇವಾರಿ ಕನಸಿನ ಮಾತು. ಅಲ್ಲಲ್ಲಿ ಗ್ರಾಮಲೆಕ್ಕಿಗನಾಗಿ, ರಾಜಸ್ವ ...ಗಿ ಘನ ಕಾರ್ಯ ನಿರ್ವಹಿಸಿರುವ ಪೂರ್ಣೇಶನಿಗೆ ಒಟ್ಟು ಹದಿಮೂರು ...ರ್ಜಿತ ಆಸ್ತಿಯಿದೆ. ತತ್ಕೊಳ ಮೀಸಲು ಅರಣ್ಯ ವ್ಯಾಪ್ತಿಯಲ್ಲಿ ಆದಿವಾಸಿ ...ಗಡಿ ನಡೆದಾಗ ಪೂರ್ಣೇಶಮೂರ್ತಿ ತನ್ನ ತಾಯಿ ಶಿವಲಿಂಗಮ್ಮರ ... ಪಟ್ಟಿಯಲ್ಲಿ ಸೇರಿಸಿ ನಿರಾಶ್ರಿತರಿಗೆ ಸಿಗುವ ಸೌಕರ್ಯಗಳನ್ನು ...ಂಡಿದ್ದಾನೆ. ಆದರೆ ಆ ಸಮಯದಲ್ಲಿ ಶಿವಲಿಂಗಮ್ಮ ನಾಪತ್ತೆಯಾಗಿದ್ದರು. ...ಕಲಿ ಸಹಿ ಹಾಕಿ ಜೇನುಬೈಲು ಎಂಬಲ್ಲಿ ಎರಡು ಎಕರೆ-ಜಮೀನು ...ಚಿಸಿದ್ದಾನೆ.

ನಿರಾಶ್ರಿತರಿಗೆ ಸೇರಬೇಕಾದ ಪರಿಹಾರದ ಮೊತ್ತ ಮೂರೂವರೆ ...ಯಾ ಪೈಸೆ ಬಿಡದೆ ಗುಂಜಿಕೊಂಡಿದ್ದಾನೆ. ವಿದ್ಯಾನಗರದಲ್ಲಿ ಆರು ಎಕರೆ ...ತೋಟವನ್ನು ಬೇನಾಮಿ ಹೆಸರಿನಲ್ಲಿ ಮಾಡಿಕೊಂಡಿದ್ದಾನೆ. ಊರುಬಗ್ಗೆ, ಅಂಗಡಿ ಮುಂತಾದ ಗ್ರಾಮಗಳಲ್ಲಿಯೂ ಈತನಿಗೆ ಸೇರಿದ ಹತ್ತಾರು ಎಕರೆ ಜಮೀನಿದೆ. ಮೇಗಲಪೇಟೆಯ ತನ್ನ ಮನೆಯ ಪಕ್ಕದಲ್ಲಿ ಬೃಹತ್ ಬಂಗಲೆಯನ್ನು ಸುರೇಂದ್ರ ಎಂಬಾತನ ಹೆಸರಿನಲ್ಲಿ ಕಟ್ಟಿಸುತ್ತಿದ್ದಾನೆ. ಇದರ ಅಂದಾಜು ಮೊತ್ತ ಕನಿಷ್ಠವೆಂದರೂ ಮೂರು ಕೋಟಿ ದಾಟುತ್ತದೆ. ಇನ್ನು ಬಡ್ಡಿ ದಂಧೆಯಲ್ಲಿ ಮಾರವಾಡಿಗಳನ್ನೂ ಮೀರಿಸುವ ಮಟ್ಟದಲ್ಲಿ ಬೆಳೆದು ನಿಂತಿದ್ದಾನೆ.

ಮೂಡಿಗೆರೆಯ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ಜನಸಾಮಾನ್ಯರ ಆಕ್ರೋಶ ಇಂದು ಅಥವಾ ನೆನ್ನೆಯ ಸಂಗತಿಯಲ್ಲ, ಈ ಇಲಾಖೆಯೊಳಗೆ ಅದೆಷ್ಟೋ ಗುಳ್ಳೇನರಿಗಳಿವೆ. ಕ್ಷೇತ್ರದ ಶಾಸಕ ಸರಿಯಾಗಿ ಕಾರ್ಯ ನಿರ್ವಹಿಸಿದ್ದರೆ ತಾಲ್ಲೂಕಿನ ಜನರಿಗೆ ಈ ಪರಿಯ ದುರವಸ್ಥೆ ಬರುತ್ತಿರಲಿಲ್ಲ. ಎರಡು ಸಲ ಶಾಸಕನಾದ ಎಂ.ಪಿ.ಕುಮಾರಸ್ವಾಮಿ ಯಾವತ್ತಿಗೂ ಬಡವರ ಪರ ಧ್ವನಿಯಾಗಲಿಲ್ಲ. ಹೀಗಾಗಿ ಮೂಡಿಗೆರೆ ತಾಲ್ಲೂಕು ಕಚೇರಿಯ ಗೋಡೆಗಳೂ ಲಂಚಕ್ಕಾಗಿ ಬಾಯಿ ಬಿಡುತ್ತಿವೆ. ಪ್ರಶ್ನಿಸುವ ತಾಕತ್ತು ಎಂಥವರಿಗೂ ಬರುತ್ತಿಲ್ಲ. ಹೀಗಾಗಿ ಮಗುಮ್ಮಾಗಿ ಮೇಯುವ ಕಾಯಕದಲ್ಲಿ ಅಧಿಕಾರಿಗಳು, ನೌಕರರು ಪಳಗಿ ಹೋಗಿದ್ದಾರೆ.



ಕುಮಾರಸ್ವಾಮಿ



ಪೂರ್ಣೇಶ್ ಮೂರ್ತಿ ಇಡೀ ಗೋಣಿಬೀಡು ಹೋಬಳಿ ಜನರನ್ನು, ಬಡವ, ದಲಿತ, ಕೂಲಿಕಾರ, ರೈತರೆನ್ನದೇ ಸುಲಿದಿದ್ದಾನೆ. ಪ್ರಭಾವಿ ವ್ಯಕ್ತಿಗಳಿಗೆ ಅಂದಾಜು 260 ಎಕರೆ ಭೂಮಿಯ ದಾಖಲೆ ಬೇನಾಮಿ ಹೆಸರಿನಲ್ಲಿ ಸೃಷ್ಟಿಸಿದ್ದಾನೆ. ಅನೇಕ ಕಡೆಗಳಲ್ಲಿ ಕಂದಾಯ ಭೂಮಿಯನ್ನು ಭೂಗಳ್ಳರಿಗೆ ಹಂಚಿದ್ದಾನೆ. ಹಿಂದೆ ಕಾಂಗ್ರೆಸ್ ಸರಕಾರದಲ್ಲಿ ಅಕ್ರಮ ಸಕ್ರಮ ಸಂಬಂಧಿ ಸಾಗುವಳಿ ಚೀಟಿಗಾಗಿ ಎಕರೆಗೆ 25 ಸಾವಿರ ಸುಲಿಯುತ್ತಿದ್ದವನು ಬಿಜೆಪಿ ಸರಕಾರದಲ್ಲಿ 30 ಸಾವಿರದ ಗಡಿ ದಾಟಿದ್ದಾನೆ.

ಬಾಸೂರಿನ ಚಂದ್ರೇಗೌಡ ಎಂಬುವವರ 4.38 ಎಕರೆ ಭೂಮಿಗೆ ಸಕ್ರಮ ಹಿಡುವಳಿ ಖಾತೆ ದೊರಕಿಸಲು ಮೂರ್ತಿ ಲಂಚಕ್ಕಾಗಿ ಪೀಡಿಸಿದ್ದ ಒಂದೂವರೆ ಲಕ್ಷ ಹೊಂದಿಸಲು ಅಸಾಧ್ಯ ವೆಂದು ಕಾಡಿ ಬೇಡಿ ಕೊಂಡರೂ ಪೂರ್ಣೇಶ್ ಬಗ್ಗಲಿಲ್ಲ, ವಯಸ್ಸಿಗೆ ಬಂದಿರುವ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಸಲು ಹೆಣಗಾಡುತ್ತಿದ್ದ ಚಂದ್ರೇಗೌಡ ನಿಜಕ್ಕೂ ಜೀವನದಲ್ಲಿ ಬೇಸತ್ತಿದ್ದರು. ಅಂಥಾ ಮನುಷ್ಯನನ್ನೂ ಪೂರ್ಣೇಶ ಬಿಡಲಿಲ್ಲ. ಚಂದ್ರೇಗೌಡ ಹಲ್ಲುಮಿಡಿ ಕಚ್ಚಿ ಪೂರ್ಣೇಶ್ ವಿರುದ್ಧ ಲೋಕಾಯುಕ್ತರಿಗೆ ದೂರಿತ್ತಿದ್ದರು.

ಈ ಹೊತ್ತಿಗೆ ಪೂರ್ಣೇಶ್‌ನಿಂದ ವಂಚನೆಗೊಳಗಾದ ಜನರು ಶತಾಯ ಗತಾಯ ಆತನನ್ನು ಕಂಬಿಯೊಳಗಿನಿಂದ ಹೊರ ಬಾರದಂತೆ ತಡೆಯಬೇಕೆನ್ನುವ ಆಕಾಂಕ್ಷೆ ಹೊಂದಿದ್ದರು. ಆದರೆ ಅದು ಫಲಿಸಲಿಲ್ಲ, ಕಾವ್ ಕಾವ್ ಅನ್ನುತ್ತಿದ್ದ ಕಾಂಗ್ರೆಸ್ಸಿಗರ ದಂಡೊಂದು ಪೂರ್ಣೇಶನ್ನು ಕಾಯುತ್ತಿತ್ತು, ಪೂರ್ಣೇಶನಿಗೆ ಕೇಂದ್ರ ಸಚಿವ ಎಸ್.ಎಂ.ಕೃಷ್ಣರ ಅಳಿಯ ಸಿದ್ಧಾರ್ಥ ಬೆನ್ನಿಗಿದ್ದರೆ ಮತ್ತೊಂದು ಕಡೆಗೆ ರಂಭಾಪುರಿ ಮಠಾಧೀಶ ವೀರ ಸೋಮೇಶ್ವರ ಸ್ವಾಮೀಜಿಯ ನೆರಳಿತ್ತು, ಕಟ್ಟ ಕಡೆಗೆ ಈ ನುಂಗುಬಾಕನಿಗೆ ಜಾಮೀನು ಕೊಟ್ಟವನು ಕಾಂಗ್ರೆಸ್‌ನ ಜಿಲ್ಲಾ ಹಿಂದುಳಿದ ವರ್ಗದ ಅಧ್ಯಕ್ಷ ಹೇಮಶೇಖರ್.

ಮೂಡಿಗೆರೆ ಬಳಿಯ ಮೇಗಲಪೇಟೆ ಎಂಬಲ್ಲಿ ಅನಾದಿ ಕಾಲದಿಂದ ನೇಪಥ್ಯಕ್ಕೆ ಸರಿದಿದ್ದ ಮಹಂತಿನ ಮಠಕ್ಕೆ ಮರುಜೀವ ಕೊಡುವ ಕೆಲಸದಲ್ಲಿ ಪೂರ್ಣೇಶನ ಪಾತ್ರ ತೀರ ದೊಡ್ಡದು. ಹತ್ತು ವರ್ಷಗಳ ಹಿಂದೆ ಈತ ಪಡ್ಡೆ ಹೈದನಂತಿದ್ದ ಧರಣೇಶನೆಂಬ ಹೆತ್ಲಾಂಡಿಗೆ ಸ್ವಾಮಿಯ ನಾಮ ಬಳಿದು ಮಠದಲ್ಲಿ ಕುಳ್ಳಿರಿಸಿ ಎಡವಟ್ಟು ಮಾಡಿಕೊಂಡಿದ್ದ. ಧರಣೇಶ ಮಠವನ್ನು ಸಂಪೂರ್ಣವಾಗಿ ಎಕ್ಕುಟ್ಟಿಸಿದ್ದಾನೆ. ಸ್ವಾಮಿಯ ವೇಷದಲ್ಲಿದ್ದ ಧರಣೇಶ ನಿತ್ಯಾನಂದನ ಅವತಾರದಲ್ಲಿ ಕಾಣಿಸಿಕೊಂಡಿದ್ದ. ಒಂದೊಮ್ಮೆ ಪೂಜೆಗೆ ಬಂದ ಹೆಂಗಳೆಯರ ಚಿನ್ನಾಭರಣಗಳನ್ನು ಎಗರಿಸುತ್ತಿದ್ದ. ಕಡೆಗೊಂದು ದಿನ ಪೂರ್ಣೇಶನ ತಾಯಿ ಶಿವಲಿಂಗಮ್ಮ ಮಠದಲ್ಲಿ ಪೂಜೆಗೆ ಕುಳಿತಿದ್ದ ಸಮಯದಲ್ಲಿ ಆಕೆಯ ಕತ್ತು ಹಿಸುಕಿ ಕೊಂದು ಜೈಲು ಸೇರಿದ್ದ.


ಸಿದ್ಧಾರ್ಥನ ಕುದುರೆಗುಂಡಿ ಎಸ್ಟೇಟ್‌ಗೆ ಭೂಮಿಯ ಕೊಡುಗೆ ಸಿಗಲು ಪೂರ್ಣೇಶ್ ಮೂರ್ತಿ ಕಾರಣನಾಗಿರುವ ದಟ್ಟ ವದಂತಿಗಳಿವೆ. ಒಂದು ಅಂದಾಜಿನ ಪ್ರಕಾರ 120 ಎಕರೆ ಭೂಮಿಯನ್ನು ಬೇನಾಮಿ ಹೆಸರಿನಲ್ಲಿ ಸಿದ್ಧಾರ್ಥನ ತೆಕ್ಕೆಗೆ ಹಾಕಿರುವ ಮಾಹಿತಿಯಿದೆ. ಹೀಗಾಗಿ ಸಿದ್ಧಾರ್ಥ ಈ ದಗಾಕೋರನ ಬೆನ್ನಿಗೆ ನಿಂತು ರಕ್ಷಿಸಿರುವ ಸಾಧ್ಯತೆಯನ್ನು ಯಾರೂ ಕೂಡ ಅಲ್ಲಗಳೆಯುತ್ತಿಲ್ಲ. ಒಂದೆಡೆ ಲೋಕಾಯುಕ್ತ ಡಿವೈಎಸ್‌ಪಿ ರಾಮಾನಾಯ್ಕರ ತಂಡ ಶ್ರಮ ವಹಿಸಿ ಲಂಚಕೋರ ಪೂರ್ಣೇಶ್‌ನನ್ನು ಹಿಡಿದು ಜೈಲಿಗಟ್ಟಿದ ಬಳಿಕ ಕಾಣದ ಕೈಗಳು ಆತನ ತಲೆ ಕಾಯಲು ಹವಣಿಸುತ್ತಿವೆ. ಮತ್ತೊಂದೆಡೆ ಬಡ ಪಾಯಿ ದೂರುದಾರ ಚಂದ್ರೇಗೌಡರನ್ನು ಹೆದರಿಸಿ ಪ್ರಕರಣವನ್ನು ಹಳ್ಳ ಹಿಡಿಸುವ ಪ್ರಯತ್ನ ಬಿರುಸಿನಿಂದ ಸಾಗುತ್ತಿದೆ. ಪರಿಸ್ಥಿತಿ ಹೀಗೇ ಮುಂದುವರೆದರೆ ಚಂದ್ರೇಗೌಡರನ್ನು ದೇವರೇ ಕಾಪಾಡಬೇಕು.

• ಅಜೀಜ್ ಕಿರುಗುಂದ

ಮಂಡ್ಯ: ಎಸ್ಸೆಸ್ಎಲ್ಸಿ ಫೇಲ್ ಪೊನ್ನ ನಗರಸಭೆ ಆಯುಕ್ತನಾದ ಪವಾಡ!

...ಡ್ಯ ನಗರಸಭೆಗೆ ಪವಾಡಪುರುಷನೊಬ್ಬ ಒಕ್ಕರಿಸಿ...ನೆ! ಈತ ನೆಟ್ಟಗೆ ಎಸ್‌ಎಸ್‌ಎಲ್‌ಸಿ ಪಾಸಾಗದಿ... ಎಸ್ ದರ್ಜೆಯ ಹುದ್ದೆಯನ್ನ ಯಾವ ಮುಜು...ದ್ದೆ, ಕಾನೂನಿನ ಭಯವೂ ಇಲ್ಲದೇ ನಿಭಾಯಿಸು... ಈತನ ಮೂಲ ಹೆಸರು ಪೊನ್ನ. 1974ರಲ್ಲಿ ...ಬದಲ್ಲಿ ಜವಾನನಾಗಿ ಕಸುಬು ಶುರು ಮಾಡಿದ ...1980ರಲ್ಲಿ ಹೆಲ್ತ್‌ಇನ್ಸ್‌ಪೆಕ್ಟರ್ ಆದ. ನಂತರ ... ನಗರಕ್ಕೆ ನಗರಸಭೆ ಆಯುಕ್ತನೂ ಆದ. ನಂತರ ...ಲಿಯೇಟು ತಿಂದು ಮಂಡ್ಯ ನಗರಸಭೆಯಲ್ಲಿ ... ಆಯುಕ್ತ ರಾಮಸ್ವಾಮಿಯ ನಿವೃತ್ತಿಯಿಂದ ... ಆಯುಕ್ತ ಹುದ್ದೆಗೆ ಬಂದು ವಕ್ಕರಿಸಿದ. ಅಸಲಿಗೆ ...ಎಸ್‌ಎಲ್‌ಸಿಯಲ್ಲೂ ಪಾಸಾಗಿಲ್ಲ!

...ಮನಾಡಿನ ಪೊನ್ನಾಚಿ ಗ್ರಾಮ 1970ರ ದಶಕದಲ್ಲಿ ...ಗಾಲಕ್ಕೆ ತುತ್ತಾಗಿತ್ತು, ಜನರು ಹಿಂಡುಹಿಂಡಾಗಿ ...ವಲಸೆ ಹೋಗಲಾರಂಭಿಸಿದರು. ಇದರಲ್ಲಿ ಸ್ವೀಪರ್ ...ಸಣ್ಣಕರೂಪಯ್ಯ ಮತ್ತು ರಂಗಮ್ಮರ ಕುಟುಂಬವೂ ...ಲ್ಲಿಯ ಜನರು ದೇಶದ ವಿವಿಧೆಡೆ ವಲಸೆ ಹೋದರೆ ...ರೂಪಯ್ಯ ಕುಟುಂಬ ಮಲೈಮಹದೇಶ್ವರ ಬೆಟ್ಟಕ್ಕೆ ಬಂದಿತು. ಅಷ್ಟರಲ್ಲಾಗಲೇ ಈ ದಂಪತಿಗಳಿಗೆ ಪೊನ್ನ ಎಂಬ ಮಗನಿದ್ದ. ನಂತರ ಮಲೈಮಹದೇಶ್ವರ ಬೆಟ್ಟದಲ್ಲೂ ಹೊಟ್ಟೆ ಹೊರೆಯಲು ದಾರಿ ಕಾಣದಾಗಿ ಆ ಕುಟುಂಬ ಕೊಳ್ಳೇಗಾಲಕ್ಕೆ ವಲಸೆ ಹೋಯಿತು.



ಕೊಳ್ಳೇಗಾಲದಲ್ಲಿ ಆಗ ಟೌನ್ ಮುನ್ಸಿಪಲ್ ಇತ್ತು. ಕರುಪಯ್ಯನ ಕಷ್ಟವನ್ನ ನೋಡಿದ ಕೊಳ್ಳೇಗಾಲದ ಕೆಲ ಹಿರಿಯರು ಈತನ ಮಗ ಪೊನ್ನನನ್ನು 1977ರ ಅಕ್ಟೋಬರ್ 7ರಂದು ಜವಾನ ಹುದ್ದೆಗೆ ನೇಮಿಸಿದರು. ಪೊನ್ನ ಅಕ್ಟ್ರಾಯ್ ಪ್ಯೂನ್ ಆಗಿ ನೇಮಕಗೊಂಡ ನಂತರ ಮಾಡಬಾರದ ಕೆಲಸಗಳನ್ನೆಲ್ಲ ಮಾಡಿದ. 1980ರಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾಗಿದ್ದ, ಆದರೆ ಆಗ ಗುತ್ತಿಗೆ ನೌಕರರಾಗಿ ಕೆಲಸ ಮಾಡುತ್ತಿದ್ದವರನ್ನು ಗ್ರೂಪ್ ಡಿ ಹುದ್ದೆಗೆ ಕಾಯಂ ಮಾಡಲು ಮೈಸೂರಿನ ಜಿಲ್ಲಾಧಿಕಾರಿಗಳು ಸರ್ಕಾರಿ ಆದೇಶ ಜಾರಿಗೊಳಿಸಿದರು. ಆಗ ಎಲ್ಲಾ ಗುತ್ತಿಗೆ ನೌಕರರಿಗೂ ನೋಟೀಸ್ ಜಾರಿಮಾಡಲಾಗಿತ್ತು, ಆಗಲೇ ಈ ಪೊನ್ನನ ಫೋರ್ಜರಿ ಪವಾಡದ ಪುರಾಣ ಶುರುವಾಗಿದ್ದು.

ಅಷ್ಟು ವರ್ಷಗಳ ಕಾಲ ಪೊನ್ನ ಬಿನ್ ಕರುಪಯ್ಯ ಹೆಸರಿನಲ್ಲಿ ಕೆಲಸಗಿಟ್ಟಿಸಿಕೊಂಡಿದ್ದವ ಆಗ ಪ್ರಕಾಶ್ ಬಿನ್ ಶಂಕ್ರಪ್ಪನಾದ! ಅದೇ ಹೆಸರಿನ ನೌಕರನೊಬ್ಬ ಆಗ ಅಕಾಲಿಕ ಮರಣ ಹೊಂದಿದ್ದರಿಂದ ಈತ ತಾನೇ ಪ್ರಕಾಶ ಎಂದು ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ ಕೆಲಸ ಗಿಟ್ಟಿಸಿಕೊಂಡಿದ್ದ ಎಂಬ ಆರೋಪಗಳಿವೆ.

ಆನಂತರ ಈತ ಕೊಳ್ಳೇಗಾಲದಲ್ಲಿ 1986ರ ಸೆ.9ರಂದು ಎಸ್.ಡಿ.ಎ, 1988ರ ಡಿಸೆಂಬರ್‌ನಲ್ಲಿ ಬಿಲ್ ಕಲೆಕ್ಟರ್, 1991ರ ಸೆ.8ರಂದು ಜೂ. ಹೆಲ್ತ್ ಇನ್ಸ್‌ಪೆಕ್ಟರ್, ನಂತರ ಚಾಮರಾಜನಗರದಲ್ಲಿ 1994ರ ಜು. 14ರಂದು ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ನಂತರ ಮತ್ತೆ ಕೊಳ್ಳೇಗಾಲದ ಟಿಎಂಸಿಯಲ್ಲಿ 2004ರ ನ.4ರಂದು ಮುನ್ಸಿಪಲ್ ಚೀಫ್ ಆಫೀಸರ್ ಆಗಿ ಮುಂದುವರೆದ. ನಂತರ ಗುಂಡ್ಲುಪೇಟೆ, ಕನಕಪುರ ಮತ್ತು ಶ್ರೀರಂಗಪಟ್ಟಣಗಳಲ್ಲಿಯೂ ಇದೇ ಹುದ್ದೆಯಲ್ಲಿ ಯಾವ ಅಡೆತಡೆಗಳೂ ಇಲ್ಲದೆ ಮುಂದುವರೆದ. 2006ರ ಡಿ.30ರಂದು ಚಾಮರಾಜನಗರ ನಗರಸಭೆಗೆ ಪೊನ್ನ ಅಲಿಯಾಸ್ ಪ್ರಕಾಶ್ ಸಾಕ್ಷಾತ್ ಕಮಿಷನರ್ ಆದ. ಇಂಥ ಪನೀಗ ಮಂಡ್ಯ ನಗರಸಭೆಯ ಹಾಲಿ ಆಯುಕ್ತನಾಗಿ ಮೆರೆಯುತ್ತಿದ್ದಾನೆ.

ಕಮಿಷನರ್ ಪ್ರಕಾಶ್‌ನ ವೃತ್ತಾಂತವನ್ನು ಕೆದಕುತ್ತಾ ಹೋದರೆ ಎಲ್ಲರೂ ಬೆಚ್ಚಿಬೀಳುವ ಬಹಳಷ್ಟು ಸಂಗತಿಗಳಿವೆ. ಅವುಗಳಲ್ಲಿ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ. ಪೊನ್ನ ತನ್ನ ಜವಾನ ಹುದ್ದೆಯನ್ನು ಕಾಯಂಗೊಳಿಸಿಕೊಳ್ಳುವ ಧಾವಂತದಲ್ಲಿ ಪ್ರಕಾಶ್ ಹೆಸರಿನ ಅಂಕಪಟ್ಟಿಯನ್ನ ಕದ್ದು ಅಂಕಪಟ್ಟಿಯಲ್ಲಿದ್ದ ಪ್ರಕಾಶ್ ಹೆಸರು ತನ್ನದೆಂದು ಕೊಳ್ಳೇಗಾಲದ ಮುನ್ಸಿಫ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪೊನ್ನ ಬಿನ್ ಸಣ್ಣ ಕರುಪಯ್ಯನನ್ನು, ಪ್ರಕಾಶ್ ಬಿನ್ ಶಂಕ್ರಪ್ಪ ಎಂದು ತನ್ನ ಹೆಸರು ಮತ್ತು ತಂದೆ ಹೆಸರುಗಳನ್ನು ಒಟ್ಟೊಟ್ಟಿಗೆ ಬದಲಾಯಿಸಿಕೊಂಡು, ಸರ್ಕಾರಕ್ಕೆ ವಂಚಿಸಿ ಹುದ್ದೆಗಿಟ್ಟಿಸಿಕೊಂಡಿದ್ದಾನೆ. ಅಸಲಿಗೆ ಈ ಪೊನ್ನನದ್ದು ಎಸ್‌ಎಸ್‌ಎಲ್‌ಸಿಯೇ ಪಾಸಾಗಿಲ್ಲ! ಈ ಬಗ್ಗೆ ಸ್ವತಃ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಗಳಲ್ಲಿ ಮಾಹಿತಿ ಹಕ್ಕಿನಡಿ ಮಾಹಿತಿ ಕೇಳಿದರೆ ಮಾಹಿತಿಗಳಿಲ್ಲ ಎಂಬ ಉತ್ತರ! ಅಸಲಿಗೆ ಈತ ಎಸ್ಸೆಸ್ಎಲ್ಸಿ ಪಾಸಾಗದಿದ್ದರೂ ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗವರ್ನಮೆಂಟ್, ಬಾಂಬೆ, ಇಲ್ಲಿಂದ ಸ್ಯಾನಿಟರಿ ಇನ್ಸ್‌ಪೆಕ್ಟರ್ಸ್ ಡಿಪ್ಲೋಮೋವನ್ನು ಮಾಡಿಕೊಂಡಿದ್ದಾದರೂ ಹೇಗೆ? ಜೊತೆಗೆ ಈತನ ಜಾತಿ ಯಾವುದೆಂಬುದು ಸರ್ವಿಸ್ ರೆಕಾರ್ಡ್‌ನಲ್ಲಿ ನಮೂದಾಗೇ ಇಲ್ಲ, ಆದರೂ ಈತನಿಗೆ ಹಲವಾರು ಬಡ್ತಿಗಳು ಸಿಕ್ಕಿದ್ದಾದರೂ ಹೇಗೆ? ನಗರಸಭೆಗೆ ಕಮಿಷನರ್ ಆಗಲು ಮಾಡಿದ ಪವಾಡವಾದರೂ ಏನು ಎಂಬ ಹಲವಾರು ಪ್ರಶ್ನೆಗಳಿಗೆ ಉನ್ನತ ಅಧಿಕಾರಿಗಳ ಮಟ್ಟದಲ್ಲಿ ಸಮಗ್ರ ತನಿಖೆಯಾಗಿ ಉತ್ತರ ಹೊರಬರಬೇಕಿದೆ.



ಪ್ರಕಾಶ್

ಇಷ್ಟೇ ಅಲ್ಲದೆ, ಪೊನ್ನ ಅಲಿಯಾಸ್ ಪ್ರಕಾಶ್ ಹೋದಹೋದ ಕಡೆಗಳಲ್ಲೆಲ್ಲಾ ಸರ್ಕಾರಿ ಕೆಲಸ ಮಾಡಿದ್ದಕ್ಕಿಂತ ಹೆಚ್ಚು ಗೋಲಾಮಾಲ್ ಪುರಾಣಕ್ಕೆ ಕುಖ್ಯಾತನಾಗಿದ್ದಾನೆ. ಇದಕ್ಕಾಗಿಯೇ ಈ ಫೋರ್ಜರಿ ಪವಾಡಪುರುಷ ಪ್ರಕಾಶ್ ಹಲವಾರು ಬಾರಿ ಅಮಾನತ್ತಾಗಿದ್ದಾನೆ. ದುರಂತ ಎಂದರೆ ಇಂತಹ ಪ್ರಕಾಶ್ ಹಲವಾರು ಬಾರಿ ಅಮಾನತ್ತಾಗಿದ್ದರೂ ಹಿರಿಯ ಅಧಿಕಾರಿಗಳು ಈತನ ಮೂಲವನ್ನ ಕೆದಕಿ ವಜಾ ಮಾಡುವ ಗೋಜಿಗೆ ಹೋಗದಿರುವುದು!

ಪ್ರಕಾಶ್ ಕನಕಪುರ ಮತ್ತು ಶ್ರೀರಂಗಪಟ್ಟಣಗಳನ್ನು ಗಬ್ಬೆಬ್ಬಿಸಿದ್ದಾನೆ. ಶ್ರೀರಂಗಪಟ್ಟಣದಲ್ಲಿ ತ್ಯಾಜ್ಯ ವಿಲೇವಾರಿಗಾಗಿ ಅರಕೆರೆ ಹೋಬಳಿ ಅಲ್ಲಪಟ್ಟಣದಲ್ಲಿ, ತನ್ನ ನಾದಿನಿ ಸುಂದರಮ್ಮನ ಹೆಸರಿನಲ್ಲಿ ಎಕರೆಗಟ್ಟಲೇ ಆಸ್ತಿ ಮಾಡಿಟ್ಟುಕೊಂಡಿದ್ದಾನೆ. ಚಾಮರಾಜನಗರದಲ್ಲಿ ಕಮಿಷನರ್ ಆಗಿದ್ದ ವೇಳೆಯಲ್ಲಿ ಘನತ್ಯಾಜ್ಯ ಘಟಕದ ಕೋಟ್ಯಂತರ ರೂ.ಗಳನ್ನು ತಿಂದಿದ್ದಾನೆ. ಇನ್ನು ಪಿಡಬ್ಲ್ಯೂಡಿ ಇಲಾಖೆಯ ಗುತ್ತಿಗೆದಾರನಾಗಿರುವ ವಿನಯ್ ಕುಮಾರ್ ಎಂಬುವ ತನ್ನ ಪುತ್ರನಿಗೆ ಅನುಕೂಲ ಮಾಡಿಕೊಡಲು ಎರಡೆರಡು ಬಾರಿ ಟೆಂಡರ್ ಕರೆದು ಉಮೇಶ್ ಕುಮಾರ ಹೆಸರಿಗೆ ಟೆಂಡರ್ ನೀಡಿ ಲಕ್ಷಾಂತರ ರೂ.ಗಳನ್ನ ಅಪ್ಪ ಮಗ ಜಂಟೀ ಲೂಟಿ ಮಾಡಿದ್ದಾರೆ. ಇದು ನಗರಸಭೆಯ ಸದಸ್ಯರಿಗೆ ಗೊತ್ತಾಗಿ ಚಪ್ಪಲಿಯಲ್ಲಿ ಹೊಡೆದು ಅಟ್ಟಿದ್ದಾರೆ. ಇಂತಹ ಕುಖ್ಯಾತಿ ಹೊಂದಿರುವ ಕಮಿಷನರ್ ಪ್ರಕಾಶ್‌ನನ್ನು ಮಂಡ್ಯದ ಲಜ್ಜೆಗೆಟ್ಟ ಲಿಂಗವಂತ ಬಿಜೆಪಿ ಪುಢಾರಿಯೊಬ್ಬ ಲಕ್ಷಗಟ್ಟಲೆ ಅಮೇಧ್ಯ ತಿಂದು ಮಂಡ್ಯ ನಗರ ಸಭೆಯ ಆಯುಕ್ತನನ್ನಾಗಿ ಮಾಡಿದ್ದಾನೆ. ಪ್ರಕಾಶನ ಫೋರ್ಜರಿ ಪವಾಡದ ಪುರಾಣವನ್ನು ಪ್ರಪ್ರಥಮವಾಗಿ ಕೆದುಕಿದ್ದು ಚಾಮರಾಜ ನಗರದ ಎನ್‌ಜಿಓ ಪರಮೇಶ್ ಎಂಬಾತ. ಈತ ಇಷ್ಟಕ್ಕೆ ಸುಮ್ಮನಿರದೆ 2009ರಲ್ಲಿ ಲೋಕಾಯುಕ್ತದಲ್ಲೂ ಮತ್ತು ರಾಜ್ಯ ಹೈಕೋರ್ಟ್‌ನಲ್ಲೂ ದಾವೇ ಹೂಡಿದ್ದ ಎರಡರಲ್ಲೂ ತೀರ್ಪು ಹೊರಬೀಳುವ ಹಂತದಲ್ಲಿದೆ. ಆದರೆ ಪ್ರಕಾಶ್‌ನ ಮೇಲೆ ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳು ಎಂಜಲುಪಡೆದು ತೆಪ್ಪಗಾಗಿದ್ದಾರೆ ಎನ್ನುವುದು ಪರಮೇಶರ ಅಳಲು.

ಪ್ರಕಾಶ್ ವಿವಿಧ ಹುದ್ದೆಗಳನ್ನ ಅನುಭವಿಸಲು ಹಲವಾರು ಪ್ರಾಮಾಣಿಕ ಅಧಿಕಾರಿಗಳಿಗೆ ಕಿರುಕುಳ ನೀಡಿ ಅಕ್ರಮವಾಗಿ ಒಂದರಮೇಲೊಂದರಂತೆ ಬಡ್ತಿಗಳನ್ನು ಪಡೆದಿದ್ದಾನೆ. ಈತ ಹೋದೋದ ಕಡೆಗಳಲ್ಲೆಲ್ಲಾ ಅಕ್ರಮವಾಗಿ ಆಸ್ತಿಗಳನ್ನು ಮಾಡಿದ್ದಾನೆ. ಮೈಸೂರು, ಬೆಂಗಳೂರುಗಳಲ್ಲಿ ಕೋಟಿಗಟ್ಟಲೆ ಬೆಲೆ ಬಾಳುವ ಆಸ್ತಿಗಳನ್ನ ಮಾಡಿಟ್ಟಿದ್ದಾನೆನ್ನುವ ಆಪಾದನೆಗಳೂ ಕೇಳಿಬರುತ್ತಿವೆ. ಈತನ ಫೋರ್ಜರಿ ಪುರಾಣ ಸೇರಿದಂತೆ ಸಮಗ್ರ ತನಿಖೆಯಾಗಿ ತಕ್ಕ ಶಿಕ್ಷೆಯಾಗಬೇಕಿದೆ. ಇದು ಪ್ರಾಮಾಣಿಕ ಎನಿಸಿಕೊಂಡಿರುವ ಸಚಿವ ಸುರೇಶ್ ಕುಮಾರ್ ಕೈಯಲ್ಲಿ ಸಾಧ್ಯವೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ.


• ಲಕ್ಷ್ಮಣ್ ಚೀರನಹಳ್ಳಿ

ಅಡಿಗರ ಕೋಮುವಾದಿ ಕವನ

ಭಾಗ 1

• ಡಾ. ಎಂ.ಡಿ. ಒಕ್ಕುಂದ

ಎಂ.ಗೋಪಾಲಕೃಷ್ಣ ಅಡಿಗರು ಕನ್ನಡದ ಖ್ಯಾತ ಕವಿಗಳಲ್ಲಿ ಪ್ರಮುಖ... ಆದರೆ ಅವರು ಬರೆದ 'ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ' ... ಕವನ ಹೇಗೆ ಬಲಪಂಥೀಯ ಕೋಮುವಾದಿ ನಿಲುವನ್ನು ಹೊಂದಿ... ಎಂದು ಡಾ. ಎಂ.ಡಿ. ಒಕ್ಕುಂದ ಅವರು ಬರೆದಿರುವ ಲೇಖನದ ಮೊ... ಭಾಗ ಇಲ್ಲಿದೆ. ಈ ಲೇಖನಮಾಲೆ ಕುರಿತು ಚರ್ಚೆ ನಡೆಸಲು 'ಲಂಕೇ... ವೇದಿಕೆಯನ್ನು ಒದಗಿಸಿದೆ.



ಎಂ. ಗೋಪಾಲಕೃಷ್ಣ ಅಡಿಗ

ಬಲಪಂಥೀಯ ಕೋಮುವಾದಿ ನೆಲೆ

ಕನ್ನಡದ ಬಹುಪಾಲು ಲೇಖಕರು ಕೋಮುವಾದಿ ಚಿಂತನೆಗಳನ್ನು ತಾತ್ವಿಕವಾಗಿ ವಿರೋಧಿಸಿದ್ದಾರೆ. ಇಲ್ಲವೇ ಅದನ್ನು ನಿರ್ಲಕ್ಷಿಸಿದ್ದಾರೆ. ಆ ಕುರಿತು ಮೌನವಹಿಸಿದವರಿದ್ದಾರೆ. ಮುಕ್ತವಾಗಿ ಅದನ್ನು ಬೆಂಬಲಿಸದೇ ಕೋಮುವಾದಿ ರಾಜಕೀಯ ಪಕ್ಷಗಳಿಗೆ ಚುನಾವಣಾ ಪ್ರಚಾರದ ಹಾಡುಗಳನ್ನು ಗುಪ್ತವಾಗಿ ಬರೆದುಕೊಟ್ಟವರಿದ್ದಾರೆ. ಬೆರಳೆಣಿಕೆಯ ಸಂಶೋಧಕರು ಕಾದಂಬರಿಕಾರರು ಬಲಪಂಥೀಯ ಕೋಮುವಾದದ ಪ್ರತಿಪಾದನೆಗೆ ತಮ್ಮ ಸಾಹಿತ್ಯಕ ಮಾಧ್ಯಮವನ್ನು ಸಮರ್ಥವಾಗಿ ಬಳಸುತ್ತಿದ್ದಾರೆ. ಎಂ. ಗೋಪಾಲಕೃಷ್ಣ ಅಡಿಗರಂತ ಏಕೈಕ ಕವಿ ಕೋಮುವಾದಿ ಸಿದ್ಧಾಂತವನ್ನು ಮುಕ್ತವಾಗಿ ಬೆಂಬಲಿಸಿ ಬರೆದಂತಿದೆ. 1925ರಿಂದ ಆರ್.ಎಸ್.ಎಸ್. ಸ್ಥಾಪನೆಯಿಂದ ಹಿಡಿದು ಇಂದಿನ ತನಕ ಭಾರತದ ಬಲಪಂಥೀಯ ಕೋಮುವಾದಿ ಸಂಘಟನೆಗಳು ಕೆಲವು ವಿಚಾರಧಾರೆಗಳನ್ನು ವ್ಯವಸ್ಥಿತವಾಗಿ ಸೃಷ್ಟಿಮಾಡುತ್ತ ಬಂದಿವೆ. ಭಾರತದಲ್ಲಿರುವ ಮುಸ್ಲಿಮರು, ಕ್ರಿಶ್ಚಿಯನ್ನರಂತ ಭಿನ್ನ ಧರ್ಮೀಯರನ್ನು ಕಲ್ಪಿತ ಶತ್ರುಗಳೆಂದು ಭಾವಿಸಿ ಅವರನ್ನು ದೇಶ ಬಿಟ್ಟು ಓಡಿಸಿ ಹಿಂದೂಗಳು ಮಾತ್ರ ಇರುವ ಸಾಂಸ್ಕೃತಿಕ ರಾಷ್ಟ್ರೀಯತೆಯ ಭಾರತವನ್ನು ನಿರ್ಮಿಸಲು ಬಯಸುತ್ತವೆ, ಹಿಂಸೆಯನ್ನು ಪ್ರಚೋದಿಸುತ್ತವೆ. ಹೊರನೋಟಕ್ಕೆ ಮುಸ್ಲಿಂ ವಿರೋಧಿಗಳಂತೆ ಕಂಡರೂ ಅದು ಕೇವಲ ಒಂದು ತಂತ್ರವಾಗಿ ಆಳದಲ್ಲಿ ಭಾರತದ ಕೆಳವರ್ಗಗಳು, ದಲಿತರು ಹಾಗೂ ಮಹಿಳೆಯರ ಸಬಲೀಕರಣ ಮತ್ತು ಸಮಾನತೆಯ ವಿರೋಧಿಗಳೂ ಆಗಿವೆ. ಪುರೋಹಿತಶಾಹಿ ವರ್ಗದ ಪ್ರಭುತ್ವವನ್ನು, ಊಳಿಗಮಾನ್ಯ ವ್ಯವಸ್ಥೆಯನ್ನು ಗಟ್ಟಿಗೊಳಿಸಿ ಅದರ ಚೌಕಟ್ಟಿನಲ್ಲಿಯೇ ಭಾರತದ ಕೆಳವರ್ಗದ ಸಮುದಾಯಗಳನ್ನು ನಿಯಂತ್ರಿಸುವುದು ಈ ಸಿದ್ಧಾಂತದ ಮುಖ್ಯ ತಿರುಳು.

ಮತೀಯ ರಾಷ್ಟ್ರೀಯವಾದಿ ನೆಲೆಗೂ, ಕೋಮುವಾದಿ ನೆಲೆಗೂ ವ್ಯತ್ಯಾಸವಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದ ಸಂದರ್ಭದಲ್ಲಿ ರಾಷ್ಟ್ರೀಯತೆಯ ಭರದಲ್ಲಿ, ಅಂದಿನ ಚಾರಿತ್ರಿಕ ಒತ್ತಡದಲ್ಲಿ ಕೆಲವು ತಪ್ಪು ಗ್ರಹಿಕೆಗಳ ಮೂಲಕ ಮತೀಯ ರಾಷ್ಟ್ರೀಯವಾದಿ ನೆಲೆ ಸಿದ್ಧವಾಗಿತ್ತು, ಬ್ರಿಟಿಷ್ ಚರಿತ್ರೆಯ ಓದು, ಪಾಶ್ಚಾತ್ಯವಾದಿ ವಿದ್ವಾಂಸರ ಮಧ್ಯಯುಗೀನ ಚರಿತ್ರೆಯ ಸಂಕಥನ, ಗಾಂಧಿ ನೇತೃತ್ವದ ರಾಷ್ಟ್ರೀಯ ಕಾಂಗ್ರೆಸ್ಸಿನ ಹೋರಾಟದಲ್ಲಿಯೇ ಸುಳಿದ ಕೆಲವು ಮತೀಯ ಚಿಂತನಾಕ್ರಮಗಳ ಪರಿಣಾಮದಿಂದ ಮತೀಯ ರಾಷ್ಟ್ರೀಯವಾದಿ ನೆಲೆ ರೂಪುಗೊಂಡಿತ್ತು, ಕನ್ನಡದಲ್ಲಿ ಸಮಾನತೆ ಸಾಮರಸ್ಯಗಳನ್ನು ಪ್ರತಿಪಾದನೆ ಮಾಡಿದ ಮಹತ್ವದ ಕವಿಗಳ ಕಾವ್ಯದ ಒಂದು ಸಣ್ಣತೊರೆಯಾಗಿ ರಾಷ್ಟ್ರೀಯತೆ ಕಂಡುಬರುತ್ತದೆ. ಆದರೆ ಕೋಮುವಾದಿ ನೆಲೆ ಒಂದು ವ್ಯವಸ್ಥಿತ ಸಿದ್ಧಾಂತ. ಹಿಂದೂ ಕೋಮುವಾದಿ ಸಂಘಟನೆಗಳು ರೂಪಿಸಿದ ತಾತ್ವಿಕತೆಯನ್ನು ಪ್ರಣಾಳಿಕೆಯೋಪಾದಿಯಲ್ಲಿ ಅದು ಮಂಡಿಸುತ್ತದೆ. ಮತೀಯ ರಾಷ್ಟ್ರೀಯತೆ ನೆಲೆಯ ಕವಿತೆ ಬರೆದ ಮೇಲೂ ಕ... ಶ್ರೇಷ್ಠ ಕಾವ್ಯರಚಿಸಲು ಸಾಧ್ಯವಾಯಿತು. ಆದರೆ ಕೋ... ನೆಲೆಗೆ ತಲುಪಿದ ಅಡಿಗರಿಗೆ ಅದು ಸಾಧ್ಯವಾಗಲಿಲ್ಲ...

ಎಂ.ಗೋಪಾಲಕೃಷ್ಣ ಅಡಿಗರ 'ಮತ್ತೆ ಮೊ... ಪಾಂಚಜನ್ಯ' ಕನ್ನಡದಲ್ಲಿ ಬಲಪಂಥೀಯ ಕೋಮುವ... ಅದರಲ್ಲಿ ಉಗ್ರ ತಾತ್ವಿಕ ಚೌಕಟ್ಟುಗಳು ಹಾಗೂ ಹಿ... ಕಾರ್ಯಾಚರಣೆಯ ವಿಧಾನಗಳೊಂದಿಗೆ ಪ್ರತಿಪಾ... ಕವಿತೆಯಾಗಿದೆ. ಸಾವರ್ಕರ್ ಗೋಳ್ವಾಳ್ಕರ್‌ರಿಂದ ... ಲಾಲ್‌ಕೃಷ್ಣ ಆಡ್ವಾನಿ, ಅಟಲ್ ಬಿಹಾರಿ ವಾಜಪೇಯಿ... ಬಲಪಂಥೀಯ ಕೋಮುವಾದಿ ಸಂಘಟನೆಗಳ ... ರೂಪಿಸಿದ, ಚಾರಿತ್ರಿಕವಾಗಿ ರೂಪಾಂತರಿಸಿದ ... ವಿನ್ಯಾಸಗಳನ್ನೂ ರಾಜಕೀಯ ತಾಂತ್ರಿಕತೆಗಳನ್ನೂ ... ಚೌಕಟ್ಟಿಗೆ ತಂದು ಪ್ರಣಾಳಿಕೆಯೋಪಾದಿಯಲ್ಲಿ ರಚಿ... ಕನ್ನಡ ಕಾವ್ಯಲೋಕಕ್ಕೆ ಅಸ್ಪೃಶ್ಯವಾಗಿ ಉಳಿದಿದ್ದ, ... ಬಾಧ್ಯಸ್ಥವಾಗಿದ್ದ, ಮುಕ್ತವಾಗಿ ಅಭಿವ್ಯಕ್ತಿಸಲು ... ಸಹಮತವಿದ್ದವರೂ) ಮುಜುಗರ ಹಾಗೂ ಅಪ... ಸಂಗತಿಯಾಗಿದ್ದ ಹಿಂಸಾತ್ಮಕ ಕೋಮವಾ... ಚಿಂತನಾಕ್ರಮವನ್ನು ಅಡಿಗರು ಕಾವ್ಯದಂಥ ಜೀ... ಪ್ರಕಾರದಲ್ಲಿ ಅಭಿವ್ಯಕ್ತಿಸಿ ಸಾಹಿತ್ಯಕ ನ್ಯಾಯಬದ್ಧ... ಒದಗಿಸಿದರು. ಇದು ಅಡಿಗರಿಗೆ ಮಾತ್ರವಲ್ಲ ಕನ್ನಡ... ಒಂದು ಕಳಂಕದ ಸಂಗತಿಯಾಗಿದೆ. ಜಾಗತೀಕರಣದ... ಕೋಮುವಾದಿ ರಾಜಕಾರಣ ತೀವ್ರ ಸ್ವರೂಪವನ್ನು... ಮೇಲೆ ಕನ್ನಡ ಸಾಂಸ್ಕೃತಿಕ ಲೋಕದ ಕೆಲವು ... ಹೆಸರುಗಳು ಕೋಮುವಾದಿ ರಾಜಕಾರಣದ... ಮುಕ್ತವಾಗಿ ಗುರುತಿಸಿಕೊಳ್ಳುವ ಧೈರ್ಯವನ್ನು ತೋ... ಹಿನ್ನೆಲೆಯಲ್ಲಿ ಅಡಿಗರಂತ ಮಹತ್ವದ ಕವಿಯ ರಾ... ಪ್ರತಿಗಾಮಿ ನಿಲುವು, ಪ್ರೇರಣೆ ನೀಡಿರುವ ಸಾಧ್ಯತೆ ... ಕಾವ್ಯಕ್ಕೆ ವಾಸ್ತವದ ರಕ್ತದಾನ ಮಾಡುವ ಹಾಗೂ...

ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ

• ಎಂ. ಗೋಪಾಲಕೃಷ್ಣ ಅಡಿಗ

ಏಳೋಣ, ಎದ್ದು ನಿಲ್ಲೋಣ ಎದೆ ಸೆಟೆದು,
ದಧೀಚಿ ಕಶೇರುವಿನಂತೆ ದೃಢ, ರಾಮಬಾಣದಂತೆ ಅಸಂದಿಗ್ಧ
ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ;
ಸಂಕಲ್ಪಕ್ಕೆ ಸಂಕಲ್ಪ, ಹೆಜ್ಜೆಗೆ ಹೆಜ್ಜೆ ಹೆಗಲಿಗೆ ಹೆಗಲು
ಮುಂಗಾರಿನಲ್ಲಿ ಧುಮ್ಮಿಕ್ಕಿ ದುಡುಕುವ ಹೊನಲು

ಹಿಂದುತ್ವದ ಮಹಾಸಿಂಧು ಭೋರ್ಗರೆದು ಬೊಬ್ಬಿರಿದು ಗಡಿಬಿಡಿ ತೊಡೆದು
ನುಗ್ಗಲೆಲ್ಲಾ ಕಡೆಗು ನಾಡಿನುದ್ದ;
ಆಗುವಂತೆಲ್ಲವೂ ಮತ್ತೆ ಪರಿಶುದ್ಧ;
ದುರ್ಮತ ಮತಾಂಧತೆಯ ಮರಳ ದಿನ್ನೆ, ದಿಬ್ಬ, ಚಾಕು, ಚೈನು, ಕೈಬಾಂಬುಗಳ
ನಡುಗಡ್ಡೆಗಳು ಸೆಗೆದು ಬೀಳಲಿ ಸಮೂಲ;
ತಾತ್ಕಾಲಿಕದ ಕೋಟೆ, ಬುರುಜು, ಗಲ್ಲಿ ನೊರಜು ಬುರುಜುಗಳೆಲ್ಲ
ತೊಳೆದು ಹೋಗಲಿ ಇಲ್ಲಿ ಒಂದೇ ಸಲ, ಸನಾತನ ನೀಲ
ಆಕಾಶ, ಶ್ಯಾಮಲ ನೆಲ, ಶತಕೋಟಿ ತಾರೆ,
ಭರತ ವರ್ಷದ ಮೇಲೆ ಸ್ವರ್ಗಂಗೆ ಧಾರೆ;
ಶುದ್ಧ ನಿರ್ಮಲ ಮಾನಸ ಸರೋವರದ ಮೇಲೆ
ಅಷ್ಟದಳ ಕಮಲದ ನಿರಾಳ;
ಪರಮ ಪುರುಷಾರ್ಥದ ಪರಾತ್ಪರದ ಹೊಸ ಬೆಳೆಗೆ ಹದ
ವಾದ ಹೊಲ ವಿಶಾಲ.
ಒಂದು ಸಾವಿರ ವರ್ಷಗಳ ಕಾಲ ತಗ್ಗಿ ಬಗ್ಗಿ ಸಲಾಮು
ಹೊಡೆದು ಜೀಜೀ ಎಂದು, ಎಸ್ಸೆಸ್ಸ್ ಎಂದು ಸಾರ್ ಸಾರ್ ಎಂದು
ಕಿವಿಯಿಂದ ಕಿವಿವರೆಗೆ ದೇಶಾವರಿಯ ಕೆತ್ತಿಸಿಕೊಂಡು ನಿಂತದ್ದು,
ಬುಸ್‌ಬುಸ್ ಎನ್ನುವುದೂ ಮರೆತು ಹುತ್ತ ಕಟ್ಟಿಕೊಂಡು ಜಡವಾಗಿ
ಜೀವನ್ಮೃತತ್ವ ಸಾಧಿಸಿಕೊಂಡು ಮಲಗಿದ್ದು,
ಹಿಂದು ಎಂದರೆ ಹೇಡಿ ಎಂದೆನಿಸಿಕೊಂಡದ್ದು
ಸಹಿಷ್ಣುತೆಯ ಪ್ರತ್ಯಂಗಕ್ಕೂ ಜಖಂ ಆಗಿ
ಗುಣವೆ ಅವಗುಣವಾಗಿ, ಮಾನವೆ ಹರಾಜಾಗಿ
ತಿಲಾಂಜಲಿ ಕೊಟ್ಟು ಪುರುಷತ್ವಕ್ಕೆ
ಸಮತಾ ಹೊಡೆದು ಪಶುಬಲಕ್ಕೆ
ಶತಚ್ಛಿದ್ರರಾಗಿ ಅಭದ್ರರಾಗಿ, ದರಿದ್ರರಾಗಿ ಸ್ವಂತ ಮನೆಯಲ್ಲೆ ತೊತ್ತಾಗಿ
ನಮ್ಮಣ್ಣ ತಮ್ಮಂದಿರನ್ನೇ ಕೀಳು ಮಾಡಿ, ಸ್ವತಃ ಲೋಕಕ್ಕೆ ಕೀಳಾಗಿ
ಹೋಳು ಹೋಳಾಗಿ ಹೋಗಿದ್ದ ಮನೆ ಹಾಳು ಬುದ್ಧಿಗೆ ಈಗೋ
ಕೊನೆ ನಮಸ್ಕಾರ: ಪುನರ್ಜನ್ಮಕ್ಕೆ,
ಪುನರುತ್ಥಾನಕ್ಕೆ, ಪುನರ್ಧ್ಯಾನಕ್ಕೆ, ಯಾನಕ್ಕೆ, ಆರೋಹಣಕ್ಕೆ,
ಸುಮುಹೂರ್ತ, ಸಾವಧಾನ!

ಹಿಂದುಗಳನ್ನೊಂದಾಗಿ ಹಿಡಿದಿದ್ದ ಅದೃಶ್ಯ ಸರಪಣಿ ಕೊಂಡಿ
ಕೊಂಡಿ ಕಳಚಿವೆ, ಗೋಣಸು ಗೋಣಸು
ಕಿತ್ತು ಬಿದ್ದಿವೆ ಅಲ್ಲಿ ಇಲ್ಲಿ ಚೆಲ್ಲಾಪಿಲ್ಲಿ,
ಪ್ರತಿ ಹಿಂದೂ ಬದುಕು ಮತ್ತೊಮ್ಮೆ ಧಗಧಗ ಕುಲುಮೆ,
ಸೋದರತ್ವದ ಪ್ರೀತಿ ಪ್ರಜ್ವಲಿಸಲಿ;
ಹೃದಯ ಹೃದಯದ ರಕ್ತ ಕುದಿದು ಬೆಸೆಯಲಿ ಮತ್ತೆ
ಸರಪಣಿಯ ಗೋಣಸು ಗೋಣಸು.
ಬಾನೆತ್ತರಕ್ಕರಳಿ ಅಲಂಕೃತವಾಗಿ
ಪತ್ತಂಗುಲ
ಕನಸು ಸಂಕಲ್ಪಗಳ ನಮ್ಮ ಪುರುಷಾರ್ಥ
ಮೇರು
ಅತಿ ಪುರಾತನವಲ್ಲಿ ಅತ್ಯಾಧುನಿಕತ
ಫಲಿಸುತ್ತಿರುವ ನಮ್ಮ ಸಂಸ್ಕೃತಿಯ
ತೇರು.
ಕೈಹಚ್ಚೋಣ ಮಿಣಿಗೆ,
ಮನಮನಗಳೊಂದಾಗಿ,
ಎಳೆಯೋಣ ನಾಡಿನುದ್ದಗಲವೂ ನೇರ.
ನೇರ;
ನೆಲದ ಕಣಕಣ ರೇಣುರೇಣು
ಪರಿಶುದ್ಧವಾಗಿ
ಕೋಟೆ ಕೋಟೆಗಳೆಲ್ಲ ಮತ್ತೆ ವಶವಾಗಿ
ಶಿಖರ ಶಿಖರಗಳೆಲ್ಲ ಆಗಿ ಸ್ವಾಧೀನ,
ಪ್ರತಿ ಪಾಣಿಪೀಠಕ್ಕು ಅಷ್ಟಬಂಧ,
ರಾಕ್ಷಸ ಕುಲಕ್ಕೆ ಸರ್ವತ್ರ ದಿಗ್ಬಂಧ,
ಶಾಂತಿ ವಾಚನ ನಡೆಸಲವಕಾಶ ಅವಿನಾಶ
ಆಗುವ ಹಾಗೆ ಶೋಭಿಸಲಿ ಸಹವೀರ್ಯ ಸಹಕಾರ ಪ್ರಕಾಶ!

ಅಹಿಂಸೆ ಪರಮ, ಸರ್ವತ್ರ, ಅದು ಸಹಜ
ಜಗತ್ತನ್ನೆ ಸುಟ್ಟುರಿಸಬಲ್ಲ ಅಂತಸ್ತೇಜದತ್ಯುಗ್ರ ಶಾಂತ ಸ್ಥಿತಿಗೆ;
ಪ್ರತಿ ಜೀವದಲ್ಲು ಬಂಧುತ್ವ ಕಂಡು ಬದುಕುವ ಮಹಾ ಚೇತನಕ್ಕೆ,
ಕೊಲ್ಲುವುದು ಅಮಾನವೀಯ ಅಪರಾಧ;
ಕೊಲ್ಲಿಸಿಕೊಳ್ಳುವುದು ಪಾಪಾತಿರೇಕ; ಕೊಲ್ಲಬಲ್ಲವನು ಕೊಲ್ಲದೇ
ಕ್ಷಮಿಸಿ ಬಿಡುವುದು ಮಾನವತ್ವದ ಪರಾಕಾಷ್ಠೆ. ಹೇಡಿಯಾಗಿ
ತದಕಿಸಿಕೊಂಡು ಅಳುತ್ತ ಕೂರುವುದು ಮಹಾಪರಾಧ.
ಜಿಗಣೆ, ಚೇಳು, ಹೆಡೆಯೆತ್ತಿ ಬಡಿದ ಘಟಸರ್ಪ;
ಮಕ್ಕಳನ್ನೆತ್ತಿಕೊಂಡು ಹೋಗಿ ತಿನ್ನುವ ತೋಳ, ಮನೆಗೇ ಬೆಂಕಿ
ಹಚ್ಚಿ ಗಹಗಹಿಸಬಲ್ಲ ಮಾನವ ಪಿಶಾಚ; ಸೈಕಲ್ ಚೈನು,
ಸಲಾಕೆ, ಲಾಠಿ, ಕಠಾರಿ ಹಿಡಿದು ಕತ್ತಲಿನಲ್ಲಿ ವಿಷಾಕ್ತ
ಅಲಗು ತಾಗಿಸಿ ತಿವಿದು ಸಾಯಿಸುವ ನಿಶಾಚರ ನಿಕರ
ಇರುವತನಕ ಪ್ರತಿಹಿಂಸೆ ಅನಿವಾರ್ಯ, ಕೈ
ಎತ್ತಬಾರದು. ನಾವು ಕೈಯೆತ್ತಿದರೆ ಹತ್ತು
ದಿಕ್ಕುಗಳು ನಡುಗಲೇಬೇಕು. ಒಂದೇಟು
ಎರಡು.
ಎರಡಕ್ಕೆ ನಾಲ್ಕು, ನಾಲ್ಕಕ್ಕೆ ಹದಿನಾರು.
ಒಂದು ತಲೆ ಬಿದ್ದರೆ ಅದಕ್ಕೆ ನೂರೊಂದು
ಬೀಳಲೇಬೇಕು. ಮುಟ್ಟಿ ಮುಟ್ಟಿ ಬಂದ ಜಗಜ...
ಘಾತಕ್ಕ
ಕಂಡರೇ ತತ್ತರಿಸಬೇಕು ಆತ್ಮತಾಯಿ. ಹೂಂಕಾ...
ಕುಸಿಯಬೇಕು ತಳಾತಳಕ್ಕೆ;
ಅನ್ಯಾಯ, ಅಸತ್ಯ, ಅತ್ಯಾಚಾರ ಶೋಷಣೆಗಳ ...
ಸಾರೋಣ ನಿರಂತರವಾದ ಧರ್ಮಯುದ್ಧ!
ಕತ್ತಲಲ್ಲೂ ಮುಳುಗದಿರಲಿ ಹಿಂದೂ ಸೂರ್ಯ...
ನಡೆಸೋಣ ನವ್ಯ ಅವತಾರ ಕಾರ್ಯ!
ದಟ್ಟಡವಿಯಲ್ಲಲ್ಲಿ; ಇಕ್ಕಟ್ಟು ಬಿಕ್ಕಟ್ಟುಗಳ
ಪಟ್ಟಣಗಳ ಜನಾರಣ್ಯ
ದಲ್ಲಿಯೂ ಪ್ರತಿಮನೆ ಕೂಡ ಋಷ್ಯಾಶ್ರಮ.
ಮುಂದಕ್ಕೆ ಬಹು ಭಾಷಾ ಸರಸ್ವತಿಯ ಸದ್ಗ್ರಂಥಗಳ...
ಜ್ಞಾನ ವಿಜ್ಞಾನಗಳ ನಿಗಮಾಗಮ;
ಹಿಂದೆ ಕೈಚಾಚಿದರೆ ಬಾರು ಮಾಡಿಟ್ಟ ಬಂದೂಕು, ಲಾಠಿ, ಕಠಾರಿ.
ವಜ್ರಕಾಯದೊಳಕ್ಕೆ ಆದಿಶೇಷಸ್ನಾಯುಗಳ ಮಣಿತ.
ಕೈ ಕರಾಟೆಯ ಚಕ್ರಗತ್ತು, ಯೋಗಿಯ ನಿಯತ್ತು;
ಒಳಗೆ ಸಂಸ್ಥಾಪನಾನಿಷ್ಠ ಆದಿನಾರಾಯಣನ ಯೋಗ ನಿದ್ರೆಯ ಚಿತ್ತು;
ದುಷ್ಟಶಿಕ್ಷಣ, ಶಿಷ್ಟ ರಕ್ಷಣೆಯ ಮಸಲತ್ತು;
ಪರಮೇಶ್ವರಿಯ ಶಾಂತದುರ್ಗಾರೂಪದ ಮಹತ್ತು;
ಕೈ ಕಠಾರಿಗೆ ವಿವೇಕದ ಶರತ್ತು;
ಕಳಕಿತ್ತು ಶುಭವನ್ನೊಂದೆ ಬೆಳೆಯುವ ಶರಾರತ್ತು;
ನವ್ಯ ಹಿಂದುತ್ವದ ಅನ್ಯೂನ ಶಿಸ್ತು,
ವಿವೇಕವೀರನ ಮಹಾ ನಾರಾಯಣೀ ಸೇನೆ,
ಶಾಂತಿ ಭ್ರಾತೃತ್ವ ಸಮತ್ವದ ನಿಶಾನೆ.
ಆಗಬೇಕಿದೆ ಇಲ್ಲಿ ಶಾಂತಿ ಸ್ಥಾಪನೆ,
ದುಡಿಯೋಣ ಅದಕ್ಕಾಗಿ ಒಂದೆ ಸಮನೆ!

ಟುನ್ನು ತುಂಬುವ ಘೋಷಣೆಯನ್ನು ಮಾಡಿದ ಕವಿ ಣಿಯ ಕೋಮುವಾದದ ಹಿಂಸಾತ್ಮಕ ರಾಜಕಾರಣದ ರಕ್ತವನ್ನು ದಾನಮಾಡಿದರು. ಮತಾಂಧತೆಯ ನೆಯನ್ನು ತುಂಬಿದರು. ಅಡಿಗರ ಈ ಚಲನೆ ಕನ್ನಡದ ನಾಶೀಲ ಮನಸ್ಸುಗಳನ್ನು ಬೆಚ್ಚಿಬೀಳಿಸಿದೆ. ತೆಯ ಆಶಯದ ಬೇರುಗಳನ್ನೇ ಅಲುಗಾಡಿಸಿದೆ. ಶೇಖರ ಅವರು 'ಸುವರ್ಣಪುತ್ಥಳಿ' ಗೆ ಮುನ್ನುಡಿ ತ್ತ 'ಇಂಥ ಕವಿತೆಗಳನ್ನು ಅಡಿಗರು ಬರೆದರೇ?' ಸಂಕಟದಿಂದ ಉದ್ಗರಿಸಿದ್ದು ಅಡಿಗರ ಪ್ರತಿಗಾಮಿ ಯ ತಿರುವಿಗೆ ನೀಡಿದ ನೈತಿಕ ಪ್ರತಿಕ್ರಿಯೆಯಾಗಿದೆ.

ಮುಸ್ಲಿಮರ ರಾಕ್ಷಸೀಕರಣ

ಡಿಗರ ಶ್ರೇಷ್ಠಕವಿತೆಗಳು ಸದಾ ದ್ವಂದ್ವಕ್ಕೆ ಮುಖಿಯಾಗುತ್ತವೆ, ವೈರುಧ್ಯಗಳನ್ನು ಗ್ರಹಿಸುತ್ತವೆ. ನಲ್ಲಿಯೇ ಇರುವ ಮಾನವ-ದಾನವ ಪ್ರವೃತ್ತಿಗಳನ್ನು ಬದುರಾಗಿಸುತ್ತವೆ. ಆದರೆ ಅಡಿಗರು 'ಮತ್ತೆ ಪಾಂಚಜನ್ಯ' ಮತ್ತು ಈ ಮಾದರಿಯ ಕವಿತೆಯಲ್ಲಿ ೀವನಾಕ್ರಮವನ್ನು ಬಿಟ್ಟು ಕೊಡುತ್ತಾರೆ. ಹಿಂದೂ ಮುಸ್ಲಿಮರನ್ನು, ಹಿಂದೂ-ಮುಸ್ಲಿಂ ಧರ್ಮ, ಸಂಸ್ಕೃತಿ, ಯ ಹಾಗೂ ಅನನ್ಯತೆಗಳನ್ನು, ದೇವರು-ದಾನವ, -ಕೌರವ, ಮನುಷ್ಯ-ರಾಕ್ಷಸ, ಆಕ್ರಮಣಕಾರಿ-ಸಹಿಷ್ಣು ದುರ್ಗುಣ, ಹಿಂಸ್ರಕ-ಅಹಿಂಸ್ರಕ ಮುಂತಾದ ಕಪ್ಪು ಮಾದರಿಯಲ್ಲಿ ವರ್ಗೀಕರಿಸಲಾಗುತ್ತದೆ. ಗಳಿಗೆ ಅವರ ಸಾಂಸ್ಕೃತಿಕ ಅನನ್ಯತೆಗಳಿಗೆ ದೈವತ್ವದ , ನೈತಿಕತೆಯ ಹಾಗೂ ಶೋಷಿತ ನೆಲೆಯನ್ನು ಲೆ ಮುಸ್ಲಿಮರನ್ನು ರಾಕ್ಷಸೀಕರಿಸಲಾಗುತ್ತದೆ. ಮುಸ್ಲಿಂ ಯವನ್ನು 'ದುರ್ಮತದ ಮತಾಂಧತೆಯ ಮರುಳು ಾಕು, ಚೈನು, ಕೈಬಾಂಬುಗಳ ನಡುಗಡ್ಡೆ', 'ಜಗಣೆ, ಘಟಸರ್ಪ, ಪಿಶಾಚಿ, ನಿಶಾಚರ, ರಾಕ್ಷಸಕುಲ' ಗಿ ಚಿತ್ರಿಸಲಾಗಿದೆ. ಹಿಂದೂಗಳು ಪರಮ ಳು, ಭ್ರಾತೃತ್ವ ಬಂಧುತ್ವದ ಹರಿಕಾರರೂ, ಣಕ್ಕೆ ಹೋಳಾಗಿ ಹಿಂಸೆಗೆ ಗುರಿಯಾದ ಪಾಪದ ು ಎಂಬಂತೆ ಚಿತ್ರಿಸಲಾಗಿದೆ. ಈ ಬಗೆಯ ಾದ ಉದ್ದೇಶವೇ ಎರಡು ಸಮುದಾಯಗಳಲ್ಲಿ ದ್ವೇಷಿಸಿಕೊಳ್ಳಲು ಮತ್ತು ಸರ್ವನಾಶವಾಗಲು ನ್ನಾಗಿಸುವುದು ಹಾಗೂ ಇನ್ನೊಂದಕ್ಕೆ ದ್ವೇಷಿಸಲು, ು, ಸರ್ವನಾಶಮಾಡಲು ನೈತಿಕ ಹಕ್ಕನ್ನು ು. ಸಾವಿರಾರು ವರುಷಗಳಿಂದ ಎರಡು ಧರ್ಮಗಳ ುದಾಯ ಸಣ್ಣ ಪುಟ್ಟ ಅಸಮಾಧಾನಗಳ ಲ್ಲಿಯೂ ರೂಪಿಸಿಕೊಂಡು ಬಂದ ಸಾಮರಸ್ಯದ ಹಾಗೂ ಮೌಲ್ಯಗಳನ್ನು ಸರ್ವನಾಶಮಾಡುವುದರ ನೇ ರಾಜಕೀಯ ಅಧಿಕಾರ ಪಡೆಯುವ ಹಿಂದುತ್ವದ ಅಜೆಂಡಾಕ್ಕೆ ಇಲ್ಲಿ ಮಣೆ ಹಾಕಲಾಗಿದೆ.

ಧಾರ್ಮಿಕ ಹಿಂಸೆಗೆ ಕರೆ

ಕವಿತೆಯಲ್ಲಿ ಅಮಾನುಷವೂ ಬರ್ಬರವೂ ಆದ ಪ್ರೇರಣೆ ನೀಡಲಾಗಿದೆ. ರಾಕ್ಷಸರ ಸಂಹಾರಕ್ಕೆ ವನ್ನು ಸಿದ್ಧಗೊಳಿಸಲಾಗಿದೆ. ಮುಸ್ಲಿಮರನ್ನು ಮತ್ತು ಮೂಲೋತ್ಪಾಟನೆ ಮಾಡಲು ಅಥವಾ ಟ್ಟು ತೊಲಗಿಸಲು ಎಲ್ಲ ಬಗೆಯ ಹಿಂಸಾಕೃತ್ಯಗಳಿಗೂ ಳನ್ನು ಪ್ರೇರೇಪಿಸಲಾಗಿದೆ. ಕವಿತೆಯಲ್ಲಿ ಹಿಂಸೆ, ಪ್ರತಿ ಪರಿಕಲ್ಪನೆಗಳನ್ನು ತಂತ್ರವಾಗಿ ಬಳಸಲಾಗಿದೆ. ುಗೀನ ಕಾಲದಿಂದಲೂ ಮುಸ್ಲಿಮರು ಹಿಷ್ಣುಗಳಾದ ಹಿಂದೂಗಳ ಮೇಲೆ ಆಕ್ರಮಣ ಬಂದಿದ್ದಾರೆ. ಇಂದಿಗೂ ಆ ಹಿಂಸೆಯನ್ನು ುವರಿಸಿದ್ದಾರೆ. ಹೀಗಾಗಿ 'ಅಹಿಂಸೆ' ಇಂಥ ವಲ್ಲಿ ಹೇಡಿತನವಾಗುತ್ತದೆ. 'ಒಂದು ಹೆಣಕ್ಕೆ ನೂರು ಡುವುದೇ' ಆತ್ಯಂತಿಕ ಮಾರ್ಗವೆಂದು ಕವಿತೆ ಸುತ್ತದೆ.

ಮೂ ಫ್ಯಾಸಿಸ್ಟ್ ಸಾಮ್ರಾಜ್ಯದ ಕನಸು

ಸ್ಲಿಮರನ್ನು ಕೊಂದು ಇಲ್ಲವೇ ಓಡಿಸಿದ ಮೇಲೆ ಸಾಂಸ್ಕೃತಿಕ ಧಾರ್ಮಿಕ ಅನನ್ಯತೆಗಳನ್ನು ಅವರ ಗಳನ್ನು ಕೋಟೆ ಶಿಲ್ಪಗಳನ್ನು ನುಚ್ಚುನೂರು ಮಾಡಿ ಸ್ಥಾನದಲ್ಲಿ ಹಿಂದೂಗಳು ಹಿಂದುತ್ವದ ಸಂಕೇತಗಳು ಬೇಕೆಂಬುದು ಕವಿತೆಯ ಆಶಯ. ಭಾರತದಲ್ಲಿ ರು ಹೊಂದಿರುವ ಆರ್ಥಿಕ ಹಾಗೂ ಸಾಂಸ್ಕೃತಿಕ ನಗಳನ್ನು ಆಕ್ರಮಿಸಿಕೊಳ್ಳುವ ಭಯಂಕರ ಉತ್ಸಾಹ ಮಡುಗಟ್ಟಿದೆ. ಕೊನೆಗೆ ಅದರ ಸ್ಥಾನದಲ್ಲಿ ವೈಭವ ಾದ ಫ್ಯಾಸಿಸ್ಟ್ ಆದ ಹಿಂದೂ ಸಾಮ್ರಾಜ್ಯ ಸ್ಥಾಪನೆಯ ುತ್ತದೆ. ಮುಸ್ಲಿಮರು, ಅವರ ಧರ್ಮ, ಸಂಸ್ಕೃತಿ, ಗಳ ಗೋರಿಯ ಮೇಲೆ ಭವ್ಯ ಹಿಂದೂ ದ ಪ್ರತಿಷ್ಠಾಪನೆಯ ಕನಸಿನೊಂದಿಗೆ ಕವಿತೆ . ಹಿಂದೂಗಳನ್ನು 'ಮಹಾನಾರಾಯಣೀ ಸೇನೆ' ದು ಯುದ್ಧಕ್ಕೆ ಆಹ್ವಾನ ನೀಡಲಾಗಿದೆ. ಯಾವುದೇ ಶೀಲ ಮಾನವೀಯ ಮನಸ್ಸು ಭಯಂಕರ ಆಘಾತಪಡುವಂಥ ಹಿಂಸಾರತಿಯ ಕಾವ್ಯವಿದು. ಹಿಂಸೆಯನ್ನು ಹಿಂಸಾರತಿಯಾಗಿ ಪ್ರತಿಪಾದಿಸುವ ದು.

(ಮುಂದುವರೆಯುವುದು)

ಈಗ ಎಲ್ಲೆಡೆ ಕೋಮುವಾದ ಮತ್ತು ನಿರ್ದಿಷ್ಟ ಗುರಿಯ ಹಿಂಸೆಯ ನಿಯಂತ್ರಣ (ನ್ಯಾಯ ಮತ್ತು ನಷ್ಟ ಪರಿಹಾರದ ಅವಕಾಶ) ಮಸೂದೆ-2011 Prevention of Communal And Targeted Violence (Access to Justice and Reparations) Bill-2011. ಈ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಮಸೂದೆಯ ಸಾಧಕಬಾಧಕಗಳ ಬಗ್ಗೆ ಹಿರಿಯ ಲೇಖಕ ಫಕೀರ್ ಮೊಹಮ್ಮದ್ ಕಟ್ಪಾಡಿ ಅವರು ಬರೆದಿರುವ ಲೇಖನದ ಮೊದಲಭಾಗ ಇಲ್ಲಿದೆ.

1

ಈ ಮಸೂದೆ ಕೋಮುವಾದವನ್ನು ನಿಯಂತ್ರಿಸುತ್ತದೆಯೇ?

• ಫಕೀರ್ ಮೊಹಮ್ಮದ್ ಕಟ್ಪಾಡಿ

ಕೋಮುವಾದ ನಮ್ಮ ದೇಶದಲ್ಲಿ ಬೆಳೆದು, ಗಲಭೆಗಳು ಹುಟ್ಟಿಕೊಂಡು, ಆ ಮೂಲಕ ನಡೆದ ಹಿಂಸೆಯ ವ್ಯಾಪ್ತಿ ಮತ್ತು ಗಂಭೀರ ಪರಿಣಾಮಗಳನ್ನು ಗಮನಿಸಿದರೆ ಅದರ ನಿಯಂತ್ರಣಕ್ಕೆ ಒಂದು ಬಲಿಷ್ಠ ಮಸೂದೆಯ ಅಗತ್ಯವನ್ನು ಅನೇಕ ಆಯೋಗಗಳು - ಮುಖ್ಯವಾಗಿ 1992-93ರ ಮುಂಬಯಿ ಗಲಭೆಯ ಬಗ್ಗೆ ವರದಿ ನೀಡಿದ ಶ್ರೀ ಕೃಷ್ಣ ಆಯೋಗ - ಶಿಫಾರಸು ಮಾಡಿವೆ. ಈ ನಿಟ್ಟಿನಲ್ಲಿ ಸರಕಾರ 2005, 2009ರಲ್ಲಿ ಎರಡು ಕರಡು ಮಸೂದೆಗಳನ್ನು ರಚಿಸಿದ್ದರೂ ಕೂಡ ಅದರಲ್ಲಿ ಕಂಡುಬಂದ ಅನೇಕ ನ್ಯೂನತೆಗಳನ್ನು ತಿದ್ದಿ ಹೊಸ ಮಸೂದೆಯೊಂದನ್ನು ರಚಿಸುವ ಜವಾಬ್ದಾರಿಯನ್ನು ಹೊತ್ತ ಶ್ರೀಮತಿ ಸೋನಿಯಾ ಗಾಂಧಿಯವರ ನೇತೃತ್ವದ ರಾಷ್ಟ್ರೀಯ ಸಲಹಾ ಮಂಡಳಿ (National Advisory Committee) 2011ರ ಸೆಪ್ಟೆಂಬರ್ 10 ರಂದು ರಾಷ್ಟ್ರೀಯ ಭಾವೈಕ್ಯ ಮಂಡಳಿಯ National Integration Committee) ಸಭೆಯ ಮುಂದಿಟ್ಟು ಚರ್ಚಿಸಲಾಯಿತು.

ಈ ಮಸೂದೆಯ ಮೊದಲ ಪುಟದಲ್ಲಿ ನೀಡಲಾದ ಉದ್ದೇಶದ ಸಾರಾಂಶ ಹೀಗಿದೆ:

ಕಾನೂನಿನ ಮುಂದಿರುವ ಸಮಾನ ಹಕ್ಕುಗಳನ್ನು ಗೌರವಿಸುವ, ರಕ್ಷಿಸುವ ಮತ್ತು ಸಮಾನವಾದ ರಕ್ಷಣೆಯನ್ನು ನೀಡುವ ಹೊಣೆಹೊತ್ತ ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮ್ಮ ಜವಾಬ್ದಾರಿಯನ್ನು ನಿಭಾಯಿಸುವಂತೆ ಒತ್ತಾಯಿಸುವ, ತಮ್ಮ ಅಧಿಕಾರವನ್ನು ನಿಷ್ಪಕ್ಷವಾಗಿ ಮತ್ತು ಯಾವುದೇ ರೀತಿಯ ತಾರತಮ್ಯ ತೋರದೆ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಮೇಲೆ ನಡೆಯುವ ನಿರ್ದಿಷ್ಟ ಗುರಿಯ ಹಿಂಸೆ, ಗುಂಪು ಘರ್ಷಣೆಯೂ ಸೇರಿದಂತೆ ನಡೆಯುವ ಹಿಂಸೆಯನ್ನು ತಡೆಯುವ ಮತ್ತು ನಿಗ್ರಹದ ಮೂಲಕ ಜಾತ್ಯತೀತ ಪ್ರಜಾಪ್ರಭುತ್ವ ವನ್ನು ಎತ್ತಿಹಿಡಿಯುವುದರ ಸಲುವಾಗಿ; ಈ ದುರ್ಬಲ ವರ್ಗಗಳ ರಕ್ಷಣೆಗಾಗಿ, ಅಪರಾಧಗಳ ಪ್ರಭಾವಪೂರ್ಣ ತನಿಖೆ, ಕಾನೂನು ಕ್ರಮವನ್ನು ಕೈಗೊಳ್ಳುವುದು ಮತ್ತು ವಿಚಾರಣೆಯನ್ನು ನಡೆಸುವ ಮೂಲಕ ಮತ್ತು ನ್ಯಾಯಯುತ ರೀತಿಯಲ್ಲಿ ಮತ್ತು ಸಮಾನವಾಗಿ ನ್ಯಾಯ ಮತ್ತು ಸಂರಕ್ಷಣೆಯನ್ನು ಪಡೆಯುವುದಕ್ಕಾಗಿ ಕೋಮು ಗಲಭೆ ಮತ್ತು ನಿರ್ದಿಷ್ಟ ಗುರಿಯ ಹಿಂಸೆಗೆ ಒಳಗಾದ ಎಲ್ಲ ಜನರಿಗೂ ಈ ಮಸೂದೆ ಮೂಲಕ ಅವಕಾಶ ಕಲ್ಪಿಸಿಕೊಡುವುದು, ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸಿಕೊಡುವುದು, ಪರಿಹಾರ ಧನವೂ ಸೇರಿದಂತೆ, ಸೂಕ್ತ ಪರಿಹಾರ, ನಷ್ಟ ಪರಿಹಾರ ನೀಡುವುದು ಮತ್ತು ಈ ಸಂಬಂಧಿತ ವಿಷಯಗಳನ್ನೊಳಗೊಂಡಂತೆ ಮತ್ತು ಸಂಭವನೀಯ ವಿಷಯಗಳನ್ನು ಒಳಗೊಂಡಂತೆ ಮಸೂದೆಯು ಅನ್ವಯಿಸುತ್ತದೆ.



ಈ ಮಸೂದೆಯ ಕೆಲವು ಮುಖ್ಯಾಂಶಗಳನ್ನು ಹೀಗೆ ಗುರುತಿಸಬಹುದು:

1. ಎಲ್ಲ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು (ಈಗಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಗ್ರಹ) ಕಾನೂನು- 1989 ಅನ್ವಯಿಸುವಂತೆ) ಮತ್ತು ಧಾರ್ಮಿಕ, ಭಾಷಾ ಅಲ್ಪಸಂಖ್ಯಾತರ ಮೇಲೆ ನಡೆಯುವ ಹಲ್ಲೆ ಮತ್ತು ನಿರ್ದಿಷ್ಟ ಕೋಮಿನ ಜನರ ಮೇಲಿನ ಗುರಿಯ ಹಿಂಸೆಯನ್ನು ತಡೆಯುವ ಉದ್ದೇಶದಿಂದ ಈ ಮಸೂದೆಯನ್ನು ರಚಿಸಲಾಗಿದೆ. ಒಂದು ನಿರ್ದಿಷ್ಟ ಕೋಮಿನ ಜನರ ಅನನ್ಯತೆಯ ಮೇಲೆ ಗುರಿಯಾಗಿಟ್ಟುಕೊಂಡು ನಡೆಸುವ ದಾಳಿ, ಹಿಂಸೆಯನ್ನು ಈ ಮಸೂದೆ ಮುಖ್ಯವಾಗಿ ಕಾನೂನಿನ ವ್ಯಾಪ್ತಿಗೆ ತರುತ್ತದೆ. ಜೊತೆಗೆ ಮಹಿಳೆಯರ ಮೇಲೆ ಕೋಮು ಗಲಭೆಗಳ ಸಂದರ್ಭದಲ್ಲಿ ನಡೆಯುವ ಅತ್ಯಾಚಾರಗಳನ್ನು ಹೆಚ್ಚು ವ್ಯಾಪ್ತಿಯೊಂದಿಗೆ ಕಾನೂನಿನ ಮುಷ್ಟಿಯೊಳಗೆ ತರಲು ಕ್ರಮಕೈಗೊಳ್ಳಲಾಗಿದೆ. ದ್ವೇಷಪೂರಿತ ಹೇಳಿಕೆಗಳು, ಕೋಮು ದ್ವೇಷ ಮತ್ತು ಹಿಂಸೆಗೆ ಪ್ರಚೋದನೆ ನೀಡುವುದನ್ನು ಕೂಡ ಕಾನೂನಿನ ವ್ಯಾಪ್ತಿಗೆ ತರಲಾಗಿದೆ.

2. ಈ ಮಸೂದೆಯನ್ನು ಜಾರಿಗೆ ತರಲು ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರ ಸರಕಾರದ ನೇತೃತ್ವದಲ್ಲಿ 'ಕೋಮು ಸೌಹಾರ್ದತೆ, ನ್ಯಾಯ ಮತ್ತು ಪರಿಹಾರಕ್ಕಾಗಿ ರಾಷ್ಟ್ರೀಯ ಪ್ರಾಧಿಕಾರ'ವನ್ನು ರಚಿಸಲಾಗುತ್ತದೆ. ಈ ಪ್ರಾಧಿಕಾರದಲ್ಲಿ ಚೇರ್‌ಪರ್ಸನ್, ವೈಸ್ ಚೇರ್‌ಪರ್ಸನ್, ಐದು ಇತರ ಸದಸ್ಯರಿರುತ್ತಾರೆ. ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪಂಗಡ, ಧಾರ್ಮಿಕ, ಭಾಷಾ ಅಲ್ಪಸಂಖ್ಯಾತರಿಗೆ ಸದಸ್ಯತ್ವದ ಅವಕಾಶವಿರುತ್ತದೆ. ಉನ್ನತ ಪದವಿಗಳನ್ನು ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ. ಹೀಗೆಯೇ ರಾಜ್ಯದಲ್ಲಿ ಕೂಡ ಒಂದು ರಾಜ್ಯ ಪ್ರಾಧಿಕಾರ ರಚನೆಯಾಗುತ್ತದೆ. ರಾಜ್ಯದಲ್ಲಿ ರಾಜ್ಯಪಾಲರ ಆದೇಶ ಅನುಮೋದನೆಯ ಮೂಲಕ ರಾಜ್ಯ ಪ್ರಾಧಿಕಾರದ ರಚನೆಯಾಗುತ್ತದೆ. ರಾಷ್ಟ್ರೀಯ ಮತ್ತು ರಾಜ್ಯ ಪ್ರಾಧಿಕಾರಗಳ ಕಾರ್ಯವ್ಯಾಪ್ತಿ ಮತ್ತು ಕರ್ತವ್ಯಗಳ ಬಗ್ಗೆ ಮಸೂದೆಯಲ್ಲಿ ವಿವರವಾಗಿ ಚರ್ಚಿಸಲಾಗಿದೆ.

3. ಸಾರ್ವಜನಿಕರ ರಕ್ಷಣೆಯ ಹೊಣೆಹೊತ್ತ ಸರಕಾರಿ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸಮಾನವಾಗಿ, ನ್ಯಾಯಯುತವಾಗಿ, ತಾರತಮ್ಯ ಪೂರ್ವಗ್ರಹ ರಹಿತವಾದ ರೀತಿಯಲ್ಲಿ ನಿಭಾಯಿಸುವುದರ ಮೂಲಕ ಕೋಮುಗಲಭೆ ಮತ್ತು ನಿರ್ದಿಷ್ಟ ಕೋಮಿನ ಜನರ ಮೇಲೆ ಗುರಿಯಾಗಿಸಿದ ಹಲ್ಲೆ ಮತ್ತು ಅವುಗಳನ್ನು ಬೆಳೆಸುವ, ಪ್ರಚೋದಿಸುವ, ಸ್ಫೋಟಿಸುವ ಮತ್ತು ಹರಡುವ ಎಲ್ಲ ಕೃತ್ಯಗಳನ್ನು ತಡೆಯಲು ಪ್ರಾಮಾಣಿಕ ಕಟ್ಟುನಿಟ್ಟಿನ ಕ್ರಮಗಳನ್ನು ಈ ಮಸೂದೆಯಲ್ಲಿ ಕೈಗೊಳ್ಳಲಾಗಿದೆ. ಈ ಮಸೂದೆಯಲ್ಲಿ ಸರಕಾರಿ ಅಧಿಕಾರಿಗಳ ಕರ್ತವ್ಯಚ್ಯುತಿ ನಡೆದ ಸಂದರ್ಭಗಳಲ್ಲಿ ಕೈಗೊಳ್ಳಲಿರುವ ಕ್ರಮಗಳ ಬಗ್ಗೆಯೂ ಉಲ್ಲೇಖಿಸಲಾಗಿದೆ.

4. 1973ರ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿನ ನಿಯಮಗಳು ಈ ಮಸೂದೆಗೂ ಅನ್ವಯಿಸುತ್ತದೆ. ಈ ಕ್ರಿಮಿನಲ್ ಕೋಡ್‌ನಲ್ಲಿ ಹೇಳಲಾದ ನಿಯಮಗಳನ್ನು ಹೊರತು ಪಡಿಸಿ ಉಳಿದ ಎಲ್ಲ ಅಪರಾಧಗಳು ಈ ಮಸೂದೆಯಲ್ಲಿ ನಾನ್-ಬೈಲೇಬಲ್ ಮತ್ತು ವಿಚಾರಣಾಧೀನ (ಕಾಗ್ನಿಜಬಲ್) ಆಗಿರುತ್ತದೆ. ಈ ಮಸೂದೆಯ ಪ್ರಕರಣಗಳಲ್ಲಿನ ಸಾಕ್ಷಿಗಳ ರಕ್ಷಣೆಗೆ ಹಲವು ಕ್ರಮಗಳನ್ನು ಈ ಮಸೂದೆ ಸೂಚಿಸಿದೆ.

5. ಕೋಮು ಗಲಭೆಗಳಲ್ಲಿ ಬಲಿಪಶುಗಳಾದವರಿಗೆ, ಸಂತ್ರಸ್ಥರಿಗೆ ಪರಿಹಾರವನ್ನು ನಿಗದಿಪಡಿಸಲಾಗಿದೆ. ತ್ವರಿತವಾಗಿ ಸೂಕ್ತ ಪರಿಹಾರವನ್ನು ಒದಗಿಸಲು ರಿಲೀಫ್ ಕ್ಯಾಂಪ್ ಅಥವಾ ಪರಿಹಾರ ಕೇಂದ್ರಗಳನ್ನು ತೆರೆಯಲಾಗುತ್ತದೆ. ರಾಜ್ಯಗಳಲ್ಲಿ ಪರಿಹಾರ ಮೌಲ್ಯಮಾಪನ ಕಮಿಟಿಯನ್ನು ರಚಿಸಲಾಗುತ್ತದೆ. ಪ್ರತಿ ಜಿಲ್ಲೆಗಳಲ್ಲೂ ಈ ಸಮಿತಿಯನ್ನು ರಚಿಸಲಾಗುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ 'ಕೋಮುಗಲಭೆಗಳು ಮತ್ತು ನಿರ್ದಿಷ್ಟ ಗುರಿಯಾಗಿ ನಡೆಸಿದ ಹಿಂಸೆಯ ಸಂತ್ರಸ್ಥರ ಪರಿಹಾರ ಮತ್ತು ಪುನರ್ವಸತಿ ನಿಧಿ'ಯನ್ನು ಸ್ಥಾಪಿಸಲಾಗುತ್ತದೆ.

ಮಸೂದೆಯ ಅಗತ್ಯ

ಭಾರತದ ಕೋಮುಗಲಭೆಗಳಿಗೆ ಬಹುಕಾಲದ ಇತಿಹಾಸವಿದೆ. ಗುಜರಾತಿನ 2002ರ ಹತ್ಯಾಕಾಂಡ, 1984ರಲ್ಲಿ ದೆಹಲಿಯಲ್ಲಿ ನಡೆದ ಸಿಖ್ಖರ ಹತ್ಯಾಕಾಂಡ, 1992-93ರ ಮುಂಬೈ ಗಲಭೆ, ಬಾಬರಿ ಮಸೀದಿಯ ನಾಶದ ನಂತರ ಭಾರತದಾದ್ಯಂತ ನಡೆದ ಕೋಮುಗಲಭೆಗಳೆಲ್ಲವುಗಳು ಜನ ಸಮುದಾಯದ ಮೇಲಾದ ಪರಿಣಾಮಗಳನ್ನು ಅವಲೋಕಿಸಿದರೆ ಈಗಿರುವ ಕಾನೂನು ಈ ಗಲಭೆಗಳನ್ನು ಹತ್ತಿಕ್ಕುವುದಕ್ಕೆ ಸಾಲದು ಎನ್ನುತ್ತದೆ. ಒಂದು ಬಲಿಷ್ಠವಾದ ಕಾನೂನು ಇರುತ್ತಿದ್ದರೆ ಈ ಗಲಭೆಗಳು ಮತ್ತೆಮತ್ತೆ ಮರುಕಳಿಸುತ್ತಿರಲಿಲ್ಲ. ಕೇಂದ್ರ ಸರಕಾರ 2005ರಲ್ಲಿ ಒಂದು ಕರಡು ಮಸೂದೆಯನ್ನು ತಯಾರಿಸಿತ್ತಾದರೂ ಇದರಲ್ಲಿ ಅನೇಕ ನಿಯಮಗಳು ಬಹಳ ವಿರೋದಾಭಾಸಗಳಿಂದ ಕೂಡಿತ್ತು ಮತ್ತು ಇದರ ಜಾರಿಗೆ ಹಲವು ನಿಟ್ಟಿನಿಂದ ವಿರೋಧ ವ್ಯಕ್ತವಾಗಿತ್ತು ಇದನ್ನು ಟೀಕಿಸಿದ ಹೆಚ್ಚಿನ ಬುದ್ಧಿಜೀವಿಗಳು, ಕಾನೂನು ತಜ್ಞರು ಈ ಗಲಭೆಗಳನ್ನು ಹತ್ತಿಕ್ಕುವುದಕ್ಕೆ ಕೇಂದ್ರ ಸರಕಾರಕ್ಕೆ ಶಕ್ತಿಶಾಲಿಯಾದ ಕಾನೂನಿನ ಅಗತ್ಯವಿದೆಯೆಂದು ಅಭಿಪ್ರಾಯಪಟ್ಟಿದ್ದರು. ಈಗಿರುವ ಕಾನೂನಿಗೆ ಈ ಶಕ್ತಿ ಇಲ್ಲವೆಂದಲ್ಲ, ಆದರ ಸರಿಯಾದ ಉಪಯೋಗವಾಗಿಲ್ಲ ಮತ್ತು ಕೆಲವೊಂದು ಲೋಪದೋಷಗಳು ಪರಿಣಾಮಕಾರಿಯಾಗಿ ಇವುಗಳನ್ನು ಬಳಸುವುದಕ್ಕೆ ಬಿಡುತ್ತಿಲ್ಲ. ಈಗಿರುವ ಕಾನೂನುಗಳಲ್ಲಿ ಆರಕ್ಷಕ ಅಧಿಕಾರಿಗಳು ಹಲವು ಸಂದರ್ಭಗಳಲ್ಲಿ ಗಲಭೆಯನ್ನು ತಡೆಯಲು ಅಸಮರ್ಥರಾದರೆ ಅವರನ್ನು ಜವಾಬ್ದಾರರನ್ನಾಗಿಸುವುದಿಲ್ಲ. ಕೋಮು ಗಲಭೆಗಳಲ್ಲಿ ಈ ಅಧಿಕಾರಿಗಳಿಂದ ಕರ್ತವ್ಯಲೋಪವಾಗಿದ್ದರೆ ಹೊಣೆಗಾರರನ್ನಾಗಿಸುವ ಅವಕಾಶ ಈ ಮಸೂದೆಯಲ್ಲಿದೆ. ಕೋಮು ಗಲಭೆಗಳ ಸಂದರ್ಭದಲ್ಲಿ ಹಲವೆಡೆಗಳಲ್ಲಿ ಕೆಲವು ವ್ಯಕ್ತಿಗಳು ಏಕಾಂಗಿಯಾಗಿ ತಮ್ಮದೇ ಆದ ರೀತಿಯಲ್ಲಿ ನಡೆಯಲಿರುವ ಘರ್ಷಣೆಯನ್ನು ತಡೆದು, ಹರಡದಂತೆ ತಡೆಯೊಡ್ಡಿರುವುದೂ ಇದೆ. ಆದರೆ ಇದು ಎಲ್ಲ ಸಂದರ್ಭದಲ್ಲೂ ಸಾಧ್ಯವಾಗದು.

ಒಟ್ಟಾರೆಯಾಗಿ ಈ ಮಸೂದೆಯ ಉದ್ದೇಶ ಹಿಂಸಾತ್ಮಕ ಗಲಭೆಗಳಿಂದ, ಮತ್ತು ನಿರ್ದಿಷ್ಟ ಕೋಮಿನ ಮೇಲೆ ಗುರಿಯಾಗಿಟ್ಟುಕೊಂಡು ನಡೆಯುವ ಹಿಂಸೆಯಿಂದ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ರಕ್ಷಣೆಯಾಗಿದೆ. ರಾಷ್ಟ್ರೀಯ ಸಲಹಾ ಮಂಡಳಿಯ ನೇತೃತ್ವದಲ್ಲಿ ರಚಿಸಲ್ಪಟ್ಟ ಈ ಮಸೂದೆ ಜಾರಿಗೆ ಬಂದಲ್ಲಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಬಹುದು ಎಂದು ಈಗಲೇ ಹೇಳುವುದು ತುಂಬ ಆತುರದ ನಿರ್ಣಯವಾಗಬಹುದು. ಆದರೂ ಭಾರತದ ಕೋಮು ಗಲಭೆಗಳ ಇತಿಹಾಸವನ್ನು ಗಮನಿಸಿದಾಗ ಇಂತಹ ಒಂದು ಬಲಿಷ್ಠ ಕಾನೂನಿನ ತೀವ್ರವಾದ ಅಗತ್ಯ ಕಂಡುಬರುತ್ತದೆ.

ರಾಷ್ಟ್ರೀಯ ಸಲಹಾ ಮಂಡಳಿ ಈ ಮಸೂದೆಯ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಸಲಹೆಯನ್ನು ಬಯಸಿದೆ. ಈ ಮಸೂದೆಯ ಬಗ್ಗೆ ಚರ್ಚೆ ಮಾಡುವ ಮೊದಲು ಈಗಿರುವ ಕಾನೂನಿನಲ್ಲಿರುವ ಅಗತ್ಯ ಮತ್ತು ನ್ಯೂನತೆಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ.

ಸಾಮೂಹಿಕವಾಗಿ ಗುಂಪು ಸೇರಿ ಒಂದು ಕೋಮಿನ ಜನರ ಮೇಲೆ ನಡೆಯುವ ಹಲ್ಲೆ, ವ್ಯವಸ್ಥಿತವಾಗಿ ನಡೆಯುವ ಕಗ್ಗೊಲೆ, ನಿರ್ದಿಷ್ಟ ಕೋಮಿನ ಮೇಲೆ ಗುರಿಯಿಟ್ಟು ನಡೆಸುವ ಹಿಂಸೆ, ಕಗ್ಗೊಲೆಗಳು ಭಾರತಕ್ಕೆ ಹೊಸದೇನಲ್ಲ. ಇದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಅನೇಕ ಕಡೆ ಅನೇಕ ಸಂದರ್ಭದಲ್ಲಿ ಜನರಿಗೆ ರಕ್ಷಣೆಯನ್ನು ನೀಡಬೇಕಾದ ಸರಕಾರಿ ಅಧಿಕಾರಿಗಳು, ಪೋಲೀಸ್ ಪಡೆಗಳ ಕಣ್ಣೆದುರೇ ನಡೆದಿದೆ. ಕೆಲವು ಕಡೆಗಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಪಾಲುಗೊಂಡಿದೆ ಯೆನ್ನಲಾಗುತ್ತಿದೆ. ಉದಾ: 2002ರಲ್ಲಿ ಗುಜರಾತ್ ಹತ್ಯಾಕಾಂಡ ಮತ್ತು 1984ರ ದೆಹಲಿಯಲ್ಲಿ ನಡೆದ ಸಿಖ್ಖರ ಸಾಮೂಹಿಕ ಹತ್ಯಾಕಾಂಡ.


ಗುಜರಾತಿನಲ್ಲಿ ನಡೆದ ಸಾಮೂಹಿಕ ಹತ್ಯಾಕಾಂಡದಲ್ಲಿ ಸರಕಾರಿ ರಕ್ಷಣಾ ಸಂಸ್ಥೆಗಳು, ಮೇಲಿಂದ ಕೆಳಗೆ ಕಾರ್ಯನಿರ್ವಹಿಸುತ್ತಿದ್ದ ಸರಕಾರಿ ರಕ್ಷಣಾ ಪಡೆಯ ಅಧಿಕಾರಿಗಳು, ತಿಳಿದೂ ತಿಳಿಯದೆಯೋ, ಮೇಲಾಧಿಕಾರಿಗಳ ಆಜ್ಞೆಯ ಮೇರೆಗೆ ಮತ್ತು ಉದ್ದೇಶ ಪೂರ್ವಕವಾಗಿಯೋ ಭಾಗವಹಿಸಿವೆ. ಅತ್ಯಂತ ಕ್ಷಿಪ್ರವಾಗಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಮೊಹಲ್ಲಾಗಳು, ಕೇರಿಗಳು, ಹೆಸರು ವಿಳಾಸಗಳು ಮುಂತಾದ ಮಾಹಿತಿಗಳು, ವ್ಯಾಪಾರಿ ಕೇಂದ್ರಗಳು, ಅಂಗಡಿಗಳು, ಉತ್ಪಾದಕ ಘಟಕಗಳ ಯಾದಿ ಗಲಭೆಕೋರರಿಗೆ ಲಭಿಸಿವೆ. ಗಲಭೆಯ ಸಂತ್ರಸ್ಥರು ನಂತರದಲ್ಲಿ ಕಾನೂನಿನ ರಕ್ಷಣೆಗಾಗಿ ದೂರು ದಾಖಲಿಸಲು ಪೋಲೀಸ್ ಸ್ಟೇಶನಿಗೆ ಹೋದಾಗ ಎಫ್.ಐ.ಆರ್. ದಾಖಲಿಸಲು ಆರಕ್ಷಕರು ನಿರಾಕರಿಸಿದ್ದಾರೆ. ವಿವಿಧ ಆರೋಪಗಳಿಗೆ ಒಳಗಾಗಿ ಬಂಧಿಸಲ್ಪಟ್ಟ ಆರೋಪಿ ಗಳನ್ನು ಸರಕಾರ ವ್ಯವಸ್ಥಿತವಾಗಿ ಬಿಡುಗಡೆಹೊಂದಲು ಸಹಕಾರ ನೀಡಿತ್ತು. 1984ರ ದೆಹಲಿಯ ಹತ್ಯಾಕಾಂಡದಲ್ಲಿ ಕೂಡ ಇದೇ ರೀತಿಯ ಆರೋಪಗಳು ಅಲ್ಲಿನ ಸರಕಾರದ ಮೇಲಿದೆ.

ಬಾಬರಿ ಮಸೀದಿಯ ನಾಶ ಮತ್ತು ಅದರ ಹಿನ್ನೆಲೆಯಲ್ಲಿ ದೇಶದಾದ್ಯಂತ ನಡೆದ ಕೋಮುಗಲಭೆಗಳನ್ನು ಗಮನಿಸಿದರೆ ರಾಜ್ಯ ಮತ್ತು ಕೇಂದ್ರ ಸರಕಾರಗಳು ಉದ್ದೇಶಪೂರ್ವಕವಾಗಿ ಭಾಗವಹಿಸಿದ್ದು ಕಂಡುಬರುತ್ತದೆ. ಮಸೀದಿಯ ನಾಶಕ್ಕೆ ಮತ್ತು ಜನಾಂಗ ಹತ್ಯೆಗೆ ಕಾರಣರಾದವರು, ಪ್ರಚೋದಿಸಿದವರು ಇಂದಿಗೂ ಯಾವುದೇ ಕಾನೂನಿನ ಭಯವಿಲ್ಲದೆ ಸ್ವತಂತ್ರವಾಗಿ ನಡೆದಾಡುತ್ತಿದ್ದಾರೆ. ಈಗಿರುವ ಕಾನೂನಿನ ನಿಶ್ಶಕ್ತ ವೈಫಲ್ಯವನ್ನು ಸಾಮಾಜಿಕ ಸಮಸ್ಯೆಯೆಂದು ಪರಿಗಣಿಸಿ ನೋಡಿದರೆ ಸಾಲದು. ನಮ್ಮನ್ನಾಳುವ ರಾಜಕೀಯ ವ್ಯಕ್ತಿಗಳ ಮರ್ಜಿ ಮತ್ತು ಇಚ್ಛಾಶಕ್ತಿಯ ಕೊರತೆಯ ಹಿನ್ನೆಲೆಯಲ್ಲೂ ನೋಡಬೇಕಾಗುತ್ತದೆ. ಯಾಕೆಂದರೆ, ರಾಜ್ಯ ಮತ್ತು ಕೇಂದ್ರ ಸರಕಾರಗಳು ಮನಸ್ಸು ಮಾಡಿದರೆ ಈ ಹತ್ಯಾಕಾಂಡವನ್ನು ಈಗಿನ ಕಾನೂನುಗಳ ಪರಿಧಿಯೊಳಗೆ ಕೆಲವೇ ಗಂಟೆಗಳಲ್ಲಿ ನಿಯಂತ್ರಿಸುವುದು ಮತ್ತು ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸುವುದು ಸಾಧ್ಯವಾಗುತ್ತಿತ್ತು.

(ಮುಂದುವರೆಯುವುದು)

ಆತ್ಮಹತ್ಯೆ ಯತ್ನ ಮತ್ತು ಹಸಿರು ಕಣ್ಣಿನ ಮಗಳು





ಒಂದು ರಾತ್ರಿ ಊಟ ಮುಗಿಸಿದ ಮೇಲೆ ನಾನು ಮತ್ತು ಲಂಕೇಶರು ಮಾತಾಡುತ್ತಾ ಇದ್ದೆವು. ಅವರು ಇದ್ದಕ್ಕಿದ್ದಂತೆ "ನೀನು ನನ್ನ ಅಪ್ಪನಂತವಳಾಗಿದ್ದರೆ ನನ್ನ ಅವ್ವ ಇಷ್ಟು ಬೇಗ ಸಾಯುತ್ತಿರಲಿಲ್ಲ" ಎಂದು ಅವರ ತಾಯಿ ಸಾವಿಗೆ ನನ್ನನ್ನು ದೂರಿ ಬೈದರು. ಅದುವರೆಗೆ ಅವರು ಎಂದೂ ನನ್ನನ್ನು ಜೋರು ದನಿಯಲ್ಲಿ ಮಾತನಾಡಿಸಿಯೂ ಇರಲಿಲ್ಲ, ಎಂದೂ ಕೋಪಗೊಂಡಿರಲಿಲ್ಲ, ಅವತ್ತಿನ ತನಕ ನಾವಿಬ್ಬರು ಒಂದು ಜಗಳವನ್ನೂ ಆಡಿರಲಿಲ್ಲ......

ಆಗ ನನಗೆ ಏನನ್ನಿಸಿತೊ ಗೊತ್ತಿಲ್ಲ. ಮನೆಯಲ್ಲಿ ಜಿರಲೆ ಔಷಧಿಯೋ, ಇಲಿ ಔಷಧಿಯೋ ಇತ್ತು. ಅದನ್ನು ಕುಡಿದು ಬಿಟ್ಟೆ. ಆಗ ರಾತ್ರಿ ಹತ್ತು ಗಂಟೆ ಆಗಿತ್ತು, ಕೂಡಲೇ ಮಗಳು ಗೌರಿಯನ್ನು ಮನೆ ಓನರ್ ಹತ್ತಿರ ಬಿಟ್ಟು ನನ್ನನ್ನು ಲಂಕೇಶರು ಸ್ಕೂಟರ್ ಮೇಲೆ ಕೂರಿಸಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋದರು. ನನಾಗಲೇ ಬಾಯಿಯಿಂದ ನೊರೆ ಬರಲಾರಂಬಿಸಿತ್ತು.

ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಡಾಕ್ಟರ್ ಏನೇನೋ ಪ್ರಶ್ನೆ ಕೇಳುತ್ತಿದ್ದರು. ನಾನು ಕುಡಿದಿದ್ದನ್ನೆಲ್ಲ ವಾಂತಿ ಮಾಡಿಸಿದರು. ಲಂಕೇಶರನ್ನು ನೋಡಲಿಕ್ಕಾಗುತ್ತಿರಲಿಲ್ಲ, ಅವರು "ಯಾಕೆ ಇಂತಹ ಕೆಲಸ ಮಾಡಿದೆ?" ಅಂತ ಒದ್ದಾಡುತ್ತಿದ್ದರು. ನಾನು ಅವತ್ತು ಯಾಕೆ ವಿಷ ಕುಡಿದೆ ಅಂತ ನನಗೆ ಗೊತ್ತಿಲ್ಲ, ಅವತ್ತಿನ ತನಕ ಲಂಕೇಶರು ಎಂದೂ ನನಗೆ ಬೈದಿರಲಿಲ್ಲ, ಗದರಿಸಿರಲಿಲ್ಲ, ಅವರೇ ನನ್ನ ಸರ್ವಸ್ವ ಎಂದು ನಾನು ಅಂದುಕೊಂಡಿದ್ದಾಗ ಅವರು ನನ್ನ ಮೇಲೆ ರೇಗಿದರಲ್ಲ ಎಂದು ತುಂಬಾ ಬೇಸರವಾಗಿತ್ತು, ಆದ್ದರಿಂದಲೇ ವಿಷ ಕುಡಿದೆನೋ ಏನೋ. ಸ್ವಲ್ಪ ದಿನಗಳಲ್ಲಿ ನಾವಿಬ್ಬರು ಮತ್ತೆ ಯಥಾಸ್ಥಿತಿಗೆ ಬಂದೆವು.

****

ನನ್ನ ಎರಡನೇ ಪ್ರೆಗ್ನೆನ್ಸಿ ಸಮಯದಲ್ಲಿ ಬರಗಾಲ ಬಂದು ಎಲ್ಲೆಡೆ ರೇಷನ್ ವ್ಯವಸ್ಥೆ ಜಾರಿಗೆ ಬಂದಿತ್ತು, ಅಂಗಡಿಗಳಲ್ಲಿ ಅಕ್ಕಿ ಸಿಗುವುದೇ ಕಷ್ಟವಾಗಿತ್ತು. ನಾನು ಹಿಂದಿನಷ್ಟು ಶಕ್ತಿಶಾಲಿಯಾಗಿರಲಿಲ್ಲ, ಲಂಕೇಶರು ಬಿಡುವಾದಾಗ ನನ್ನನ್ನು ಎಂಟಿಆರ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಒಂಭತ್ತು ತಿಂಗಳಿಗೆ ಕಾಲಿಡುತ್ತಿದ್ದಂತೆ ನಾನು ಶಿವಮೊಗ್ಗೆಯಲ್ಲಿನ ಅಪ್ಪಯ್ಯನ ಮನೆಗೆ ಹೋದೆ. ಅದೇ ಹೊತ್ತಿಗೆ ನನ್ನ ಚಿಕ್ಕಮ್ಮಳಿಗೆ ಗಂಡುಮಗು ಆಗಿ ಮಗು ತೀರಿಹೋಗಿತ್ತು, ಚಿಕ್ಕಮ್ಮ ತುಂಬಾ ವೀಕ್ ಆಗಿದ್ದರಿಂದ ಅಪ್ಪಯ್ಯ ಅವರಿಗೆ ಚೆನ್ನಾಗಿ ಹಣ್ಣು ತರಕಾರಿ ತಿನ್ನಿಸಿದ್ದರು. ಪರಿಣಾಮವಾಗಿ ಮಗು ಹೊಟ್ಟೆಯಲ್ಲಿ ತುಂಬಾ ಬೆಳೆದಿದ್ದ ಕಾರಣ ಚಿಕ್ಕಮ್ಮನ ತವರೂರಾದ ಮಡಕಶಿರಾದಲ್ಲಿ ಹೆರಿಗೆ ಮಾಡಿಸುವುದು ತಡವಾಗಿ ಮಗು ತೀರಿಹೋಗಿತ್ತು, ಮಗು ಹೋಗಿ ನಾಲ್ಕು ತಿಂಗಳಾಗಿತ್ತು, ಪಾಪ ನನ್ನ ಚಿಕ್ಕಮ್ಮ "ಮಗು ನಿನ್ನ ಅಪ್ಪಯ್ಯ ತರಹನೇ ಇತ್ತು, ಎಷ್ಟು ಉದ್ದ ಇದ್ದ, ಗುಂಡಗೆ ಇದ್ದ" ಅಂತ ಕಣ್ಣೀರಿಟ್ಟರು.

ಈಗಿನಂತೆ ಆಗ ಪದೇಪದೇ ಡಾಕ್ಟರ್ ಬಳಿ ಹೋಗಿ ಚೆಕಪ್ ಮಾಡಿಸಿಕೊಳ್ಳುವುದು, ಸ್ಕ್ಯಾನಿಂಗ್ ಮಾಡಿಸಿಕೊಳ್ಳುವುದು ಎಲ್ಲಾ ಇರಲಿಲ್ಲ, ನಾನು ಒಂದು ಮಗುವಿಗೆ ಒಂದು ಸಾರಿ ಡಾಕ್ಟರ್ ಹತ್ತಿರ ಹೋದರೆ ಮತ್ತೆ ಡೆಲಿವರಿಗೇ ಆಸ್ಪತ್ರೆಗೆ ಹೋಗುತ್ತಿದ್ದದ್ದು.

ಈ ಅವಧಿಯಲ್ಲೇ ಲಂಕೇಶರು 'ನನ್ನ ತಂಗಿಗೊಂದು ಗಂಡು ಕೊಡಿ', 'ಟಿ ಪ್ರಸನ್ನನ ಗೃಹಸ್ಥಾಶ್ರಮ', 'ರೊಟ್ಟಿ', 'ನಾನಲ್ಲ' ಬರೆದದ್ದು.

ಡಿಸೆಂಬರ್ 13 ನೇ ಬೆಳಗ್ಗೆ 5.50ಕ್ಕೆ ನೋವು ಶುರುವಾಯಿತು. ರಾತ್ರಿ ನೋವು ಜಾಸ್ತಿ ಆದಾಗ ಆಸ್ಪತ್ರೆಗೆ ಹೋದೆ. ರಾತ್ರಿ 11.15ಕ್ಕೆ ನಮ್ಮ ಎರಡನೇ ಮಗಳು ಹುಟ್ಟಿದಳು. ಈ ಮಗು ನನ್ನ ಮೊದಲ ಮಗುವಿನಷ್ಟು ದಪ್ಪ ಇರಲಿಲ್ಲ, ಎಲ್ಲರೂ ಎರಡನೆ ಮಗು ಗಂಡಾಗಬಹುದು ಎಂದು ಆಶೆ ಇಟ್ಟುಕೊಂಡಿದ್ದರು. ಎರಡನೆ ಮಗು ಹುಟ್ಟಿದಾಗ ಲಂಕೇಶರು ಬೆಂಗಳೂರಿನಲ್ಲಿದ್ದರು. ಯಥಾಪ್ರಕಾರ ನನ್ನ ಅಪ್ಪಯ್ಯ ಮತ್ತು ಅಜ್ಜಿ ಚೆನ್ನವಜ್ಜಿ ನನ್ನ ಜೊತೆ ಆಸ್ಪತ್ರೆಯಲ್ಲಿದ್ದರು. ನನ್ನ ಅಜ್ಜಿ ಮಗುವಿನ ಕಣ್ಣು ನೋಡಿದರು. ನನ್ನ ಅಜ್ಜಿಯ ಕಣ್ಣು ಸ್ವಲ್ಪ ಹಸಿರು ಬಣ್ಣದ್ದು. ಅವರ ಕಣ್ಣನ್ನು ನಮ್ಮ ಮನೆಯಲ್ಲಿ ಯಾರೂ ಹೊತ್ತಿರಲಿಲ್ಲ, ಆದರೆ ನನ್ನ ಎರಡನೆ ಮಗಳು ಚೆನ್ನವಜ್ಜಿಯ ಕಣ್ಣು ಹೊತ್ತಿದ್ದಳು. ಅದನ್ನು ನೋಡಿ "ಇಷ್ಟು ವರ್ಷಗಳ ಮೇಲೆ ನನ್ನ ಮರಿಮೊಮ್ಮಗಳು ನನ್ನ ಕಣ್ಣು ಹೊತ್ತಿದ್ದಾಳೆ" ಅಂತ ಅಜ್ಜಿ ತುಂಬಾ ಸಂತೋಷಪಟ್ಟರು. ನಮ್ಮ ಎರಡನೆ ಮಗಳ ಕಣ್ಣು ನನ್ನ ಅಜ್ಜಿಯಂತಿದ್ದರೆ ಉಳಿದ ಹೋಲಿಕೆ ಪೂರಾ ನನ್ನ ಅತ್ತೆ ದೇವೀರಮ್ಮನದ್ದು.

ಎರಡು ದಿನಗಳ ನಂತರ ಲಂಕೇಶರು ಬೆಂಗಳೂರಿನಿಂದ ಬಂದರು. ಮಗಳ ಕಣ್ಣು ನೋಡಿ "ಬ್ಯೂಟಿಫುಲ್" ಅಂತ ಹೇಳಿ "ತುಂಬಾ ಸಣ್ಣ ಇದ್ದಾಳೆ. ಹೇಗೆ ಎತ್ತಿಕೊಳ್ಳುವುದು"



ಎಂದು ಆಕೆಯ ಕಾಲು ಸವರುತ್ತಾ ಕುಳಿತರು. ನನ್ನ ಮೊದಲ ಮಗಳು ಗೌರಿಗೆ "ಬಾ, ನಿನ್ನ ತಂಗಿಯನ್ನು ನೋಡು" ಎಂದು ನನ್ನ ಅಜ್ಜಿ ಆಸ್ಪತ್ರೆಗೆ ಕರೆದುಕೊಂಡು ಬಂದರು. ತಂಗಿಯನ್ನು ನೋಡಿದ ಗೌರಿ "ಪಾಪು ಅಮ್ಮನ ಪಕ್ಕ ಮಲಗಿದೆ. ಬಾ ಅಜ್ಜಿ ಮನೆಗೆ ಹೋಗೋಣ" ಎಂದಳು.

ನಾನು ಐದು ದಿನಗಳ ನಂತರ ಆಸ್ಪತ್ರೆಯಿಂದ ಅಪ್ಪಯ್ಯನ ಮನೆಗೆ ಹೋದೆ. ಒಂದೂವರೆ ತಿಂಗಳು ಶಿವಮೊಗ್ಗೆಯಲ್ಲಿದ್ದು ಬೆಂಗಳೂರಿಗೆ ವಾಪಸ್ ಬಂದೆ.

****

ನಮ್ಮ ಮೊದಲ ಮಗಳು ಗೌರಿಯನ್ನು ಗಾಂಧಿಬಜಾರಿನಲ್ಲಿದ್ದ ದಿ ಹೋಮ್ ಸ್ಕೂಲ್‌ಗೆ ಸೇರಿಸಿದೆವು. ಆಗಿನ ಕಾಲದಲ್ಲಿ ಅದು ತುಂಬಾ ಒಳ್ಳೆಯ ಮತ್ತು ದುಬಾರಿ ಶಾಲೆ ಅಂತ ಹೆಸರು ಪಡೆದಿತ್ತು, ಜರ್ನಲಿಸ್ಟ್ ಕಾಲೋನಿಯಿಂದ ಸ್ಕೂಲ್‌ಗೆ ಗೌರಿ ಜಟಕಾ ಗಾಡಿಯಲ್ಲಿ ಹೋಗಿಬರುತ್ತಿದ್ದಳು. ಆ ಶಾಲೆಗೆ ಹೆಡ್‌ಮಿಸ್ ಆಗಿದ್ದ ಮಿಸ್ ಮಾದಪ್ಪ ತುಂಬಾ ಸ್ಟ್ರಿಕ್ಟ್. ಪಾಠ ಚೆನ್ನಾಗಿ ಮಾಡುತ್ತಿದ್ದರು. ಒಮ್ಮೆ ಸ್ಪೋರ್ಟ್ಸ್ ಡೇ ಇತ್ತು, ನಾನು ಮತ್ತು ಲಂಕೇಶರು ನಮ್ಮ ಮಗಳು ಸ್ಪೋರ್ಟ್ಸ್‌ನಲ್ಲಿ ಫಸ್ಟ್ ಬರುತ್ತಾಳೆ ಎಂಬ ಉಮೇದಿನಿಂದ ಹೋದೆವು. ಆದರೆ ನಮ್ಮ ಮಗಳು ಲಾಸ್ಟ್ ಬಂದಳು. ಅವಳು ತುಂಬಾ ಸಾಫ್ಟ್ ಆಗಿದ್ದಳು, ಆಗ.



ಕವಿತಾ

ಈಗ ನಾನು ಮತ್ತು ಲಂಕೇಶರು ಹೊರಗೆ ಸುತ್ತುವುದು ಕಡಿಮೆ ಆಗಿತ್ತು, ಅವರ ಸ್ನೇಹಿತರ ಬಳಗ ಜಾಸ್ತಿ ಆಗಿತ್ತು. ಮಾವಿನ ಹಣ್ಣಿನ ಸೀಜನ್‌ನಲ್ಲಿ ಹೋಳಿಗೆ ಸೀಕರಣೆ ಮಾಡಿ ಸ್ನೇಹಿತರನ್ನು ಊಟಕ್ಕೆ ಕರೆಯುತ್ತಿದ್ದೆವು.

ನಮ್ಮ ಮಗಳು ಬೇಬಿ (ಅವಳಿಗೆ ಹೆಸರಿಡುವುದು ತಡವಾಯಿತು. ಲಂಕೇಶರಿಗೆ ತಮ್ಮ ತಾಯಿಯ ಹೆಸರಿಡುವ ಆಶೆ. ಆದರೆ ಆಕೆ ದೊಡ್ಡವಳಾದ ಮೇಲೆ ದೇವೀರಮ್ಮ ಎಂಬ ಹೆಸರು ಸರಿ ಇರುವುದಿಲ್ಲ ಅಂತ ಹೆಸರಿಡುವುದನ್ನು ಮುಂದೂಡುತ್ತಲೇ ಹೋದೆವು. ಆಗ ಅವಳನ್ನು ಮನೆಯಲ್ಲಿ ಬೇಬಿ ಅಂತ ಕರೆಯಲು ಶುರು ಮಾಡಿದೆವು, ಈಗಲೂ ಆಕೆ ಮನೆಯಲ್ಲಿ ಬೇಬಿನೇ ಆಗಿ ಉಳಿದಿದ್ದಾಳೆ) ಹುಟ್ಟಿದಾಗ ಲಂಕೇಶರು ಬರೆದಿದ್ದ 'ಅವ್ವ' ಕವನ ಎಲ್ಲರ ಗಮನ ಸೆಳೆದಿದ್ದರಿಂದ ಕೊನೆಗೆ ನಮ್ಮ ಎರಡನೆ ಮಗಳಿಗೆ ಕವಿತಾ ಎಂದು ನಾಮಕರಣ ಮಾಡಿದೆವು.

ಬೇಬಿಗೆ ಐದು ತಿಂಗಳಾದಾಗ ಅವಳ ಆರೋಗ್ಯ ಕೆಟ್ಟಿತು. ನನಗೂ ಬೆನ್ನು ನೋವು ಶುರುವಾಯಿತು. ಆಗ ಡಾಕ್ಟರ್ ನನಗೆ "ನೀವು ತುಂಬಾ ವೀಕ್ ಆಗಿದ್ದೀರಾ. ಮಗುವಿಗೆ ನಿಮ್ಮ ಹಾಲು ಕೊಡಬೇಡಿ" ಎಂದರು. ಅದರಿಂದ ನನ್ನ ಆರೋಗ್ಯ ಸ್ವಲ್ಪ ಸುಧಾರಿಸಿದರೂ ಬೇಬಿಯ ಆರೋಗ್ಯ ಮತ್ತಷ್ಟು ಕೆಟ್ಟಿತು. ಅವಳನ್ನು ನೋಡಿಕೊಳ್ಳುವುದೇ ಕಷ್ಟ ಆಗುತ್ತಿತ್ತು, ಅಲ್ಲಿಯ ತನಕ ನಾನು ಮನೆ ಕೆಲಸದವರನ್ನು ನೇಮಿಸಿಕೊಂಡಿರಲಿಲ್ಲ, ಆದರೆ ನನ್ನ ಎರಡನೇ ಮಗಳು ಹುಟ್ಟಿದ ಮೇಲೆ ಕೆಲಸದಾಕೆಯನ್ನು ನೇಮಿಸಿಕೊಂಡೆ.

ಲಂಕೇಶರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಲೆಕ್ಚರ್ ಆಗಿದ್ದರು. ಅವರು ಆ ಕಾಲೇಜಿನಲ್ಲೂ ಸ್ವಲ್ಪ ಗಲಾಟೆ ಮಾಡಿಕೊಂಡರು. ಒಮ್ಮೆ ಒಂದು ಹುಡುಗ ಪರೀಕ್ಷೆಯಲ್ಲಿ ಕಾಪಿ ಮಾಡುತ್ತಿದ್ದಾಗ ಲಂಕೇಶರು ಅವನ ಕೈಹಿಡಿದು ಎಳೆದು ಆಚೆ ನೂಕಿದರು. ಇನ್ನೊಮ್ಮೆ ಯಾರೋ ಎಂಎಲ್‌ಎ ಮಗ ಇವರ ಸ್ಕೂಟರ್ ಮೇಲೆ ಕುಳಿತು ಮಾತಾಡುತ್ತಿದ್ದನಂತೆ. ಲಂಕೇಶರು "ನಿಮಗೆ ಬೇರೆ ಎಲ್ಲೂ ಕುಳಿತುಕೊಳ್ಳಲು ಜಾಗ ಇಲ್ಲವೇನು, ನನ್ನ ಸ್ಕೂಟರ್ರೇ ಬೇಕಿತ್ತ" ಅಂತ ಅವನಿಗೂ ಎರಡು ಬಾರಿಸಿದ್ದರು.

ಮನೆ ಕೆಲಸ, ಮಕ್ಕಳ ಕೆಲಸ ಎಂದು ನಾನು ಇರುವಾಗಲೇ ಇವರು ಕಾಲೇಜು, ಸಾಹಿತ್ಯ ಎಂದೆಲ್ಲ ಸುತ್ತಾಡುತ್ತಿದ್ದರು. ಲಂಕೇಶರು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ತಂದು ಮನೆಯಲ್ಲಿ ಹಾಗೆ ಇಟ್ಟಿರುತ್ತಿದ್ದರು. ನಮ್ಮ ಮಕ್ಕಳು ಎಲ್ಲಿ ಅವುಗಳನ್ನು ಹಾಳು ಮಾಡಿಬಿಡುತ್ತಾರೋ ಅಂತ ಯಾವಾಗಲೂ ರೂಮ್ ಬಾಗಿಲನ್ನು ಬೋಲ್ಟ್ ಮಾಡಿರುತ್ತಿದ್ದೆ.

ಬೇಬಿಗೆ ಆಗಾಗ ಜ್ವರ ಬಂದು ರಾತ್ರಿ ಅಳುತ್ತಿದ್ದಳು. ಆಗ ಲಂಕೇಶರ ನಿದ್ದೆ ಹಾಳಾಗಿ "ಮಕ್ಕಳನ್ ರೂಮ್‌ನಲ್ಲಿ ಮಲಗಿಸಿಕೋ" ಎಂದ ನಮ್ಮ ಮನೆಯಲ್ಲಿ ಇದ್ದದ್ದು ಒಂದೇ ಆದ್ದರಿಂದ ನಾನು ಮತ್ತು ಮಕ್ಕಳು ಹ ಬೇರೆ ಮಲಗಲು ಶುರು ಮಾಡಿದೆವು.

ಜರ್ನಲಿಸ್ಟ್ ಕಾಲೋನಿ ಹತ್ತಿರ ಆ ಟಾಕೀಸ್ ಇತ್ತು. ಲಂಕೇಶರು ಮತ್ತು ನಾನು ಆ ಟಾಕೀಸಿನಲ್ಲಿ ಪಿಕ್ಚರ್ ನೋಡಲು ಹೋಗುತ್ತಿದ್ದೆವು ಒಂದು ಕನ್ನಡ ಸಿನಿಮಾ ನೋಡಲು ಹೋಗಿದ್ದೆ ಕಣ್ಣೀರಿನ ಚಿತ್ರ. ಯಥಾಪ್ರಕಾರ ಅದು ಸಿನಿಮಾ ಗೊತ್ತಿದ್ದರೂ ನಾನು ಅದನ್ನು ನೋಡುತ್ತ ಅಳುತ್ತಾ ಆದರೆ ಲಂಕೇಶರಿಗೆ ಬೋರ್ ಹೊಡೆಯಿತು. "ಬಾರ ಹೋಗೋಣ. ಇದನ್ನೇನು ನೋಡೋದು" ನಾನು "ಇರ್ರಿ ಹೋಗೋಣ" ಎಂದೆ. ಆಗ ಅವರು ಬರಲ್ಲಾ ಅಂದ್ರೆ ನಿನ್ನನ್ನ ಇಲ್ಲೇ ಬಿಟ್ಟು ನಾನು ಹೋಗ್ತೇನೆ. ಬರ್ತಿಯೋ ಇಲ್ಲವೋ?" ಎಂದರು ಹಾಗೇ ಮಾಡುವವರು ಅಂತ ಗೊತ್ತಿದ್ದರಿಂದ ಸಿನಿಮಾಕ್ಕೆ ಮನೆಗೆ ಬಂದೆವು.

****

ಲಂಕೇಶರ ಹೊರಗಡೆಯ ಖರ್ಚುಗಳು ಜ ತೊಡಗಿದವು. ಕುಡಿಯುವುದು, ಸಿಗರೇಟ್ ಸೇದ ಜಾಸ್ತಿ ಆಗಿತ್ತು, ಅವರು ಒಂದು ದಿನ ಮನೆಗೆ ಅವರ ಕೈಯಲ್ಲಿನ ಉಂಗುರ ಇರಲಿಲ್ಲ, ಅದನ ಮದುವೆಯಲ್ಲಿ ನನ್ನ ಅಪ್ಪಯ್ಯ ಕೊಟ್ಟಿದ್ದರು. " ಏನಾಯಿತು?" ಅಂತ ಕೇಳಿದೆ. "ದುಡ್ಡಿರಲಿಲ್ಲ, ಎಂದರು. ಆದರೆ ಒಡವೆ ಬಗ್ಗೆ ಎಂದೂ ಅವರೊಂ ಜಗಳ ಆಡಿರಲಿಲ್ಲ, ಸಾಲ ಮಾಡುವುದ ಇಷ್ಟವಿರಲಿಲ್ಲವಾದ್ದರಿಂದ ಸಾಲ ಮಾಡುವುದಕ್ಕಿಂತ ಹೋದರೇನಂತೆ ಎಂದು ಸುಮ್ಮನಾದೆ.

ನನ್ನಕ್ಕನ ಓರಗಿತ್ತಿ (ನನ್ನ ಭಾವನ ತಮ್ಮನ ಹೆಂಡ ಮತ್ತು ನಾನು ತುಂಬಾ ಕ್ಲೋಸ್ ಆದೆವು. ಅವಳು ಕೆಲಸ ಮುಗಿಸಿ ನಮ್ಮ ಮನೆಗೆ ಬರುವುದು, ನಾ ಮನೆಗೆ ಹೋಗುವುದು ನಡೆಯುತ್ತಿತ್ತು. ಶಾಂತಾ ಮ ಆಕೆಯ ಮನೆಯ ಹಿಂದಿನ ವಠಾರದ 11 ಕರೆದುಕೊಂಡು ಸಿನಿಮಾ, ಲಾಲ್‌ಭಾಗ್, ಕಬ್ಬನ್ ಎಂದೆಲ್ಲ ಹೋಗುತ್ತಿದ್ದೆವು. ಅದನ್ನು ನೋಡಿ ವ "ನಮ್ಮ ಇಂದೂಗೆ 12 ಮಕ್ಕಳಾಗಲಿ" ಎಂದು ಮಾಡುತ್ತಿದ್ದರು.

ಸತ್ಯು ನಿರ್ದೇಶಿಸಿದ್ದ 'ಗರಂ ಹವಾ' ಸಿನಿಮಾ ಲಂಕೇಶರು ಮತ್ತು ನಾನು ಅದನ್ನು ನೋಡಲು ನನಗೆ ಹಿಂದಿ ಅರ್ಥವಾಗುತ್ತಿತ್ತು, ಆದರೆ ಲಂಕೇಶರ ಅಷ್ಟು ಚೆನ್ನಾಗಿ ಬರುತ್ತಿರಲಿಲ್ಲ, ಸಿನಿಮಾದ ಅರ್ಥವಾಗದಿದ್ದರೆ ನನ್ನನ್ನು ಕೇಳುತ್ತಿದ್ದರು. 'ಗರಂ ಹ ಚೆನ್ನಾಗಿತ್ತೆಂದರೆ ನಾನು ಆ ವರ್ಷ ಅದಕ್ಕೆ ಪ್ರಶಸ್ತಿ ಎಂದುಕೊಂಡಿದ್ದೆ, ಆದರೆ ಬರಲಿಲ್ಲ.

ಮುಂದುವರೆಯ

....11ನೇ ಪುಟದಿಂದ

ಈ ಪ್ರದೇಶಗಳು ಕಬ್ಬಿಣದ ಅದಿರಿನ ಭಾರೀ ಖಜಾನೆಗಳಾಗಿದ್ದವು. ಮತ್ತು ರವಿಯ ಪೆನುಕೊಂಡ ಕ್ಷೇತ್ರದ ಆಜುಬಾಜಿನ ಏರಿಯಾಗಳಿವು. ವೈಎಸ್‌ಆರ್ ಹಾಗೂ ಜನಾರ್ದನ ರೆಡ್ಡಿ ತಮ್ಮ ಕಂಟ್ರೋಲಿಗೆ ಸಿಗದಿದ್ದ ಪೆನುಕೊಂಡದಲ್ಲಿ ಎಲೆಕ್ಷನ್‌ಗೆ ನಿಂತಿದ್ದ ಪೆರಿಟಾಲ ರವಿಯ ಹೆಂಡತಿ ಸುನೀತಾಳನ್ನು ಸೋಲಿಸಲು ಶತಪ್ರಯತ್ನ ನಡೆಸಿ ವಿಫಲರಾದರು. ಪೆರಿಟಾಲ್ ರವಿಯ ಪ್ರಾಣಸ್ನೇಹಿತನಾಗಿದ್ದ ಚಮನ್ ಇದ್ಯಾವುದನ್ನೂ ಮರೆತಿಲ್ಲ. ಇನ್‌ಫ್ಯಾಕ್ಟ್ ರಾಯಲಸೀಮಾದ ರಕ್ತ ರಾಜಕೀಯದಲ್ಲಿ ಹಳೆಯ ಕಹಿ ಘಟನೆಗಳನ್ನು ಮರೆಯುವುದಾಗಲಿ, ನಡೆದ ಹತ್ಯೆಗಳಿಗೆ ಕ್ಷಮೆಯಾಗಲಿ ಇರುವುದಿಲ್ಲ, ಅಲ್ಲೇನಿದ್ದರೂ ಲೆಕ್ಕ ಚುಕ್ತಾ ಆಗುವುದು ಹೊಸ ಕೊಲೆಗಳ ಮೂಲಕ ಮಾತ್ರ...

ಜೈಲಿಗೆ ಬಂದ ಚಮನ್

ಪೆರಿಟಾಲ್ ರವಿ ಕೊಲೆ ಕೇಸಿನ ತನಿಖೆ ನಡೆಸಿದ್ದು ಸಿಬಿಐ. ಇತ್ತೀಚೆಗೆ ಈ ಕೇಸಿನ ತೀರ್ಪು ಬಂದಿದ್ದು ನಾರಾಯಣ ರೆಡ್ಡಿ ರೇಕಿನಾಯ್ಯ, ರಂಗನಾಯ್ಕಲು ಮತ್ತಿತರ ಎಂಟು ಮಂದಿಗೆ ಜೀವಾವಧಿ ಶಿಕ್ಷೆಯಾಗಿದೆ.

ಆದರೆ ರವಿಯ ಗ್ಯಾಂಗ್‌ನ ರೋಷ ಅದೆಷ್ಟಿತ್ತೆಂದರೆ ಕೋರ್ಟು ತೀರ್ಪು ಬರುವ ಮೊದಲೇ ಮದ್ದೆಲಚೆರವು ಶ್ರೀನು, ಒಬಳರೆಡ್ಡಿ, ರಮಣಾ ರೆಡ್ಡಿ ಕೊಂಡಾರೆಡ್ಡಿಯನ್ನು ಕೊಲೆ ಮಾಡಿಬಿಟ್ಟರು. ಅದರಲ್ಲೂ ಮೊದ್ದು ಸೀನುನನ್ನು 2008ರ ನವೆಂಬರ್ 9ರಂದು ಅನಂತಪುರ ಜೈಲಿನಲ್ಲೇ ಕೊಂದುಹಾಕಿದರು.

ಇದಾದ ನಂತರ ನಡೆದದ್ದೇ ಮದ್ದಿಲಚೆರವು ಸೂರಿಯ ಕೊಲೆ. ನೂರಾರು ಸೆಕ್ಯೂರಿಟಿ ಗಾರ್ಡುಗಳನ್ನಿಟ್ಟುಕೊಂಡು ಓಡಾಡುತ್ತಿದ್ದ ಸೂರಿಯ ಜೊತೆಯಲ್ಲೇ ಇದ್ದ ನಂಬಿಕಸ್ಥ ಬಂಟ ಭಾನುಕಿರಣ್, ಸೂರಿ ಕಾರಿನೊಳಗೆ ಕೂತಿದ್ದಾಗಲೇ ತಲೆಗೆ ಶೂಟ್ ಮಾಡಿ ಕೊಂದುಹಾಕಿದ್ದ. ಇದು ಪೆರಿಟಾಲ ರವಿಯ ಹತ್ಯೆಗೆ ಪ್ರತೀಕಾರದ ಕೊಲೆ! ರವಿಯ ಗ್ಯಾಂಗ್‌ಸ್ಟರ್‌ಗಳಾದ ಚಮನ್, ಮೊಪುಲ ಸುರೇಶ್, ಹುಸೇನ್ ಅದೆಂತಾ ಡೇಂಜರಸ್ ಎಲಿಮೆಂಟುಗಳೆನ್ನುವುದು ಸೂರಿಯ ಕೊಲೆಯಲ್ಲಿ ಸಾಬೀತಾಗಿದೆ. ಈಗ ಕಾಲಚಕ್ರ ಇನ್ನೊಂದು ಸುತ್ತು ತಿರುಗಿ ಬಂದಿದೆ. ವೈಎಸ್‌ಆರ್ ಹೆಲಿಕಾಪ್ಟರ್ ಆಕ್ಸಿಡೆಂಟ್‌ನಲ್ಲಿ ಸತ್ತ ಜಗನ್‌ಗೀಗ ಅಧಿಕಾರವಿಲ್ಲ, ಆಂಧ್ರದ ಕಾಂಗ್ರೆಸ್ ಸರ್ಕಾರಕ್ಕೂ ಈಗ ಜಗನ್ ಶತ್ರುವಾಗಿದ್ದಾನೆ. ಜಗನ್‌ನ ಗೆಳೆಕಾರ ಜನಾರ್ದನ ರೆಡ್ಡಿ ಜೈಲುಸೇರಿದ್ದಾನೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಪೆರಿಟಾಲ ರವಿಯ ಗ್ಯಾಂಗ್‌ನ ಶತ್ರುಗಳೀಗ ವೀಕ್ ಆಗಿದ್ದಾರೆ. ನೂರಾರು ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ರವಿಯ ಗ್ಯಾಂಗ್ ಮತ್ತೆ ತಲೆಯೆತ್ತಲು ಇದು ಸಕಾಲವಲ್ಲವೇ?

ಹಾಗಾಗಿಯೇ ಚಮನ್, ಸುರೇಶ್ ಎಲ್ಲರೂ ತಮ್ಮತಮ್ಮ ಅಡಗುತಾಣಗಳಿಂದ ಹೊರಬರುತ್ತಿದ್ದಾರೆ. ಈಗ್ಗೆ ಕೆಲ ತಿಂಗಳ ಹಿಂದೆ ಮೊಪುಲ ಸುರೇಶ್‌ನನ್ನು ಆಂಧ್ರ ಪೊಲೀಸರು ಗುಜರಾತ್‌ನಲ್ಲಿ ಬಂಧಿಸಿದ್ದರು. ಈಗ ಚಮನ್ ತಾನಾಗಿಯೇ ಸರೆಂಡರ್ ಆಗಿದ್ದಾನೆ. ಪೆರಿಟಾಲ್ ರವಿಯ ಪತ್ನಿ ಶಾಸಕಿ ಸುನೀತ, ಯಾರೋ ಮಂತ್ರಿಯೊಬ್ಬನಿಗೆ ಹೇಳಿ ಚಮನ್‌ನ ಶರಣಾಗತಿಗೆ ಅನುಕೂಲ ಮಾಡಿಕೊಟ್ಟಿದ್ದಾಳೆ.

ಮೊನ್ನೆ ರವಿ ಕೊಲೆಯ ತೀರ್ಪು ಪ್ರಕಟವಾದಾಗ 'ನನ್ನ ಗಂಡನನ್ನು ಕೊಲ್ಲಿಸಿದ್ದೇ ವೈಎಸ್‌ಆರ್-ಜಗನ್' ಅಂತ ಪುನಃ ಆಕ್ರೋಶದ ಮಾತುಗಳನ್ನು ಆಡಿದ್ದಾಳೆ.

ಅಷ್ಟೇ ಅಲ್ಲ 'ಚಮನ್ ಈಗ ವಾಪಸ್ ಬಂದಿರೊದು ನನಗೆ ಬ ಅನ್ನುತ್ತಿದ್ದಾಳೆ. ಈ ಚಮನ್ ಊಹಾತೀತ ವಿಧಾನಗಳನ್ನು ಹುಡುಕಿ ಬಲಿಹಾಕಿದವನು. ಪತ್ನಿ ರಮಿಜಾ ಬಿ, ಅಣ್ಣ ಬುಡೇನ್ ಸಾಬ್ ಎಲ್ಲಾ ಪೆರಿಟಾಲ ಫ್ಯಾಮಿಲಿಯ ರಕ್ಷಣೆಗಾಗಿಯೇ ಬಡಿದಾಡಿದವನು. ಮಗ ಮಾಡಿಕೊಂಡಾಗಲೂ ನೋಡಲು ಬರದವನು. ಪೆರಿಟಾಲ್ ರವಿ ಹತ್ತಿ ಸಂಸ್ಕಾರಕ್ಕೂ ಬಾರದಿದ್ದವನು.

ಈಗ ಬಂದಿದ್ದಾನೆ....!

ಹಾಗೆ ತಣ್ಣಗೆ ಬಂದು ಈಗ ಜನಾರ್ದನ ರೆಡ್ಡಿಯೂ ಇರುವ ಚ ಜೈಲಿನ ಒಳಕ್ಕೆ ಕಾಲಿಟ್ಟಿದ್ದಾನೆ.

ಜನಾರ್ದನ ರೆಡ್ಡಿ ಬೆಚ್ಚಿಬಿದ್ದಿದ್ದಾನೆ.

'ಆರೋಗ್ಯ ಸರಿಯಿಲ್ಲ, ಅದಕ್ಕೆ ಶರಣಾದೆ' ಎಂದು ಚಮನ್ ಹೇ ಅದನ್ನು ಯಾರೂ ನಂಬುವುದಿಲ್ಲ.

ಪೆರಿಟಾಲ ರವಿಯನ್ನು ಕೊಲ್ಲಿಸಿದವರು ಬದುಕಿರುವವರೆಗೂ ಸುಮ್ಮನಿರುವವನಲ್ಲ ಎಂಬುದು ಅವನ ಶತ್ರುಗಳಿಗೆ ಗೊತ್ತಿದೆ.

ರಾಯಲಸೀಮಾದಲ್ಲಿ ಪೆರಿಟಾಲ ರವಿಯ ಸಾಮ್ರಾಜ್ಯವನ್ನು ಮುರಿ ವೈಎಸ್‌ಆರ್-ಜಗನ್ ಗ್ಯಾಂಗ್‌ನಲ್ಲಿ ಜನಾರ್ದನ ರೆಡ್ಡಿಯ ಕೈವಾಡವೂ ಕಣ್ಣೆದಿರೇ ಶತ್ರು ಬಂದು ಕುಳಿತಿರುವಾಗ.

ಜನಾರ್ದನ ರೆಡ್ಡಿಗೆ ಪ್ರಾಣಭಯವಾಗದೆ ಇನ್ನೇನು?

ಪೇಜಾವರ ಪ್ರಾರಂಭ ಮಾಡಿರೋ ದಸರಕ್ಕೆ ಕಳೆನೇ ಇಲ್ಲ

...ಈ ಸತಿ ದಸರ ಅಂತ ಕಳೇದಾಗಿರದಿಲ್ಲ ಕಣ ...ಸ" ಎಂದ ಉಗ್ರಿ. ಕಾಳಮಾವನಿಂದ ಇದಕ್ಕೆ ...ರವೇ ಬರಲಿಲ್ಲ.

...ಕಾಲ ನೋಡಿದ್ರೆ ಉರಿಬ್ಯಾಸಗೆ ...ಡಿದಂಗಾಯ್ತದೆ. ಹಿಂಗಾದ್ರೆ ದಸರ ಯಾರ್ ...ಚಕ್ಕೋದರೂ" ಎಂದ ಸೀರ.

ಕಷ್ಟಪುರಾಣ

ಬಿ. ಚಂದ್ರೇಗೌಡ

...ಅದೂ ಒಂದು ಕಾರಣ. ದಸರ ಯಾರು ...ಟನೆ ಮಾಡಿದ್ರು ಗೊತ್ತೇನೋ?"

...ನ್ಯಾರು, ಮಾರಾಜನ ಮಗ ಮಾಡಿರತನೆ."

...ಮಾರಾಜನ ಮಗಲ್ಲ ಕಣೋ. ಆ ಪೇಜಾವರನ ಉದ್ಘಾಟನೆ ಮಾಡಿಸ್ಯವುರೆ. ಅದಕೆ ದಸರಕೆ ಕಳೆ ...ವಂತೆ."

"ಬರಗಾಲ ಬಂದಿರದ್ರಿಂದ ಕಳೆ ಬಂದಿಲ್ಲ ಅನ್ನು" ಎಂದಳು ಜುಮ್ಮಿ.

"ಅಂಗಲ್ಲ ಕಣೇ, ಈ ಪೇಜಾವರ ಹೇಳಿ ಕೇಳಿ ಕೆಲುವು ಜನಾಂಗಕ್ಕೆ ಆಗದೋನು. ಅವುನಿಗೆ ದಲಿತ್ರ ಕಂಡ್ರೆ ಅಷ್ಟಕಷ್ಟೆ. ಇನ್ನ ಸಾಬರ ಕಂಡ್ರಾಗದಿಲ್ಲ. ಅಂತಾದ್ರಲ್ಲಿ ಇಂಥೊನ್ನ ಕರದು ದಸರದ ದೀಪ ಹಚ್ಚಿಸಿದ್ರೆ ಹಿಂಗೆ ಆಗದು."

"ಕ್ಕಳಜಾತಿ ಕಂಡ್ರೆ ಆಕ್ಕರೆ ಮಾಡ್ತನೆ, ಅವ್ರುರ ಕೇರಿಗೋಯ್ತನೆ ಅಂತ ನೀನೇ ಹೇಳ್ತಿದ್ದಲ್ಲಾ" ಎಂದ ಕಾಳಮಾವ.

"ಅವ್ನಲ್ಲ ಡೋಂಗಿ ನಡವಳಕೆ. ಸುಳ್ಳು ಮಾತು. ಯಾರೂ ಈ ಪೇಜಾವರನ್ನ ನಂಬು ಬ್ಯಾಡಿ ಅಂತ ನಿಡುಮಾಮಿಡಿ ವೀರಭದ್ರ ಸ್ವಾಮಿ ಹೇಳ್ಯವುರೆ."

"ಈರಭದ್ರ ಸ್ವಾಮಿ ಯಾರೂ?"

"ವೀರಭದ್ರಸ್ವಾಮಿ ವಿಷಯ ಹಿಂದೆ ಹೇಳಿದ್ದೆ ಕಣಮಾವ. ಆ ಸ್ವಾಮಿ ಮಾತಾಡಿದ್ರೆ ಯಲ್ಲಾ ಸ್ವಾಮಿಗಳೂ ತಲೆ ತಗ್ಗಿಸಿಕಬೇಕು ಅಂಗೆ ಮಾತಾಡ್ತರೆ."

"ಅದೇನು ಮಾತಾಡ್ಯರೂ?"

"ಈಗಿನ ಸ್ವಾಮಿಗಳ್ಯಾರೂ ನಿಜವಾದ ಸ್ವಾಮಿಗಳಲ್ಲ. ತಲಿಗೆ ಕಿರೀಟ ಹಾಯ್ಕತ್ತರೆ, ಐಷಾರಾಮಿ ಕಾರಲ್ಲಿ ಓಡಾಡ್ತರೆ, ಸುಖದ ಸುಪ್ಪತ್ತಿಗೆ ಮ್ಯಾಲೆ ಕುತಗಂಡು ರಗತಮುಷ್ಠಿ ಕಾಲು ತಿಂತರೆ, ರಾಜಕಾರಣ ಮಾಡ್ತರೆ. ಇನ್ನ ಇವುರು ಬ್ರಹ್ಮಚಾರಿಗಳು ಅಂತ ಹೇಳಿಕಳದ್ಯಲ್ಲ ಸುಳ್ಳು. ಇವುರನ್ನೆಲ್ಲ ಬೀಜ ಹೊಡದು ಸ್ವಾಮಿ ಮಾಡದು ವಳ್ಳೆದು ಅಂತ ಬೈತರೆ ಕಣಮಾವ."

"ಅವುನು ಸ್ವಾಮಿಯಾಗಿದ್ದ ಕಂಡು ಅಂಗ್ಯಲ್ಲ ಬೋದರೆ?"

"ಬೈಯ್ಯದಲ್ಲ, ಇರೋ ಮಾತೇಳ್ತರೆ. ಆ ಪೇಜಾವರನ್ನಂತೂ ಆಗ್ಲಿಂದ ಕಾದ್ತರೆ. ಅವುರಂತೂ ಯಂತಾ ಇಬ್ಬಂದಿ ಸ್ವಾಮಿ ಅಂತೀ, ಏನಾರ ಮಾಡಿ ಉಡುಪಿಯಿಂದ ಕನಕದಾಸನ್ನ ಕಾಲ್ತಗಸಬೇಕು ಅಂತ ಕನಕನ ಕಿಂಡಿನೆ ನವಗ್ರಹ ಕಿಂಡಿ ಅಂತನೆ. ಕುರುಬ್ರು ಗುಟುರಾಕಿದೇಟಿಗೆ ಕನಕ ನವಗ್ರ ಕಿಂಡಿ ಅಂತನೆ. ಅವುನ ಮಾತ ನೋಡಿದ್ರೆ ಗುಳ್ಳೆನರಿ ಮಾತಾಡಿದಂಗಾಯ್ತದೆ. ಅಂಥೋನ್ನ ಕರದು ದಸರ ಹಬ್ಬದ ದೀಪ ಹಚ್ಚಿಸಿದ್ರೆ ಸಾಬರ ಬಂದರೆ ಮಾವ ದಸರಕೆ?"

"ಸಾಬರ್‍ಯಾಕ್ ಬರದಿಲುವುಲ?"

"ಈ ದಸರಾ ಹಬ್ಬ ಅದಲ್ಲ ಮಾವ, ಇದು ಮಾತ್ರ ಸಕಲಿಷ್ಟು ಜಾತಿ ಧರ್ಮದೋರೂ ಬಂದು ನೋಡೋ ಹಬ್ಬ. ಸಾಬರೆಂಗಸ್ರು ಮನೆಬುಟ್ಟು ಹ್ವಂಡದೆ ಈ ಹಬ್ಬದಲ್ಲಿ. ಅಂತ ಹಬ್ಬದ ಉದ್ಘಾಟನೆ ಮಾಡಬೇಕಾದ್ರೆ. ಯಲ್ಲಾ ಜನಗಳೂ ಗೌರವ ಕೊಡೋ ಅಂತ ದೊಡ್ಡ ಮನುಸುನ್ನ ಕರಿಬೇಕಾಗಿತ್ತು."

"ಅಂಥೋರೀಗ್ಯಾರಿದ್ದರ್ಲ?"

"ಅಯ್ಯೋ ಬೇಕಾದೋಟು ಜನವುರೆ ದ್ವಡಪ್ಪ" ಎಂದುಕೊಂಡು ವಾಟಿಸ್ಸೆ ಬಂದ.

"ಯಾರಿದ್ದರೇಳ್ಳ ನೋಡನ" ಎಂದಳು ಜುಮ್ಮಿ.

"ಫ್ರೀಡಂ ಪೈಟರ್ ದೊರೆಸ್ವಾಮಿ ಕರಿಬವುದಿತ್ತು, ಗದುಗಿನ ತೋಂಟದಾರ್ಯನ್ನ ಕರಿಬವುದಿತ್ತು, ಬ್ಯಾಡ ನಮ್ಮ ಜಯಲಲ್ತನ್ನ ಕರಿಬವುದಿತ್ತು."

"ಆಹಹ ಜಯಲಲ್ತ ಬಂದಳೇನ್ಲ?"

"ಬರದೆ ಏನಕ್ಕ. ಅವುಳು ನಮ್ಮ ಆರಮನೆ ಸೊತ್ತು, ಅವುಳತ್ರ ಇರದು ನಮ್ಮ ಆರಮನೆ ವಡವೆ. ಅವುಳ ಕರೆದಿದ್ರೆ ತಮಿಳುನಾಡು ನಮ್ಮ ಸಮಂದ ಇನ್ನ ಇಂಪ್ರೂ ಆಗದು. ಅದು ಬುಟ್ಟು ಆ ಊದುಬತ್ತಿ ರಾಮದಾಸ ಹೋಗಿಹೋಗಿ ಬಲರಾಮನ ಗೋವಿನ ಕೈಲಿ ದಸರ ಸ್ಟಾರ್ಟ್ ಮಾಡಿಸಿರದ್ರಿಂದ ನಾನು ಈ ಸತಿ ದಸರಕ್ಕೆ ಹೋಗದಿಲ್ಲ."

"ನೀನೋಗದಿದ್ರೆ ದಸರ ನಿಂತತೇನ್ಲ?"

"ಮುಂದೆ ನಿಂತ್ರು ನಿಲ್ಲಬವುದು ಕಣಕ್ಕ, ಕಳದೊರ್ಸ ಜಂಬೂ ಸವಾರಿ ದಿನವೆಯ ರಾತ್ರಿ ಹನ್ನೊಂದು ಗಂಟಗೆ ಮೈಸೂರಲ್ಲಿ ಒಂದು ಪ್ರಾಣೀನೂ ತಿರಗಾಡದಂಗೆ ಖಾಲಿಯಾಗಿದ್ರು. ಪೊಲೀಸ್‍ನೋರು ಜನನ್ನೆಲ್ಲ ಮನಿಗೆ ಕಳಿಸಿದ್ರು. ಅದೇ ಹಿಂದಿನ ಕಾಲ್ದಲ್ಲಿ ಇಡೀ ರಾತ್ರಿ ದಸರ ನ್ಯಡಿಯದು. ಮುಂದೆ ಈ ಪೇಜಾವರನ ಅಷ್ಟಮಠದ ಸ್ವಾಮಿಗಳು ಬಂದು ದಸರಾ ಸ್ಟಾರ್ಟ್ ಮಾಡದೇ ಆದ್ರೆ ನಿಂತೂ ಹೋಗಬವುದು ಕಣಕ್ಕ."

"ಅದಕಿಂತ್ಲೂ ವಾಟಿಸ್ಸೆ ದೇಸಾನ್‍ದೇಸದ ಜನ ಬಂದು ಸೇರತಿದ್ದ ದಸರನಾ ಒಂದು ಜಾತಿ ಧರ್ಮದ ಹಬ್ಬ ಮಾಡ್ಯಾಕಿದರಲ್ಲೋ."

"ನಿಜಕಣೊ ಉಗ್ರಿ. ನಾನು ಅಂಗೇ ವಾಚ್ ಮಾಡ್ತ ಇದ್ದಿನಿ. ನಾಡಬ್ಬದೊಳಿಕೆ ನಾರೂ ಜನ ಸೇರಿಕಂಡು ನಮ್ಮಂಥೋರ್‍ಯಲ್ಲ ಊರಲ್ಲೇ ಇರಂಗಾಗ್ಯದೆ. ಅಪ್ಪಮಗ ಮಾಡಿರೊ ಅನಾಹುತ ಇಲ್ಲಿಗಂಟ ಬತ್ತದೆ ಅಂತ ನಾನು ಯೋಚನೆ ಮಾಡಿರಲಿಲ್ಲ."

"ಅಪ್ಪ ಮಗನ್ಯಾರ್ಲ?"

"ಅಪ್ಪ ಮಗ ಅಂದ್ರೆ ನೀನು ಪೇಜಾವರ, ರಾಮದಾಸ ಅಂತ ತಿಳಕಬೇಡ ಕಣಕ್ಕ. ಪಾಪ ಪೇಜಾವರನಿಗೆ ರಾಮದಾಸ ತೋರಿಸಿದ ಗುರಭಕ್ತಿ ಏನಪ್ಪಾ ಅಂದ್ರೆ ದಸರಾ ಉದ್ಘಾಟನೆಗೆ ಪೇಜಾವರನ ಕರದಿದ್ದು. ಯಾಕೆ ಅಂದ್ರೆ ರಾಮದಾಸನ್ನ ಮಂತ್ರಿ ಮಾಡಿಸಿದ್ದು ಇದೇ ಪೇಜಾವರನಂತೆ."

"ನೋಡಪ್ಪ ಸ್ವಾಮಿ ಮಾಡೋ ರಾಜಕಾರಣವ" ಎಂದ ಕಾಳಮಾವ.

"ರಾಜಕಾರಣಿ ರಾಜಕಾರಣ ಮಾಡದೆ ಇನ್ನೇನು ಮಾಡ್ತನೆ ದೊಡಪ್ಪ, ನಾನೇಳಕೊಂಟಿದ್ದು ದ್ಯಾವೇಗೌಡ ಅಂಡ್ ಸನ್ ಮ್ಯಾಟ್ರು. ಏನಪ್ಪಾ ಅಂದ್ರೆ ಅವುರು ರಾಜಕಾರಣದಿಂದ ಕಾಂಗ್ರೆಸ್ಸು ಕಾಲು ಮುರದ ಎತ್ತಿನಂಗೆ ಮನಿಗಿರದೆಯಾ."

"ಅದ್ಯಾಕ್ಲ ಅಂಗಂತಿ?"

"ನೋಡು ದೊಡಪ್ಪ, ಕೊಪ್ಪಳದಲ್ಲಿ ಕಾಂಗ್ರೆಸ್ಸು ಗೆಲ್ಲೊ ಓಟ್ ಜೆಡಿಎಸ್ ತಗಂಡು ಕಾಂಗ್ರೆಸ್ನ ಸೋಲಿಸ್ಯದೆ. ಮುಂದು ಕೂಡ ಅದೇ ಕ್ಯಲಸ ಮಾಡದ್ರಿಂದ ಈ ಅಪ್ಪ ಮಕ್ಕಳು ಕಾಂಗ್ರೆಸ್ಸು ತಲೆ ಎತ್ತಕ್ಕೆ ಬುಡದಿಲ್ಲ, ಎಡೂರಪ್ಪ ಲಿಂಗಾಯಿತ್ರನ್ನೆಲ್ಲ ಬಿಜೆಪಿ ಮಾಡಿರದ್ರಿಂದ ಅವನ ಹಿಡತದಿಂದ ಬಿಜೆಪಿಗೆ ಮುಕ್ತಿಯಿಲ್ಲ, ಬರ್ತಿನಿ ನನ್ನ ಪ್ರೆಂಡ್ ಬರ್ತಡೇ. ಮಟನ್ನ ಚಿಕನ್ ಮಾಡಿಸ್ಯವುನೆ. ಮಿಸ್ ಮಾಡಿಕಳಂಗಿಲ್ಲ" ಎಂದು ವಾಟಿಸ್ಸೆ ಹೊರಟ.


"ಇವತ್ತು ಗಾಂಧಿ ಜಯಂತಿಯಂತಲ್ಲಾ. ಸೂಳೆ ಮಕ್ಕಳು ಸಾಬರ ಬೈತಿರಿ. ಥೂ ನಿನ್ನಮ್ಮನ್ ಕಳ್ಳುಗಾತಕನನ್ನ ಮಕ್ಕಳ" ಎಂದು ಕಾಳಮಾವ ಉಗಿದ.



ಹಾಹೂ !

ಹೋದಸಲದ 'ಪತ್ರಿಕೆ'ಯಲ್ಲಿ ಎರಡು **superlatives** ನೋಡಿ ನಿಮಗೆ ಸೋಜಿಗವೆನ್ನಿಸಿರಬಹುದು. ನಾನು ಬಹಳ ... ಈ ವರ್ಷ ನಾನು ಕನ್ನಡದಲ್ಲಿ ಓದಿದ ಅನಂತ ಮೂರ್ತಿ, ತೇಜಸ್ವಿ, ವೈದೇಹಿ, ಭೈರಪ್ಪ ...ದವರೆಲ್ಲ ಪುಸ್ತಕಗಳನ್ನು ಮತ್ತೊಮ್ಮೆ ಪರಿಭಾವಿಸಿ ಕೆರೆಮನೆ ಶಿವರಾಮ ಹೆಗಡೆಯವರ ಜೀವನ ...ಮನ್ನು (ಅಂಜುತ್ತಲೇ) 'ಈ ವರ್ಷ ನಾನು ಓದಿದ ಅತ್ಯುತ್ತಮ ಪುಸ್ತಕ ಎನ್ನಿಸುತ್ತದೆ' ಎಂದು ... ಇಂಥ ಮಾತು ಅಪಾಯಕರ; ಹಾಗೆ ಬರೆದಾಗಲೆಲ್ಲ ಯಾವುದೋ ಒಂದೆರಡು ಪುಸ್ತಕಕ್ಕೆ ...ವಾಗಿಬಿಟ್ಟಿರುತ್ತದೆ. ನಮ್ಮಲ್ಲಿ ಒಳ್ಳೆಯ ಗದ್ಯವನ್ನು ಬರೆಯುವ ಬಗ್ಗೆ ಕೂಡ ಉತ್ಸಾಹವಿಲ್ಲದಿದ್ದಾಗ, ...ತ್ರೆಯನ್ನು ಪ್ರಾಮಾಣಿಕವಾಗಿ ಹೇಳುವ ಕುಶಲತೆ ಕೂಡ ಇಲ್ಲದಿದ್ದಾಗ-ನನ್ನ ಉತ್ಪ್ರೇಕ್ಷೆಯನ್ನು ...ಬಹುದು ಅನ್ನಿಸುತ್ತದೆ. ಆದರೆ ಒಂದೇ ಸಂಚಿಕೆಯಲ್ಲಿ ಎರಡು ಸಲ ಈ ತರಹದ ಉದ್ಗಾರ ...ಗ. ತೊಂದರೆಯಾಗಬಹುದು. ಅದೇ ಸಂಚಿಕೆಯಲ್ಲಿ ಶೂದ್ರ ಶ್ರೀನಿವಾಸ್ ಬರೆಯುತ್ತಾ 'ಏಣಗಿ ...ಈ ಶತಮಾನದ ಸ್ಮರಣೀಯ ವ್ಯಕ್ತಿ' ಎಂದು ಬರೆದಿದ್ದಾನೆ. ಅದು ಕೂಡ ನಿಜವಿರಬಹುದು; ...ಶತಮಾನದ ಬಗ್ಗೆ ಬರೆಯುವಾಗ ನಮ್ಮಲ್ಲಿ ಹುಂಬತನ ಮತ್ತು ಬೋಳೆತನ ಇರುವುದು ...ಾಗುತ್ತದೆ; ವರದಾಚಾರ್, ಮಹಮದ್ ಪೀರ್, ಗುಬ್ಬಿ ವೀರಣ್ಣ, ಗಂಗಾಧರರಾವ್, ಸುಬ್ಬಯ್ಯ ... ಮುಂತಾದವರೆಲ್ಲ ಇದ್ದಾಗ ಇಂಥ 'ಶತಮಾನದ' ಮಾತು ನಗೆ ತರಿಸುತ್ತದೆ. ಹಾಗೆ ಬರೆದ ...ಂದ ಮಾತ್ರ ಸವಕಲು 'ಚಿಂತನಾ ಎರಕ'ಗಳಾದ ಬಸವಣ್ಣ, ಅಲ್ಲಮ, ಗಾಂಧೀಜಿ, ಬುದ್ಧ ಇದರ ...ಂಗಗಳನ್ನು ನಿರೀಕ್ಷಿಸಬಹುದು. ನಾನು ಏನು ಹೇಳುತ್ತಿದ್ದೇನೆಂದರೆ, ನಾವೆಲ್ಲ ಜೀವವುಳ್ಳ ಮನುಷ್ಯರಂತೆ ...ಚಿಸುತ್ತಿದ್ದರೆ ನಮ್ಮ ಬರವಣಿಗೆ ಅನಗತ್ಯ ಉತ್ಪ್ರೇಕ್ಷೆಗಳಿಂದ ಮುಕ್ತವಾಗಿರುತ್ತದೆ; ಸಾಮಾಜಿಕ ...ಗಳಿಂದ ದೂರವಾಗಿರುತ್ತದೆ. "ಒಂದು ರೈತ ಕುಟುಂಬದಿಂದ ಬಂದು ತಮ್ಮ ವಿದ್ಯಾಭ್ಯಾಸವನ್ನು ... ಬಾಲ್ಯದಲ್ಲಿಯೇ ನಾಟಕದ ಗೀಳನ್ನು ಬೆಳೆಸಿಕೊಂಡದ್ದು ವಿಚಿತ್ರ ಎಂದು ಕರೆಯುದಕ್ಕಿಂತ ಅದ್ಭುತ ...ದು ವಾಸಿ." ಬಸವಣ್ಣ ಹುಟ್ಟಿದ ವರ್ಷವೇ ಖಚಿತವಾಗಿ ಗೊತ್ತಿಲ್ಲದಾಗ ಆತನನ್ನು ನಿನ್ನೆ ನೋಡಿದ ... "ಬಸವಣ್ಣನವರ ಲವಲವಿಕೆಯ ವ್ಯಕ್ತಿತ್ವ ಮುಂದೆ ನಿಂತಂತಿತ್ತು"; "ಬಾಳಪ್ಪನವರು ಸರ್ಕಾರದ ...ಸ್ಕಾರವನ್ನು, ಮತ್ತು ಒಂದು ಲಕ್ಷ ರೂಪಾಯಿ ಪಡೆದಿದ್ದಾರೆ"... ಹೀಗಿದೆ ಬರವಣಿಗೆಯ ರೀತಿ!

...ವಾಗಿ ಎದೆತುಂಬಿ ಬರೆಯುವ ಶೂದ್ರನೊಬ್ಬನ ಬಗ್ಗೆ ಇದು ಆಕ್ಷೇಪವಲ್ಲ; ಬಾಳಪ್ಪನವರನ್ನು ...ಲ್ಲಿ ಕೂಡ. ಬರವಣಿಗೆಯ ಗುಟ್ಟುಗಳು ಮತ್ತು ದೌರ್ಬಲ್ಯಗಳ ಬಗ್ಗೆ ಮಾತ್ರ ಹೇಳಿದ್ದೇನೆ.




ಕೆ.ವಿ. ಸುಬ್ಬಣ್ಣ

ನಮ್ಮ ಕೆ.ವಿ. ಸುಬ್ಬಣ್ಣ ಇದ್ದಲ್ಲಿ ಎಲ್ಲರಿಗೂ ಒಂದು ಬಗೆಯ ನೆಮ್ಮದಿ, ಧೈರ್ಯ ಇರುತ್ತದೆ. ಸುಬ್ಬಣ್ಣ ನೋಡಲು ತುಂಬ ಸೌಮ್ಯ ಮನುಷ್ಯ. ಆದರೆ ವ್ಯಕ್ತಿತ್ವವನ್ನು ತಡಕಿದರೆ ತುಂಬ ಗಟ್ಟಿ. ಇವರು ತಪ್ಪುತಪ್ಪಾಗಿ ಮಹಾ ಮೂರ್ಖ ಎನ್ನುವಂತೆ ಮಾತಾಡಿದ್ದು ಕೇಳಿದ್ದೇನೆ. ಈ ವರ್ಷದ ಮಾರ್ಚ್‌ನಲ್ಲಿ ಬೇಂದ್ರೆ ಬಗ್ಗೆ ಬೆಂಗಳೂರು ವಿಶ್ವವಿದ್ಯಾನಿಲಯ ಏರ್ಪಡಿಸಿದ್ದ ಸಂಕಿರಣದಲ್ಲಿ ಮಾತಾಡುತ್ತಾ ಬೇಂದ್ರೆಯವರ ಮೇಲೆ ವಿಶ್ವವಿದ್ಯಾನಿಲಯ ಸೆಮಿನಾರ್ ನಡೆಸಿ ಮಹಾ ಏನು ಕಡಿಯುತ್ತದೆ ಎಂಬಂತೆ ಮಾತಾಡಿದರು; ಒಮ್ಮೆ ಪೀಟರ್ ಬ್ರೂಕ್ ಕುರಿತು ಬರೆದದ್ದು ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಬಗ್ಗೆ ಮಾತಾಡಿದ್ದು-ಹೀಗೆ ಇವರ ಅಪದ್ಧಗಳ ಪಟ್ಟಿ ಮಾಡಬಹುದು. ವ್ಯಕ್ತಿಗಳನ್ನು ಕುರಿತು ಇಂದ್ರ, ಚಂದ್ರ ಎಂದು ಮಾತಾಡಿ ಸುಳ್ಳುಗಳ ನಾತ ಹಬ್ಬಿಸುವುದನ್ನು ತೋರಿಸಬಹುದು. ಇಷ್ಟೆಲ್ಲ ಇದ್ದರೂ ಈ ಸುಬ್ಬಣ್ಣ ಮಹಾ ಧೈರ್ಯ ಮತ್ತು ವಿವೇಕದ, ಮೂಲಭೂತವಾಗಿ ಜನತಂತ್ರದ ಮೌಲ್ಯಗಳು ಮತ್ತು ಸಾಂಸ್ಕೃತಿಕ ಒಳಿತುಗಳು ಇವುಗಳಿಗಾಗಿ ಏಕಾಗ್ರತೆಯಿಂದ ಚಿಂತಿಸಿದ, ವರ್ತಿಸಿದ ಮನುಷ್ಯ. ಸುಬ್ಬಣ್ಣನವರು ತುರ್ತು ಪರಿಸ್ಥಿತಿಯಲ್ಲಿ ತೋರಿದ ದಿಟ್ಟತನ, ಜಾತಿವಾದಿಗಳ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದ ಧೈರ್ಯ ಇವೆಲ್ಲವನ್ನು ಕಣ್ಣಾರೆ ನೋಡಿದವನು ನಾನು. ಮೊನ್ನೆ ಇವರು ದೇವೇಗೌಡರ ಸರ್ಕಾರದ ಪ್ರಶಸ್ತಿ ಹಗರಣ ಸಂದರ್ಭದಲ್ಲಿ ಪ್ರತಿಭಟಿಸಿದ್ದು ಸುಬ್ಬಣ್ಣನವರ ವ್ಯಕ್ತಿತ್ವಕ್ಕೆ ತಕ್ಕಂತಿದೆ. ಯಾವುದೇ ನೀತಿ, ನಿಯಮಗಳ ಬಗ್ಗೆ ಗೌರವವಿಲ್ಲದ ದೇವೇಗೌಡರಂಥವರು ಮಾಡುವ ಚಿಕ್ಕ ತಪ್ಪು ಎಂಥ ಅಪಾಯಕಾರಿಯಾದದ್ದು ಎಂಬುದನ್ನು ಸುಬ್ಬಣ್ಣನವರ ಕ್ರಿಯೆ ತೋರುತ್ತದೆ. ಮಹಾಜನತಂತ್ರವಾದಿಯಂತೆ ಪ್ರಶಸ್ತಿ ಸಮಿತಿಗೆ ಅಧ್ಯಕ್ಷರಾಗಲು ಕೇಳಿಕೊಂಡ ದೇವೇಗೌಡ ನಡೆದುಕೊಂಡದ್ದು ಒಬ್ಬ ಕೇಡಿ ರಾಜಕಾರಣಿಯಂತೆ. ಇವರಿಗೆ ಪ್ರಶಸ್ತಿ ಕೊಡುವುದು, ಅವರಿಗೆ ಗೌರವ ತೋರುವುದು -ಎಲ್ಲಾ ಒಂದೇ ಎಂದು ತಿಳಿದಂತಿರುವ ದೇವೇಗೌಡರಂಥವರು ಅಧಿಕಾರಕ್ಕೆ ಅರ್ಹರಲ್ಲ; ಅಂಥವರ ಬೇಕಾಬಿಟ್ಟಿ ವರ್ತನೆಯೇ ಅಪಾಯಕಾರಿ. ಇದನ್ನು ಸುಬ್ಬಣ್ಣ ಸಮರ್ಥವಾಗಿ ತೋರಿದರು.

ಹೆಗ್ಗೋಡಿನ ತಣ್ಣನೆಯ ವಾತಾವರಣದಲ್ಲಿ ಬೆಳೆದದ್ದು ಸುಬ್ಬಣ್ಣನವರ ಪ್ರತಿಭೆ. ಹೆಗ್ಗೋಡಿನಂಥ ಕಡೆ ಕಾಣುವ ಕಲೆಯ ವಾತಾವರಣ, ತ್ರಿಶಂಕು ಸೃಷ್ಟಿ ಎನ್ನಿಸುವಂಥ ಸ್ಥಿತಿ, ನೂರಾರು ಜನಕ್ಕೆ ದೊರೆತ ಜಟಿಲವೂ ವಿಶಿಷ್ಟವೂ ಆದ ಪ್ರಜ್ಞೆ-ಇವೆಲ್ಲ ಸುಬ್ಬಣ್ಣನವರ ವ್ಯಕ್ತಿತ್ವದ ಅಭಿವ್ಯಕ್ತಿಗಳು. ಸೂಕ್ಷ್ಮ ದೈಹಿಕ ಪ್ರಕೃತಿಯ ಸುಬ್ಬಣ್ಣ ಇನ್ನೂ ಹಲವಾರು ವರ್ಷ ಎಲ್ಲರಲ್ಲೂ ಅಚ್ಚರಿ, ಸಂತೋಷ, ಕಸಿವಿಸಿ ಹುಟ್ಟಿಸುವಂತಾಗಲಿ ಎಂದು ಹಾರೈಸಬೇಕಾದದ್ದು ನಮ್ಮ ಕರ್ತವ್ಯ.

-ನವೆಂಬರ್ 15, 1995



ಬಚ್ಚಿಡುವುದಕ್ಕಿಂತ ಬಿಚ್ಚಿಡುವುದೇ ಮೇಲು



ಎಚ್.ಎಲ್. ಕೇಶವಮೂರ್ತಿ

ಅಣಕ

ಕಾಯಿಲೆ ಮನುಷ್ಯನಿಗೆ ಬರದೆ ಮರಕ್ಕೆ ಬರುತ್ತದೆಯೇ ಎಂಬ ಮಾತಿದೆ. ರೋಗ ಬಂದೇ ಬರುತ್ತದೆ ಅಂದ ಹಾಗಾಯಿತು. ಇದು ಬಂದಾಗ ಬಹಿರಂಗಗೊಳಿಸುವುದು ಬುದ್ಧಿವಂತಿಕೆಯ ಲಕ್ಷಣ. ಸಂಸಾರ ಗುಟ್ಟು ವ್ಯಾದಿರಟ್ಟು ಎನ್ನುವ ಮಾತು ಇದನ್ನೇ ಸೂಚಿಸುತ್ತದೆ. ಆದರೆ ಬಹಳ ಜನರು ಇದನ್ನು ತಿಳಿಸಲು ಹಿಂಜರಿಯುತ್ತಾರೆ ಎಂಬುದು ಸತ್ಯ.

ರಾಜರುಗಳ ಕಾಲದಲ್ಲಿ ಅವರಿಗೂ ರೋಗ ಬರುತ್ತಿತ್ತು, ಕೆಲವೊಮ್ಮೆ ಮಾರಣಾಂತಿಕ ರೋಗದಿಂದಲೂ ನರಳಬೇಕಾಗುತ್ತಿತ್ತು, ದೊರೆ ರೋಗಿಷ್ಠನಾದರೆ ರಾಜ್ಯವೇ ರೋಗಗ್ರಸ್ತವಾದಂತೆ ಎಂಬ ನಂಬಿಕೆಗಿಂತಲೂ, ಶತ್ರು ರಾಜರಿಗೆ ತಿಳಿದರೆ ಅವರು ಯುದ್ಧ ಸಾರಬಹುದು! ಪುಂಡು ಪಾಳೇಗಾರರು ದಂಗೆ ಏಳಬಹುದು ಎಂಬ ಭಯವೇ ಬಹುವಾಗಿರುತ್ತಿತ್ತು. ಇದಕ್ಕಾಗಿ ರಾಜನ ರೋಗದ ವಿಷಯವನ್ನು ಗೋಪ್ಯವಾಗಿಡುವ ಪ್ರಯತ್ನ ಮಾಡುತ್ತಿದ್ದರು. ಇದರ ಪರಿಣಾಮ ಒಮ್ಮೊಮ್ಮೆ ತಿರುವು ಮುರುವು ಆಗುತ್ತಿದ್ದುದೂ ಉಂಟು!



ತಮ್ಮ ದೈನಂದಿನ ಕರ್ತವ್ಯ ನಿರ್ವಹಿಸುವಾಗ ಮಹಾರಾಜರು ಪ್ರಜೆಗಳಿಗೆ ದರ್ಶನ ನೀಡುವುದು ಅನಿವಾರ್ಯ ಆಗುತ್ತಿತ್ತು, ಆದರೆ ರೋಗಿಷ್ಠ ರಾಜ ಹಾಗೆ ಮಾಡುವಂತಿರಲಿಲ್ಲ, ಮಾಡಿದರೆ ಗುಟ್ಟು ಬಯಲಾಗುತ್ತಿತ್ತು, ಶಯ್ಯಾಗೃಹದ ಬಂಧಿಯಾಗಿರುವುದು ಅವರಿಗೆ ಅನಿವಾರ್ಯವೇ ಆಗಿತ್ತು, ದರ್ಬಾರಿಗೇ ಬರದ ರಾಜನ ಆರೋಗ್ಯ ಕುರಿತಂತೆ ಪ್ರಜೆಗಳಲ್ಲಿ ಗುಸುಗುಸು ಪ್ರಾರಂಭ ಆಗುತ್ತಿತ್ತು, ಹಾಗೆ ಆಗಿರಬಹುದು, ಹೀಗೆ ಆಗಿರಬಹುದು, ಆ ಕಾಯಿಲೆ ಆವರಿಸಿರಬಹುದು, ಭಯಂಕರ ರೋಗವೇ ಬಂದಿರಬಹುದು ಎಂದೆಲ್ಲಾ ಪುಕಾರು ಉಂಟಾಗುತ್ತಿತ್ತು, ಯಾರ ಭಯದಿಂದ ರೋಗವನ್ನು ಗೋಪ್ಯವಾಗಿಟ್ಟಿದ್ದರೋ ಅವರ ಗಮನಕ್ಕೆ ಬರುವುದು ತಡವಾಗುತ್ತಿರಲಿಲ್ಲ! ರೋಗ ಬಿಚ್ಚಿಡುವುದಕ್ಕಿಂತ ಬಚ್ಚಿಡುವುದೇ ಅನಾಹುತಕ್ಕೆ ದಾರಿಯಾಗುತ್ತಿತ್ತು!

ಪ್ರಜಾಪ್ರಭುತ್ವದ ಕಾಲದಲ್ಲಿ ಇದರಲ್ಲೇನಾದರೂ ಬದಲಾವಣೆಯಾಗಿದೆಯೇ?

ವಾಜಪೇಯಿ ಪ್ರಧಾನಿ ಆಗಿದ್ದ ಕಾಲ.

ಅವರಿಗೆ ಮಂಡಿನೋವು ಬಂತು. ನಡೆಯಲು ಆಗದ ಸ್ಥಿತಿ ತಲುಪಿದರು. ರಾಜಕಾರಣಿಗಳು ಇದನ್ನು ಜನರಿಂದ ಮರೆಮಾಚಿದರು.

247 ಚಾನೆಲ್‌ಗಳು ಬಯಲುಮಾಡಲಿಲ್ಲ!

ನೋವು ತಾಳಲಾಗದ ಪ್ರಧಾನಿ ಚಿಕಿತ್ಸೆಗೆ ಒಳಗಾದರು. ಶಸ್ತ್ರಚಿಕಿತ್ಸೆ ನಡೆಯಿತು. ಗುಣಮುಖರಾದರು. ಮೊದಲಿನಂತೆ ಓಡಾಡಲು ಸಾಧ್ಯವಿರಲಿಲ್ಲ, ವೀಲ್ ಚೇರ್ ಬಳಸುವುದು ಅನಿವಾರ್ಯವಾಯಿತು.

ವೀಲ್ ಚೇರ್ ಪ್ರಧಾನಿಯ ಚಿತ್ರ ಯಾವ ಪತ್ರಿಕೆಯಲ್ಲೂ ಬರಲಿಲ್ಲ; ಟಿವಿಗಳಲ್ಲೂ ಗೋಚರಿಸಲಿಲ್ಲ,

ಆಡಳಿತ ಪಾರದರ್ಶಕ ಆಗಿರಬೇಕು. ಪ್ರಧಾನಿ ಆದರ ಚುಕ್ಕಾಣಿ ಹಿಡಿದಿರುವವರು. ಇದಕ್ಕೆ ಅವರು ಸಮರ್ಥರೆ? ಅಸಮರ್ಥರೆ? ಇದನ್ನು ತಿಳಿಯುವ ಹಕ್ಕು ಪ್ರಜೆಗಳಿಗಿದೆ. ಆದರೆ ಆಡಳಿತ ಪಕ್ಷದವರು ಹಾಗಿರಲಿ. ವಿರೋಧ ಪಕ್ಷಗಳೇ ಇದರ ಬಗ್ಗೆ ಚಕಾರ ಎತ್ತುತ್ತಿಲ್ಲ!

ನೊಂದವರನ್ನು ಮತ್ತೆ ನೋಯಿಸಬಾರದು ಎಂಬ ಉದಾರತೆ ಇರಬೇಕು!

ಸೋನಿಯಾ ಗಾಂಧಿ ಡಿಫ್ಯಾಕ್ಟೊ ಪ್ರಧಾನಿ. ಯಾರಿಗೂ ಇದರಲ್ಲಿ ಅನುಮಾನವೇ ಇಲ್ಲ, ಪ್ರಧಾನಿಗೂ ಸಹ!

ರೋಗ ಬರುವುದು ಸಹಜ. ಸೋನಿಯಾಗೂ ಬಂದಿತು. ವಿದೇಶದಲ್ಲಿ ಚಿಕಿತ್ಸೆ ಪಡೆದರು.

ಅವರಿಗೆ ಬಂದಿರುವುದು ಎಂತಹ ಕಾಯಿಲೆ?

ಯಾರೂ ಬಾಯಿ ಬಿಡಲಿಲ್ಲ, ದಿನದ 24 ಗಂಟೆಗಳೂ ನಿಮ್ಮ ಸೇವೆಗೆ ಸಿದ್ಧ ಎನ್ನುವ ಚಾನಲ್‌ಗಳೂ ಸಹ!

ಗುಣಮುಖರಾಗಿ ಅವರು ದೇಶಕ್ಕೆ ಮರಳಿದ್ದು ಸುದ್ದಿಯಾಯಿತು ನಿಜ. ಆದರೆ ಅವರು ಇದುವರೆಗೂ ಸಾರ್ವಜನಿಕವಾಗಿ ಜನರಿಗೆ ಕಾಣಿಸಿಕೊಂಡಿಲ್ಲ. ಗುಣಮುಖರಾದ ನಂತರದ ಫೋಟೋ ಎಲ್ಲೂ ಬಂದಿಲ್ಲ, ನೋಡುತ್ತಿರುವುದೆಲ್ಲಾ ಹಳೇ ಫೋಟೋಗಳೇ!

ಈ ದೇಶದ ಆಗುಹೋಗುಗಳನ್ನು ನಿರ್ಧರಿಸುವ ನಾಯಕಿಯ ಆರೋಗ್ಯ ಜನತೆಗೆ ತಿಳಿಯುವಂತಿಲ್ಲ!

ಇದು ದೇಶದ ದೌರ್ಭಾಗ್ಯ ಅಲ್ಲದೆ ಮತ್ತೇನು?

ಬೀಸುವ ದೊಣ್ಣೆ ತಪ್ಪಿದರಾಯಿತು!

ಲಂಡನ್ನಿನ ಒಂದು ಹೆಂಗಸು.

ಬಾರೀ ದೇಹ. ದಡೂತಿ ಎನ್ನುವುದೇ ಸಮಂಜಸ.

ದೇಹ ಬಾರೀ ಆದರೂ ಹೃದಯ ಮಾತ್ರ ಸಣ್ಣದು.

ಅಲ್ಲಿ ನಿರುದ್ಯೋಗಿಗಳಿಗಾಗಿ ಸರ್ಕಾರದಿಂದ ಹಲವು ಯೋಜನೆ, ವಸ್ತುಗಳ ಬೆಲೆ ಮೇಲೆ ರಿಯಾಯಿತಿ ಅವರಿಗೆ.

ಇದರ ಸಂಪೂರ್ಣ ಲಾಭ ಪಡೆದಳು ಇವಳು.

ಇದರಲ್ಲೇನು ತೊಂದರೆ?

ಇವಳು ಉದ್ಯೋಗಿಯಾಗಿದ್ದಳು!

ಉದ್ಯೋಗದಲ್ಲಿದ್ದೂ ನಿರುದ್ಯೋಗಿಯಾಗಿದ್ದಳು ಈಕೆ!

ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಪೌಂಡು ವಂಚನೆ.

ವಂಚನೆ ಆರೋಪದ ಮೇಲೆ ಕೇಸಾಯಿತು.

ನ್ಯಾಯಾಲಯಕ್ಕೆ ಹಾಜರಾಗಬೇಕು.

ಅದು ಬಹುಮಹಡಿ ಕಟ್ಟಡದಲ್ಲಿತ್ತು!

ಇಷ್ಟು ಸಾಕಾಯಿತು ಇವಳಿಗೆ.

'ಕೋರ್ಟಿಗೆ ಹಾಜರಾಗಲು ಸಾಧ್ಯವಿಲ್ಲ' ಎಂದಳು.

ಯಾಕೆ ಸಾಧ್ಯವಿಲ್ಲವಂತೆ?'

'ಮಹಡಿ ಮೆಟ್ಟಲು ಹತ್ತಲಾರೆ.' ಇದು ಇವಳ ಸಬೂಬು.

ಬಸ್ ಡ್ರೈವರ್ ಆಗಿದ್ದವಳು. ಸಿಸಿ ಟಿವಿ ಚಾಲಕಿಯಾಗಿದ್ದವಳು. ಇವಳ ಸಬೂಬನ್ನು ನ್ಯಾಯಾದೀಶರು ಒಪ್ಪಲು ಸಿದ್ಧರಿರಲಿಲ್ಲ, ಮುಂದಿನ ವಾರ ಕಡ್ಡಾಯ ಬರುವಂತೆ ಸೂಚಿಸಿದರು.

ಈಕೆ ನಿಗದಿತ ದಿವಸ ಹೇಗೋ ಹೋದಳು. ಆದರೆ ಕೋರ್ಟಿನ ಒಳಕ್ಕೆ ಹೋಗಲಿಲ್ಲ, ಬಾಗಿಲಬಳಿಯೇ ಕುಳಿತಳು.

ಒಳಕ್ಕೆ ಯಾಕೆ ಹೋಗಲಿಲ್ಲ?

ಕೋರ್ಟಿನ ಬಾಗಿಲು ಇವಳ ದೇಹ ಹಿಡಿಸುತ್ತಿರಲಿಲ್ಲ!

ಏನು ಮಾಡಬೇಕು ನ್ಯಾಯಾದೀಶರು?

ಮೊಕದ್ದಮ್ಮೆ ಮುಂದೂಡಿದರು!

ಈ ಹೆಂಗಸಿಗಾಗಿ ಕೋರ್ಟ್ ಹಾಲ್ ತಾತ್ಕಾಲಿಕವಾಗಿ ಕೆಳಗಿನ ಅಂತಸ್ತಿನ ಕೊಠಡಿಗೆ ವರ್ಗವಾಯಿತು.

ಬಾಗಿಲು?

ಅದೂ ವಿಶಾಲವಾಗೆ ಇತ್ತು!

ಮೊಕದ್ದಮೆ ಮುಂದೂಡಲು ಎಂತಹ ಚಾಲೂಕಿತನ!

ಕೋರ್ಟಿಗೆ ಹಾಜರಾಗಲೇ ಬೇಕಾಗಿಬಂದ ರಾಜಕಾರಣಿಗಳು ಮಾಮೂಲಿ ರೋಗಗಳ ಜಾಡನ್ನು ಬಿಟ್ಟು ಇಂತಹ ವಿನೂತನ ಮಾರ್ಗಗಳನ್ನು ಹುಡುಕಬಾರದಾ....

ಎಲ್ಲಾ ಹೆಸರಿನಲ್ಲೇ!

'ಬೇವ್‌ಕೂಫ್.'

'ಬೇವ್‌ಕೂಫ್ ಬಾದ್‌ಷಾ.'

'ಶ್ರೀ ಬೇವ್‌ಕೂಫ್.'

'ಮಹಾ ಬೇವ್‌ಕೂಫ್.'

'ಬೇವ್‌ಕೂಫ್ ನಂ 1.'

ಇವೆಲ್ಲ ಏನೂ ಅಂತೀರಾ? ಹೋಟೆಲ್ ಹೆಸರು ಇವು ಇರುವುದು ಜಾರ್ಖಂಡ್‌ನ ಗಿರಿದ್ ಪಟ್ಟ ಇಂತಹ ಹೆಸರಿನ ಹಿಂದೆ ಚರಿತ್ರೆಯೇ ಇದೆ.

1971ನೇ ವರ್ಷ.

ಗೋಪಿರಾಂ ಕಡು ಬಡವ.

ಜೀವನ ನಡೆಸಲು ಸಣ್ಣ ಹೋಟೆಲ್ ತೆರೆದ. ಆದರೆ ಬರ್ಕಾತ್ ಆಗಲಿಲ್ಲ, ಆರ್ಥಿಕ ಮುಗ್ಗಟ್ಟು ಬಿಗಡಾಯಿ ಹೋಟೆಲ್ ಹೇಗಾದರೂ ನಡೆಸಬೇಕಿತ್ತು, ಗಿರಾಕಿ ಆಕರ್ಷಿಸಲು ಬಿಲ್ಲಿನ ಮೇಲೇ ರಿಯಾಯಿತಿ ನೀಡಿದ

ತಿಂದ ತಿಂಡಿಗೆ ಹೀಗೆ ದರದಲ್ಲಿ ರಿಯಾ ತೋರುತ್ತಾನೆ ಎಂದರೆ ಇವನೊಬ್ಬ ಮೂರ್ಖ ಇರ ಅಂದು ಕೊಂಡರು ಜನ. ಎಲ್ಲರೂ ಬೇವ್‌ಕೂಫ್ ಎನ್ ಪ್ರಾರಂಭಿಸಿದರಾದರೂ ಬೇವ್‌ಕೂಫ್ ಹತ್ತಿರವೇ ಬರುತ್ತಿದ್ದರು! ಬರುತ್ತಾ ಬರುತ್ತಾ ಅದು ಬೇವ್ ಹೋಟೆಲ್ ಎಂದೇ ಎಲ್ಲರೂ ಗುರ್ತಿಸುವಂತಾ ಹೋಟೆಲಿನ ಜಾಗ ಬದಲಾವಣೆ ಗೋಪಿ ಅನಿವಾರ್ಯವಾಯಿತು. ಸ್ಥಳಾಂತರಗೊಂಡ ಹೋ 'ಬೇವ್‌ಕೂಫ್' ಹೋಟೆಲ್ ಎಂದೇ ಹೆಸರಿಟ್ಟರು!

ಗೋಪಿರಾಂ ತನ್ನ ಸಹೋದರ ಸಂಬ ಜೊತೆಯಲ್ಲಿ ಬೇವ್‌ಕೂಫ್ ಹೋಟೆಲ್ ನಡೆ ವ್ಯವಹಾರದಲ್ಲಿ ಇಬ್ಬರಿಗೂ ಸರಿಬರಲಿಲ್ಲ, 19 ಸಹೋದರ ಸಂಬಂಧಿ ಬೇರೆಯಾದ. 'ಶ್ರೀ ಬೇವ್ ಹೋಟೆಲ್ ತೆರೆದ.

ಈ ಹೆಸರಿನ ಬದಲು ದೇವರ ಹೆ ಇಡಬಹುದಾಗಿತ್ತಲ್ಲವೇ ಎನ್ನುವ ಅನುಮಾನ ಬರ ಸಹಜ. ಅದಕ್ಕೂ ಒಂದು ಹಿನ್ನೆಲೆ ಇದೆ.

ಸುನಿಲ್ ಅಗರ್‌ವಾಲ್ ಹೋಟೆಲ್ ಮಾಲೀಕ ಹೆಸರು ವೈಷ್ಣವಿ. ಅದರ ತಿಂಡಿಗಳ ಗುಣಮಟ್ಟ ಚೆನ್ನಾ ಇತ್ತಂತೆ. ಆದರೂ ಗಿರಾಕಿಗಳು ಬರುತ್ತಿರಲಿಲ್ಲವಂತೆ ಒಂದು ಹೋಟೆಲ್ ತೆರೆದ. ಅದಕ್ಕೆ 'ಬೇವ್‌ಕೂಫ್ ಬಾ ಎನ್ನುವ ಹೆಸರಿಟ್ಟ. ಗಿರಾಕಿಗಳು ಮುಗಿಬಿದ್ದರಂತೆ!

ಇದು ಬೇವ್‌ಕೂಫ್ ಮಹಿಮೆಯಂತೆ!

ಹೆಸರಿನಲ್ಲಿ ಏನಿದೆ ಎನ್ನುವ ಪ್ರಶ್ನೆಗೆ ಬೇವ್ ಕುಟುಂಬದವರು ಹೆಸರಿನಲ್ಲೇ ಎಲ್ಲಾ ಇದೆ ಎ ದೇನೋ?

ದಲಿತರಿಗೆ ಧಕ್ಕದ ಪ್ರತ್ಯೇಕ ಮತದಾನ ಪದ್ಧತಿ

'ಪ್ರತ್ಯೇಕ ಮತದಾನ ಪದ್ಧತಿ' ಬಹುಶಃ ಅಂಬೇಡ್ಕರ್‌ರವರ ಹೋರಾಟದ ಬಹುಮುಖ್ಯ ಅಂಶ. ಹಿಂದೂಗಳಿಂದ ದಲಿತರ ಮೇಲೆ ಆಗುತ್ತಿದ್ದ ದೌರ್ಜನ್ಯಕ್ಕೆ, ದಬ್ಬಾಳಿಕೆಗೆ ಪರಿಹಾರವಾಗಿ ಅಂಬೇಡ್ಕರರಿಗೆ ಕಂಡಿದ್ದೇ ಪ್ರತ್ಯೇಕ ಮತದಾನ ಎಂಬ ಪದ್ಧತಿ. ಬಹುತೇಕ ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಡುವ ಹಾಗೆ ಅಂಬೇಡ್ಕರರಿಗೆ ಅವರ ಆ ಪ್ರಮುಖ ಬೇಡಿಕೆಯಾದ 'ಪ್ರತ್ಯೇಕ ಮತದಾನ'ವೇನಾದರೂ ಸಿಕ್ಕಿದ್ದರೆ ಅವರು ಈ ದೇಶದ ಪ್ರಥಮ ಪ್ರಧಾನಿಯಾಗಿರುತ್ತಿದ್ದರು!


ಇರಲಿ, ಪ್ರತ್ಯೇಕ ಮತದಾನ ಹಾಗೆಂದರೇನು? ಎಂದು ಮೊದಲಿಗೆ ತಿಳಿದುಕೊಳ್ಳುವುದು ಅತ್ಯಗತ್ಯ.

'ಪ್ರತ್ಯೇಕ ಮತದಾನ' ಎಂದರೆ ಕೆಲವೊಂದು ನಿರ್ದಿಷ್ಟ ವರ್ಗಗಳಿಗೆ ಒಂದಷ್ಟು ಸ್ಥಾನಗಳನ್ನು ಮೀಸಲಿಡುವುದು, ಹಾಗೆ ಮೀಸಲಿಟ್ಟ ಸ್ಥಾನಗಳಲ್ಲಿ ಯಾವ ಜಾತಿಯವರು ಸ್ಪರ್ಧಿಸಬೇಕೆಂದು ಸೂಚಿಸಲಾಗುತ್ತದೆಯೋ ಅದೇ ಜಾತಿಯವರು ಸ್ಪರ್ಧಿಸಬೇಕು. ಹಾಗೆಯೇ ಅಲ್ಲಿ ಓಟು ಮಾಡುವವರೂ ಕೂಡ ಅದೇ ಜಾತಿಯವರು, ಅವರನ್ನು ಹೊರತುಪಡಿಸಿ ಬೇರೆ ಯಾವುದೇ ಜಾತಿಯವರು ಅಲ್ಲಿ ಓಟು ಮಾಡುವ ಹಾಗಿಲ್ಲ, ಉದಾಹರಣೆಗೆ ಪರಿಶಿಷ್ಟರಿಗೆ ಒಂದಷ್ಟು ಸ್ಥಾನಗಳನ್ನು ಮೀಸಲಿಟ್ಟಿತೆಂದರೆ ಅಲ್ಲಿ ಸ್ಪರ್ಧಿಸುವವರು ಪರಿಶಿಷ್ಟ ಜಾತಿಗೆ ಸೇರಿರಬೇಕು, ಹಾಗೆ ಅಲ್ಲಿ ಓಟು ಮಾಡುವವರೂ ಕೂಡ ಪರಿಶಿಷ್ಟರೆ ಆಗಿರಬೇಕು.

ಇಂತಹ ಪದ್ಧತಿ ಹಿಂದೆ ಜಾರಿಯಲ್ಲಿತ್ತು, ಸ್ವತಂತ್ರ ಪೂರ್ವದಲ್ಲಿ ಮುಸ್ಲಿಮರು, ಕ್ರೈಸ್ತರು ಮತ್ತು ಆಂಗ್ಲೋ ಇಂಡಿಯನ್ನರಿಗೆ ಅಂತಹ ಪ್ರತ್ಯೇಕ ಮತಕ್ಷೇತ್ರ ಮತ್ತು ಮತದಾನದ ಪದ್ಧತಿ ಇತ್ತು, ಆಶ್ಚರ್ಯವೆಂದರೆ ಇಂತಹ ಒಂದು ಪದ್ಧತಿ ಇದ್ದಿದ್ದರಿಂದಲೇ ಮತ್ತು ಅಂತಹ ಪದ್ಧತಿಯಿಂದ ಮುಸ್ಲಿಮರು ಬಹು ಸಂಖ್ಯೆಯಲ್ಲಿ ಆಯ್ಕೆಯಾಗುತ್ತಿದ್ದರಿಂದಲೇ ಈ ದೇಶದಲ್ಲಿ ಪಾಕಿಸ್ತಾನವೆಂಬ ಹೊಸ ದೇಶ ಸೃಷ್ಟಿಯಾದದ್ದೆಂಬುದು ವಿಚಿತ್ರವೆನಿಸಿದರೂ ಸತ್ಯ.

ಅಂತಹ ಚುನಾವಣಾ ಪದ್ಧತಿ ಈಗಲೂ ಸೀಮಿತ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿದೆ. ಉದಾಹರಣೆಗೆ ಎ.ಪಿ.ಎಂ.ಸಿ ಚುನಾವಣೆಗಳಲ್ಲಿ ಸ್ಪರ್ಧಿಸುವವರು ರೈತನೋ, ವ್ಯಾಪಾರಿಯೋ ಆಗಿರಬೇಕು. ಹಾಗೆಯೇ ಅಲ್ಲಿ ಮತದಾನ ಮಾಡುವವರೂ ಕೂಡ ರೈತರು ಮತ್ತು ವ್ಯಾಪಾರಸ್ಥರೆ.

ಅಂಬೇಡ್ಕರ್ ಅವರು ಅಂದು ಯಾವ ರೀತಿ ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಆಂಗ್ಲೋ ಇಂಡಿಯನ್ನರಿಗೆ 'ಪ್ರತ್ಯೇಕ ಮತದಾನ' ಪದ್ಧತಿ ಕೊಡಲಾಗಿತ್ತೋ ಅಂತಹದೇ ಪದ್ಧತಿಯನ್ನು ದಲಿತರಿಗೂ ಕೊಡಿ ಎಂದದ್ದು ಅವರ ಬುದ್ಧಿವಂತಿಕೆಯ, ದೂರದೃಷ್ಟಿಯ, ರಾಜಕೀಯ ಚಾತುರ್ಯದ ಬೇಡಿಕೆಯಾಗಿತ್ತು.




ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.

1930ರ ಮೊದಲನೆಯ ದುಂಡು ಮೇಜಿನ ಸಭೆಯಲ್ಲಿ ಅಂಬೇಡ್ಕರರು ಬ್ರಿಟೀಷರೆದುರು ಸಮರ್ಥವಾಗಿ ವಾದ ಮಂಡಿಸಿ ದಲಿತರು ಹಿಂದೂಗಳಲ್ಲವಾದ್ದರಿಂದ ತಮಗೂ ಬೇರೆ ಅಲ್ಪಸಂಖ್ಯಾತರಂತೆ ಪ್ರತ್ಯೇಕ ಮತದಾನ ಪದ್ಧತಿ ಬೇಕೆಂದು ಒತ್ತಾಯಿಸಿದ್ದರು. ಆ ನಿಟ್ಟಿನಲ್ಲಿ ಬ್ರಿಟಿಷರನ್ನು ಒಪ್ಪಿಸಿದ್ದು ನಿಜಕ್ಕೂ ದಲಿತರಿಗೆ ಸಿಕ್ಕಿದ್ದ ಚಾರಿತ್ರಿಕ ವಿಜಯವಾಗಿತ್ತು, ಆಗ ದಲಿತರಿಗೆ ಪ್ರತ್ಯೇಕ ಮತದಾನ ಪದ್ಧತಿ ಜಾರಿಗೆ ಬಂದಿದ್ದರೆ ಮತ್ತು ಅಂತಹ ಮತದಾನ ಪದ್ಧತಿ ಮುಂದುವರಿದಿದ್ದರೆ ಅಂಬೇಡ್ಕರರು ಚುನಾವಣೆಯಲ್ಲಿ ಖಂಡಿತ ಸೋಲುತ್ತಿರಲಿಲ್ಲ, ಸೋಲುವುದಿರಲಿ, ನಿರ್ದಿಷ್ಟ ಸಂಖ್ಯೆಯ ಸ್ಥಾನಗಳನ್ನು ನಿಯಮಿತವಾಗಿ ಗೆದ್ದು ಅವರು ನಿರಂತರವಾಗಿ ಈ ದೇಶದ ಯಾವುದೇ ಸದನದ ಸದಸ್ಯರಾಗಬಹುದಿತ್ತು,

ದುಂಡುಮೇಜಿನ ಸಭೆಗಳಲ್ಲಿ ಅಂಬೇಡ್ಕರರ ಆ ರಾಜಕೀಯ ತಂತ್ರಗಾರಿಕೆಯ ಬಗ್ಗೆ 'ಮಹಾತ್ಮ ಗಾಂಧಿ'ಯವರಿಗೆ ತಿಳಿದಿತ್ತು, ಆದರೆ ದಲಿತರಿಗೆ ಪ್ರ ಮತದಾನ ಸಿಕ್ಕಿತೆಂದರೆ ಅವರು ಹಿಂದೂಗಳ ಹಿಡಿತಕ್ಕೆ ಸಿಕ್ಕುವುದಿಲ್ಲ, ಮಾ ಹಿಂದೂಗಳು ದಲಿತರ ಬೆಂಬಲಕ್ಕಾಗಿ, ಅಧಿಕಾರ ಹಂಚಿಕೆಗಾಗಿ ಬೇಡಬೇಕಾಗುತ್ತದೆ ಎಂಬುದೂ ಗಾಂಧಿಗೆ ಗೊತ್ತಿತ್ತು, ಯಾಕೆಂದರೆ ಪ್ರ ಮತದಾನ ಇದ್ದರೆ ದಲಿತರು ಸ್ವತಂತ್ರವಾಗಿ ಯಾರ ಮುಲಾಜಿಗೂ ಒಳ ತಮಗೆ ಇಷ್ಟಬಂದತಹ ಅಭ್ಯರ್ಥಿಗಳ ಆಯ್ಕೆಮಾಡಿಕೊಳ್ಳಬಹುದಿತ್ತು, ಅಷ್ಟೇ ಅಲ್ಲ, ತ ಓಟು ಕೊಡಿ ಎಂದು ದಲಿತರು ಇತರೆ ಜಾತಿಗಳ ಬೇಡುವ ಅಗತ್ಯವೂ ಇರುತ್ತಿರಲಿಲ್ಲ.

ಆದರೆ ಈಗೇನಾಗಿದೆ? ದಲಿತರಿಗೆ ಸ್ಥಾನಗಳೇ ಮೀಸಲು ಇವೆ. ಆದರೆ ಅಲ್ಲಿ ಓಟು ಮಾಡುವ ಯಾರು? ಎಲ್ಲಾ ಜಾತಿಗಳ, ಎಲ್ಲಾ ವರ್ಗಗಳ ಜ ದಲಿತರು ಬಹುಸಂಖ್ಯೆಯಲ್ಲಿ ಇದ್ದಾರೆಂದು ಆ ಕ್ಷೇತ್ರ ಅವರಿಗೆ ಮೀಸಲಿಡಬಹುದು. ಆದರೆ ಹಾಗೆ ಸ್ಪರ್ಧಿ ದಲಿತ ಅಭ್ಯರ್ಥಿಗಳು ಗೆಲ್ಲಲಿಕ್ಕೆ ತಮ್ಮ ಜಾತಿಯ ಜ ಮಾತ್ರ ನಂಬಿಕೊಳ್ಳಲಿಕ್ಕಾಗುತ್ತದೆಯೇ? ದಲಿತರು ಎಲ್ಲಾ ಜಾತಿಯ ಜನ ವರ್ಗಗಳವರನ್ನು ಕಾಡಿ ಬೇಡಬೇಕಾಗುತ್ತದೆ. ಆದರಲ್ಲೂ ಆ ದಲಿತ ಅಭ್ಯ ಓಟಿಗಾಗಿ ಮೇಲ್ಜಾತಿ ಹಿಂದೂಗಳ ಕೈಕಾಲು ಹಿಡಿಯ ಬೇಕಾಗಿದೆ. ಕೈಕಾಲು ಹಿಡಿದಾಗ ಆ ಜನರು - ವಿಶೇಷವಾಗಿ ಹಿಂದೂಗಳು - ಗೆಲ್ಲಿಸು ಯಾರನ್ನು? ತಮ್ಮ ಮಾತು ಕೇಳುವವರನ್ನು, ತಮ್ಮ ಗುಲಾಮಗಿರಿ ಮಾ ಚಮಚಾ ದಲಿತ ಅಭ್ಯರ್ಥಿಗಳನ್ನು ತಾನೆ?

ಬಹುಜನ ಸಮಾಜ ಪಕ್ಷದ (ಬಿ.ಎಸ್.ಪಿ) ಸಂಸ್ಥಾಪಕರಾದ ಕಾನ್ಷಿರಾಂರವರು ಇಂತಹ ಚುನಾವಣಾ ಪದ್ಧತಿಯನ್ನು ನೋಡಿಯೇ 'ಚ ಯುಗ' ಎಂಬ ಪುಸ್ತಕ ಬರೆದಿರುವುದು. ಆ ಕೃತಿಯಲ್ಲಿ ಕಾನ್ಷಿರಾಂರವರು ಮೇಲ್ಜಾತಿಗಳ ಮುಲಾಜಿಗೆ ಒಳಪಟ್ಟು ಗೆಲ್ಲುವ ದಲಿತ ಅಭ್ಯರ್ಥಿ



ಹೌಸ್‌ಫುಲ್ ಹೇಮಂತ ಮತ್ತೆ ಬಂದ

ಹೇಮಂತ್ ಹೆಗಡೆ ಎಂಬ ತರ್ಲೆ ಮತ್ತೆ ತರ್ಲೆ ಮಾಡುವ ಮೂಲಕ ಸುದ್ದಿಗೆ ಬಂದಿದ್ದಾನೆ!


ಎರಡೂವರೆ ವರ್ಷಗಳ ಹಿಂದೆ 'ಹೌಸ್‌ಫುಲ್' ಎಂಬ ತೋಪು ಸಿನಿಮಾವನ್ನು ಮಾಡಿದ್ದ ಈತ ಉಡುಪಿ ಬಳಿಯ ಒತ್ತಿನೆಣೆ ಕಡಲ ತೀರದಲ್ಲಿ ಚಾರ್ಲಿ ಚಾಪ್ಲಿನ್ ಪ್ರತಿಮೆ ಸ್ಥಾಪಿಸುತ್ತೇನೆ ಎಂದು ಸುಳ್ಳು ಹೇಳಿಕೆ ಕೊಡಿದ್ದ, ಜೊತೆಗೆ, ಆ ಪ್ರತಿಮೆಯ ವಿರುದ್ಧ ಹಿಂದೂತ್ವವಾದಿಗಳು ಪ್ರತಿಭಟಿಸುವಂತೆಯೂ ಮಾಡಿ ಪುಕ್ಕಟೆ ಪ್ರಚಾರ ಪಡೆದಿದ್ದ.


ಈ ಬಾರಿಯೂ ಅಂಥದ್ದೇ ಒಂದು ಚಿಲ್ಲರೆ ಕೆಲಸ ಮಾಡಿದ್ದಾನೆ. ಕಳೆದ ಶುಕ್ರವಾರದಂದು ಪತ್ರಿಕೆಗಳಿಗೆ ತನ್ನ ಹೊಸ ಚಿತ್ರ 'ನಿಂಬೆಹುಳಿ'ಯ ಜಾಹೀರಾತು ನೀಡಿ ಅದರಲ್ಲಿ ನಿರ್ಮಾಪಕರ ಸಂಘದವರು ನಟಿ ಮಣಿಯರನ್ನು ಮಚ್ಚು ದೊಣ್ಣೆ ಹಿಡಿದು ಅಟ್ಟಿಸಿಕೊಂಡು ಹೋಗುತ್ತಿರುವ ಹಾಗೆ ಕಾರ್ಟೂನ್ ಪ್ರಕಟಿಸಿದ್ದ. ಜೊತೆಗೆ ಕನ್ನಡ ಚಿತ್ರರಂಗದ ಬಗ್ಗೆ ಹೇಸಿಗೆ ಹುಟ್ಟುವಂತಹ ಇತರೆ ಹಾಸ್ಯ ಚಿತ್ರಗಳೂ ಆ ಜಾಹೀರಾತಿನಲ್ಲಿದ್ದವು. ಅಷ್ಟೇ ಅಲ್ಲದೆ, ಈ ಹೇಮಂತ್ ಎಂತಹ ಅಸಹ್ಯ ಮನುಷ್ಯನೆಂದರೆ ಆದೇ ಜಾಹೀರಾತಿನಲ್ಲಿ ಚಿತ್ರದ ಟ್ಯಾಗ್‌ಲೈನ್‌ನಲ್ಲಿ **'Life fcuk's everyone.. everywhere...'** ಎಂದು ಸೇರಿಸಿದ್ದಾನೆ. ಈತ ನಿರ್ದೇಶಿಸಿ, ನಟಿಸಲಿರುವ ಈ ಚಿತ್ರ ಯಾವ ಕೆಟ್ಟದ್ದಾಗಿರುತ್ತದೆ ಎಂದು ಇದನ್ನು ನೋಡಿ ಊಹಿಸಬಹುದು.

ಇಂತಹ ಜಾಹಿರಾತನ್ನು ಪ್ರಕಟಿಸುವ ಮೂಲಕ ಮತ್ತೆ ವಿವಾದವನ್ನು ಹುಟ್ಟುಹಾಕಿ ಪುಕ್ಕಟೆ ಪ್ರಚಾರ ಪಡೆಯುವುದೇ ಹೇಮಂತನ ಪ್ಲಾನ್ ಎಂಬುದು ಗ್ಯಾರೆಂಟಿ. ಯಾಕೆಂದರೆ, ಶುಕ್ರವಾರವಷ್ಟೇ ಈ ಚಿತ್ರದ ಜಾಹೀರಾತು ಪ್ರಕಟವಾಗಿದ್ದರೂ ಅದೇ ದಿನ 'ನಿಂಬೆಹುಳಿ ವಿವಾದ' ಎಂಬ ಸುದ್ದಿ ಟೈಮ್ಸ್ ಆಫ್ ಇಂಡಿಯಲ್ಲಿ ಪ್ರಕಟವಾಗಿತ್ತು.

ಈ ಹೇಮಂತ್‌ಗೆ ಮೊದಲಿನಿಂದಲೂ ಪ್ರಚಾರದ ಹುಚ್ಚು. ಈತ ಮಾಡಿರುವುದು ಮೂರೇ ಚಿತ್ರಗಳಾದರೂ ತಾನು ಹತ್ತಾರು ಚಿತ್ರಗಳನ್ನು ನಿರ್ದೇಶಿಸಿರುವವನಂತೆ ಆಡುತ್ತಾನೆ. ಈತ ಹೇಳಿಕೊಳ್ಳುವಂತ ನಿರ್ದೇಶಕ ಅಲ್ಲವೇ ಅಲ್ಲ. ಈವರೆಗೆ ಈತ ನಿರ್ದೇಶಿಸಿರುವುದು 'ಊಲಾಲಾ', 'ಧಡ್‌ಧಡ್' ಮತ್ತು 'ಹೌಸ್ ಫುಲ್' ಎಂಬ ಕಳಪೆ ಚಿತ್ರಗಳನ್ನು ಮಾತ್ರ. ಕಿರುತೆರೆಯಲ್ಲಿ 'ನಮ್ಮ ಪ್ರೀತಿಯ ರಾಜಿ' ಎಂಬ ಸೀರಿಯಲ್ ಮಾಡಿದ್ದ, ಆದರೆ ಟಿಆರ್‌ಪಿ ಇಲ್ಲದೇ ಆ ಧಾರಾವಾಹಿ ಉಸಿರುಬಿಟ್ಟಿತ್ತು. ಇಂತಹ ತೋಪು ನಿರ್ದೇಶಕ ಹೇಮಂತ್ "ನಾನು ಹಿಂದಿ ಚಿತ್ರ ಮಾಡ್ತೀನಿ" ಎಂದೆಲ್ಲ ಹೇಳಿಕೊಂಡು ತಿರುಗುತ್ತಿರುತ್ತಾನೆ. ಇತ್ತೀಚೆಗೆ "ಖ್ಯಾತ ಹಿಂದಿ ನಿರ್ದೇಶಕ ಸುಭಾಷ್ ಘಾಯ್ ಅವರನ್ನು ಕನ್ನಡಕ್ಕೆ ತರುತ್ತೀನಿ" ಎನ್ನುತ್ತಿದ್ದಾನೆ.

ಒಟ್ಟಾರೆ ಹೇಮಂತ ಗ್ಯಾಸ್ ಬಿಡೋದರಲ್ಲಿ ಎಕ್ಸ್‌ಪರ್ಟ್! ❖





ವಿಷ್ಣು ಗುಹೆಯಿಂದ ಅಂಬಿ ದೂರ

ವಿಷ್ಣುವರ್ಧನ್ ಅವರ ನಿರ್ಗಮನದ ನಂತರ ಅಂಬರೀಷ್ ಸಾಹಸಸಿಂಹನ ಫ್ಯಾಮಿಲಿಯಿಂದ ದೂರವಾಗಿದ್ದಾರಾ? – ಇಂಥ ಪ್ರಶ್ನೆ ಉದ್ಭವಿಸಲು ಕಾರಣಗಳಿವೆ.

ವಿಷ್ಣು ನಿಧನ ಹೊಂದಿದ ನಂತರ ವಿಷ್ಣು ಕುಟುಂಬದವರು ಎರಡು ಬಾರಿ ವಿಷ್ಣು ಹುಟ್ಟುಹಬ್ಬವನ್ನು ಆಚರಿಸಿದ್ದಾರೆ. ಆದರೆ ಆ ಎರಡು ಬಾರಿಯೂ ಅಂಬರೀಷ್ ಗೈರು ಹಾಜರಾಗಿದ್ದರು.

ಮೊನ್ನೆ ಮೊನ್ನೆಯಷ್ಟೇ ವಿಷ್ಣು ಹುಟ್ಟಿದ ಹಬ್ಬದ ದಿನದಂದು ನಡೆದ ಎಸ್.ಪಿ.ಬಾಲಸುಬ್ರಹ್ಮಣ್ಯಂ ರಸಮಂಜರಿ ಕಾರ್ಯಕ್ರಮಕ್ಕೂ ಅಂಬರೀಷ್ ಬರಲೇ ಇಲ್ಲ. ಮಾತ್ರವಲ್ಲ, ವಿಷ್ಣು ಕುಟುಂಬದವರು ನಡೆಸಿದ ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿಯ ಫೈನಲ್ಸ್ ಪಂದ್ಯವನ್ನು ಹ್ಯಾಟ್ರಿಕ್ ಹಿರೋ ಶಿವರಾಜ್‌ಕುಮಾರ್ ಅವರು ಉದ್ಘಾಟಿಸಿದರು.

ವಿಷ್ಣು ಕುಟುಂಬ ಯೋಜಿಸಿದ್ದ ಈ ಕಾರ್ಯಕ್ರಮಗಳಿಂದ ಅಂಬಿ ಬೇಕಂತಲೇ ತಪ್ಪಿಸಿಕೊಂಡಿದ್ದಾರ? ಇದು ಅಂಬಿಯ ಮುನಿಸಾ? ಅಥವಾ ವಿಷ್ಣು ಕುಟುಂಬವೇ ಅಂಬಿಯನ್ನು ಆಹ್ವಾನಿಸುತ್ತಿಲ್ಲವಾ?

ಇತ್ತೀಚೆಗೆ ಸಣ್ಣಪುಟ್ಟ ಕೆಸೆಟ್ ರಿಲೀಜ್ ಸಮಾರಂಭಗಳಿಗೆ, ಮುಹೂರ್ತಗಳಿಗೆ ನಿಯತ್ತಾಗಿ ಹಾಜರಾಗುವ ಅಂಬಿಗೆ ತನ್ನ ಆತ್ಮೀಯ ಗೆಳೆಯನ ತಿಥಿ, ಹುಟ್ಟುಹಬ್ಬಕ್ಕೂ ಬರುವಷ್ಟು ಪುರುಸೊತ್ತಿಲ್ಲವೆ?


ಇದೆಲ್ಲದಕ್ಕೂ ಪೂರಕವಾಗಿ "ವಿಷ್ಣುವರ್ಧನ್ ನಿಧನ ಹೊಂದಿದ ನಂತರ ವಿಷ್ಣು ಕುಟುಂಬ ಮತ್ತು ಅಂಬರೀಷ್ ಕುಟುಂಬದ ನಡುವೆ ಅಂತಹ ಬಾಂಧವ್ಯ, ಹಳೇ ನಂಟು ಉಳಿದಿಲ್ಲ" ಎಂಬ ಮಾತು ಚಿತ್ರರಂಗದಿಂದ ಕೇಳಿಬರುತ್ತಿದೆ. ಅದು ನಿಜವೋ ಸುಳ್ಳೋ ಎಂಬುದು ಗೊತ್ತಾಗಬೇಕೆಂದರೆ ಅಂಬಿ ಅಥವಾ ವಿಷ್ಣು ಕುಟುಂಬದ ಯಾರಾದರೊಬ್ಬರು ಬಾಯಿಬಿಡಬೇಕಿದೆ ಅಷ್ಟೇ... ❖

ಅಡ್ಡಾದಿಡ್ಡಿ ಸಿನಿಮಾ

'ಜೋಗಯ್ಯ' ತೋಪೆದ್ದ ಮೇಲೆ ಅದರ ನಿರ್ದೇಶಕ ಪ್ರೇಮ್ ಈಗ 'ಅಡ್ಡ'ದಲ್ಲಿ ಬಿದ್ದಿರೋದು ನಿಮಗೆಲ್ಲಾ ಗೊತ್ತಿರಬೇಕು. ಈಗ ಆ ಚಿತ್ರದಲ್ಲಿ ಇನ್ನೂ ಮೂವತ್ತು ಜನ ನಿರ್ದೇಶಕರು ನಟಿಸಲಿದ್ದಾರೆ ಎಂಬ ಸುದ್ದಿ ಬಂದಿದೆ.

ಎರಡು ವರ್ಷಗಳ ಹಿಂದೆ ತಮಿಳಿನಲ್ಲಿ ಯಶಸ್ವಿಯಾಗಿದ್ದ 'ಸುಬ್ರಹ್ಮಣ್ಯಪುರಂ' ಎಂಬ ಚಿತ್ರದ ರಿಮೇಕ್ ಈ 'ಅಡ್ಡ'. ಪ್ರೇಮ್ ನಾಯಕನಟನಾಗಿ ಕಾಣಿಸಿಕೊಳ್ಳುತ್ತಿರುವ ಈ ಚಿತ್ರವನ್ನು ಮಹೇಶ್‌ಬಾಬು ನಿರ್ದೇಶಿಸುತ್ತಿದ್ದಾರೆ. ವಿಶೇಷವೆಂದರೆ, ಈ ಚಿತ್ರದಲ್ಲಿ ನಟಿಸಲು ಇಪ್ಪತ್ತೆಂಟು ನಿರ್ದೇಶಕರು ಈಗಾಗಲೇ ಒಪ್ಪಿಕೊಂಡಿದ್ದಾರಂತೆ.

ಒಬ್ಬ ನಿರ್ದೇಶಕ ಒಳ್ಳೆ ಸಿನಿಮಾ ಮಾಡಿದರೆ ಜನ ಅದನ್ನು ನೋಡಲು ಬರುತ್ತಾರೆಯೇ ಹೊರತು ನಿರ್ದೇಶಕರು ನಟಿಸಿರುವ ಸಿನಿಮಾ ನೋಡಲು ಜನ ಬರುವುದಿಲ್ಲ ಎಂಬುದು ಈ ಜನರಿಗೆ ಗೊತ್ತಿಲ್ಲ ಅನ್ನಿಸುತ್ತದೆ. ಈ ಹಿಂದೆ ಇದೇ ಪ್ರೇಮ್‌ನನ್ನು ಹೀರೋ ಮಾಡಿ 'ಪ್ರೀತಿ ಏಕೆ ಭೂಮಿ ಮೇಲಿದೆ' ಎಂಬ ಚಿತ್ರ ನಿರ್ದೇಶಿಸಿದ್ದ ಅಶ್ವಿನಿ ರಾಮ್ ಪ್ರಸಾದ್ ಕೈಸುಟ್ಟುಕೊಂಡಿದ್ದರು. ಈ ಹಿನ್ನೆಲೆಯಲ್ಲಿ 'ಅಡ್ಡ' ಸಿನಿಮಾವನ್ನು ನಿರ್ಮಿಸುತ್ತಿರುವ ಮೂ.ಕ.ಮುರಳಿ ಕೃಷ್ಣ ಅವರ ಬಗ್ಗೆ ಯಾರಿಗೇ ಆಗಲಿ "ಛೇ, ಪಾಪ" ಅನ್ನಿಸದೇ ಇರದು. ❖





ಮೇಲ್ಜಾತಿಗಳ, ಅವರ ಪಕ್ಷಗಳ ಗುಲಾಮರಾಗುತ್ತಾರೆ, ಚಮಚಾಗಳಾಗುತ್ತಾರೆ ಎಂಬುದನ್ನು ಸಾದ್ಯಂತವಾಗಿ ವಿವರಿಸಿದ್ದಾರೆ.

ಕಾನ್ಷಿರಾಂರವರು 'ಚಮಚಾ' ಎಂಬ ಪದ ಬಳಸಿದ್ದು ಯಾಕೆ? ಏಕೆಂದರೆ 'ಚಮಚಾ' ತಾನೇ ಸ್ವತಃ ತಿಂಡಿ ತಿನ್ನಿಸುವ ಸಾಮರ್ಥ್ಯ ಇಲ್ಲ. ಅದನ್ನು ಹಿಡಿದುಕೊಳ್ಳಲು ಅದಕ್ಕೆ ಯಾವುದಾದರೊಂದು ಕೈನ ಸಹಾಯ ಬೇಕೇ ಬೇಕು. ಈ ರೀತಿಯಲ್ಲಿ ಕಾನ್ಷಿರಾಂರವರು ಹೇಳುವ ಹಾಗೆ ಮೀಸಲು ಕ್ಷೇತ್ರಗಳಿಂದ ಗೆಲ್ಲುವ ದಲಿತ ಅಭ್ಯರ್ಥಿಗಳು ಚಮಚಾಗಳು. ಅವರೆಲ್ಲರನ್ನೂ ಹಿಡಿದುಕೊಳ್ಳುವ ಕೈಗಳು ಮೇಲ್ಜಾತಿ ಪಕ್ಷಗಳು, ಅವರ ಹೈಕಮಾಂಡುಗಳು, ಮತ್ತವರ ಓಟುಗಳು! ಅಕಸ್ಮಾತ್ 'ಚಮಚಾ' ತನ್ನ ಸಮುದಾಯಕ್ಕೆ ತಿಂಡಿ ತಿನ್ನಿಸಬೇಕೆಂಬ ಉತ್ಸಾಹ ತೋರಿದರೂ ಅದನ್ನು ಹಿಡಿದಿರುವ 'ಕೈ' ಬಿಡಬೇಕಲ್ಲ!

ಹಾಲಿ ಇರುವ ಮೀಸಲು ಕ್ಷೇತ್ರ ಪದ್ಧತಿ ಅಥವಾ ಅಂಬೇಡ್ಕರರು ಹೇಳುವ ಹಾಗೆ ಜಂಟಿ ಚುನಾವಣಾ ಪದ್ಧತಿ – ದಲಿತರಿಗೆ ಒದಗಿರುವ ದಯನೀಯ ಸ್ಥಿತಿ ಇದು.

ಇಂತಹ ದಯನೀಯ ಪರಿಸ್ಥಿತಿ ತನ್ನ ಜನರಿಗೆ ಬರುತ್ತದೆ, ತಾನು ಅವರನ್ನು ಅಂತಹ ಸಂಕಟದಿಂದ ತಪ್ಪಿಸಬೇಕು ಎಂಬ ಅರಿವು ಅಂಬೇಡ್ಕರರಿಗೆ ಅಗಲೇ (ಅಂದರೆ 80 ವರ್ಷಗಳ ಹಿಂದೆಯೇ) ಇತ್ತು, ಅದಕ್ಕೇ ಅವರು ದುಂಡು ಮೇಜಿನ ಪರಿಷತ್‌ನಲ್ಲಿ ಬ್ರಿಟೀಷರೊಡನೆ ವಾದ ಮಾಡಿ ಅದನ್ನು ಪಡೆಯುವ ನಿಟ್ಟಿನಲ್ಲಿ ಯಶಸ್ಸುಗಳಿದ್ದು, ಆದರೆ ಅವರಿಗೆ ಅಡ್ಡಗಾಲಾಗಿದ್ದು ಸಾಕ್ಷಾತ್ 'ಮಹಾತ್ಮ'ರೆಂದು ಕರೆಯಿಸಿಕೊಳ್ಳುವ ಗಾಂಧೀಜಿಯವರು! ಅಷ್ಟೇ ಅಲ್ಲ, "ನೀವೇನಾದರೂ (ಅಂಬೇಡ್ಕರ್) ನನ್ನ ಮಾತನ್ನು ಕೇಳಲಿಲ್ಲವೆಂದರೆ ನಾನು ಉಪವಾಸ ಬಿದ್ದು ಸಾಯುತ್ತೇನೆ" ಎಂದು 'ಬ್ಲಾಕ್‌ಮೇಲ್' ಮಾಡಿದರು. ಆಗ ಗಾಂಧೀಜಿಯವರ ಪ್ರಾಣ ಉಳಿಸುವ ಒತ್ತಡಕ್ಕೆ ಬಿದ್ದ ಅಂಬೇಡ್ಕರರು ಕುಖ್ಯಾತ ಪೂನಾ ಒಪ್ಪಂದಕ್ಕೆ ಗಾಂಧೀಜಿಯವರ ಜೊತೆ ಸಹಿ ಹಾಕಿ ತನ್ನ ಮತ್ತು ತನ್ನ ಜನರ ಭವ್ಯ ಕನಸುಗಳನ್ನು ಗಾಂಧೀಜಿ ಮತ್ತವರ ಜನರಿಗೆ (ಅಂದರೆ ಹಿಂದೂಗಳಿಗೆ) ಧಾರೆಯೆರೆದುಕೊಟ್ಟರು!





ಒಂದರ್ಥದಲ್ಲಿ ಪೂನಾ ಒಪ್ಪಂದದ ಸಂದರ್ಭದಲ್ಲಿ 78 ಪ್ರತ್ಯೇಕ ಮತ ಕ್ಷೇತ್ರಗಳಿಗೆ ಬದಲಾಗಿ 151 ಜಂಟಿ ಮೀಸಲು ಕ್ಷೇತ್ರಗಳನ್ನು ಪಡೆದ ಅಂಬೇಡ್ಕರರು ಗಾಂಧೀಜಿಯವರ ಪ್ರಾಣ ಉಳಿಸಲು ತಾವಾಗಿಯೇ ತಮ್ಮ ಜನರನ್ನು 'ಚಮಚಾ ಯುಗ'ವೆಂಬ ಹೀನ ರಾಜಕೀಯ ಗುಲಾಮಗಿರಿಗೆ ತಳ್ಳಬೇಕಾಯಿತು! ಇದರಿಂದ ಅಂಬೇಡ್ಕರ್ ಅವರು ಅದೆಷ್ಟು ಆಕ್ರೋಶಗೊಂಡರೆಂದರೆ ಗಾಂಧೀಜಿಯವರ ಇಂತಹ ವಂಚನೆಯ ಪ್ರತಿಯೊಂದು ಹೆಜ್ಜೆ ಹೆಜ್ಜೆಯನ್ನು **"What Congress and Gandhi have done to untouchables?"** ಎಂಬ ಬೃಹತ್ ಕೃತಿಯಲ್ಲಿ ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಹಾಗಂತ ಅವರು ಪೂನಾ ಒಪ್ಪಂದದ ನಂತರ ತಮ್ಮ ಬೇಡಿಕೆಯಾದ 'ಪ್ರತ್ಯೇಕ ಮತದಾನ'ವನ್ನು ಬಿಟ್ಟುಕೊಟ್ಟರೆಂದರ್ಥವಲ್ಲ. ಬ್ರಿಟಿಷರು ಈ ದೇಶವನ್ನು ಬಿಟ್ಟು ತೆರಳುತಿದ್ದಾಗ ಕ್ರಿಪ್ಸ್ ಆಯೋಗದಂತಹ ಸಾಂವಿಧಾನಿಕ ಆಯೋಗಗಳು ಭಾರತಕ್ಕೆ ಬಂದಾಗ ಅಂಬೇಡ್ಕರರು ಪ್ರತ್ಯೇಕ ಮತದಾನದ ತಮ್ಮ ಬೇಡಿಕೆಯನ್ನು ಮತ್ತೆ ಮತ್ತೆ ಪ್ರಬಲವಾಗಿ ಪ್ರತಿಪಾದಿಸಿದರು. ಸ್ವತಂತ್ರ ಭಾರತದಲ್ಲಾದರೂ ತಮಗೆ ಆ ಪದ್ಧತಿ ಸಿಗಬೇಕೆಂದು ಅವರು ಬ್ರಿಟಿಷರನ್ನು ಬಲವಾಗಿ ಒತ್ತಾಯಿಸಿದರು. ಒಮ್ಮೆ ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಅಟ್ಲಿಯವರನ್ನೇ ಅವರು ಭೇಟಿ ಮಾಡಿ ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ನೀಡುವ ಬಗ್ಗೆ ಒತ್ತಾಯಿಸಿದರು. ಒಂದರ್ಥದಲ್ಲಿ ಅವರ ಈ ಒತ್ತಡದ ಫಲವಾಗಿ ಅಂಬೇಡ್ಕರರಿಗೆ ಸಂವಿಧಾನ ಕರಡು ಸಮಿತಿಯ ಚೇರ್‌ಮನ್ ಪದವಿಯೂ ಹಾಗೂ ನೆಹರೂ ಮಂತ್ರಿಮಂಡಲದಲ್ಲಿ ಮಂತ್ರಿಗಿರಿಯೂ ಸಿಕ್ಕಿತು. ಪ್ರತ್ಯೇಕ ಮತದಾನದ ಬದಲಾಗಿ ತನ್ನ ಜನರಿಗೋಸ್ಕರ ಗಳಿಸಿದ್ದ ಶಿಕ್ಷಣ, ರಾಜಕೀಯ ಮತ್ತು ಸರ್ಕಾರಿ ನೌಕರಿಯಲ್ಲಿನ ಮೀಸಲಾತಿಯನ್ನೇನೋ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಅವರು ಉಳಿಸಿಕೊಂಡರು.

ಇವತ್ತು ನಮ್ಮ ಸಂಸತ್ತಿನಲ್ಲಿ 150ಕ್ಕೂ ಹೆಚ್ಚು ದಲಿತ ಸಂಸದರಿದ್ದರೂ ಅವರಿಗೆ ದಲಿತರ ಪರವಾಗಿ ಒಂದು ಮಸೂದೆಯನ್ನು ಮಂಡಿಸಲು ತಮ್ಮ ಮೇಲ್ಜಾತಿ ಹೈಕಮಾಂಡ್ ಅನ್ನು ಬೇಡಬೇಕಾಗುತ್ತದೆ. ಅವರು ಕುಳಿತುಕೋ ಎಂದರೆ ಕುಳುತುಕೊಳ್ಳಬೇಕು, ನಿಂತಿಕೋ ಎಂದರೆ ನಿಂತುಕೊಳ್ಳಬೇಕು. ದೂಸ್ರಾ ಮಾತನಾಡಿದರೆ, ತನ್ನ ಜನರ ಪರವಾಗಿ ಗಟ್ಟಿಯಾಗಿ ದನಿ ಎತ್ತಿದರೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ಇರುವುದಿಲ್ಲ! ಅಕಸ್ಮಾತ್ ಟಿಕೆಟ್ ಸಿಕ್ಕಿದರೂ ಮೇಲ್ಜಾತಿಗಳ ಓಟಂತೂ ಖಂಡಿತ ದಕ್ಕುವುದಿಲ್ಲ.

ಮತ್ತೊಂದು ಆತಂಕದ ವಿಷಯ ಯಾವುದೆಂದರೆ 'ಪರಿಶಿಷ್ಟರ ಮೀಸಲಾತಿ'. ಅದು ಅಸ್ಪೃಶ್ಯರಿಗೋಸ್ಕರ ಮಾಡಿದ್ದು ತಾನೆ? ಆದರೆ ಆ ಪಟ್ಟಿಯಲ್ಲಿ ಅಸ್ಪೃಶ್ಯ ಜಾತಿಗಳನ್ನು ತುರುಕಿ ಆ ಜಾತಿಗಳ ಅಭ್ಯರ್ಥಿಗಳ ಮೂಲಕ ಅಸ್ಪೃಶ್ಯರ ಸ್ಥಾನಗಳನ್ನು ಕಬಳಿಸಲಾಗುತ್ತಿದೆ. ಇತ್ತೀಚಿನ ಕರ್ನಾಟಕ ವಿಧಾನಸಭೆ ಚುನಾವಣೆಯೇ ಇದಕ್ಕೆ ಸಾಕ್ಷಿ. ಪರಿಶಿಷ್ಟ ಜಾತಿಗೆ ಮೀಸಲಿಟ್ಟಿದ್ದ ಆ 33 ಕ್ಷೇತ್ರಗಳಲ್ಲಿ ಹೊಲೆಮಾದಿಗ, ಜಾಡಮಾಲಿ ಇತ್ಯಾದಿ ಅಸ್ಪೃಶ್ಯ ಜಾತಿಗಳು ಗೆದ್ದಿರುವುದು ಕೇವಲ 10–15 ಸ್ಥಾನಗಳನ್ನಷ್ಟೆ. ಇನ್ನುಳಿದ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದಿರುವುದು ಪರಿಶಿಷ್ಟರ ಪಟ್ಟಿಯಲ್ಲಿನ ಅಸ್ಪೃಶ್ಯ ಜಾತಿಗಳವರು. ಒಂದೆರಡು ಸ್ಥಾನಗಳನ್ನು ನಕಲಿ ಪರಿಶಿಷ್ಟ ಜಾತಿ ಸರ್ಟಿಫಿಕೇಟ್ ಪಡೆದಿರುವ ಮೇಲ್ಜಾತಿ ಹಿಂದೂಗಳು ಕೂಡ ಗೆದ್ದಿದ್ದಾರೆ!

ಅಕಸ್ಮಾತ್ ಆ 151 ಮೀಸಲು ಕ್ಷೇತ್ರಗಳ (ಲೋಕಸಭೆ) ಬದಲು ದಲಿತರಿಗೆ ಪ್ರತ್ಯೇಕ 78 ಮತಕ್ಷೇತ್ರ ಸ್ಥಾನಗಳು ದೊರೆತಿದ್ದಿದ್ದರೆ? ದಲಿತ ಮುಖಂಡರು ತಮ್ಮ ಸ್ವಂತ ರಾಜಕೀಯ ಪಕ್ಷಗಳ ಮೂಲಕ ಕನಿಷ್ಟವೆಂದರೂ 70 ಸ್ಥಾನಗಳನ್ನಾದರೂ ಗೆಲ್ಲುತ್ತಿದ್ದರು. ಸಮ್ಮಿಶ್ರ ಸರ್ಕಾರದ ಈ ಯುಗದಲ್ಲಿ ರಾಜಕೀಯ ಪಕ್ಷಗಳ ಜೊತೆ ಚೌಕಾಸಿಗಿಳಿದು ತಮಗೆ ಇಷ್ಟ ಬಂದ ಖಾತೆಯನ್ನು ಪಡೆಯುತ್ತಿದ್ದರು, ಇಷ್ಟ ಬಂದ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದರು. ಆದರೀಗ ಒಂದು ವಿಪಿಗೆ ಅಂಬೇಡ್ಕರ್ ಹೆಸರಿಡಿ ಎಂದು ಒತ್ತಾಯಿಸಿ ಯಶಸ್ಸು ಪಡೆಯಲು 30 ವರ್ಷ ಬೇಕಾಗುತ್ತದೆ.

ಒಟ್ಟಾರೆ ದಲಿತರ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದ್ದರೂ ಕೇಳಲಾಗದ ಅಸಹಾಯಕ ಸ್ಥಿತಿಗೆ ದಲಿತರ ಪ್ರತಿನಿಧಿಗಳನ್ನು ತಳ್ಳಲಾಗಿದೆ. ಪ್ರತ್ಯೇಕ ಮತದಾನದ ವಂಚನೆಯಿಂದ ದಲಿತರು ಪಡುತ್ತಿರುವ, ಇನ್ನೂ ಮುಂದಿನ ದಿನಗಳಲ್ಲಿ ಪಡಬೇಕಾಗಿರುವ ಪಾಡು ಇದು. ದಲಿತ ಸಮುದಾಯಕ್ಕೆ ಇದು ಅರ್ಥವಾಗುತ್ತದೆಯೆ?

– ಪುರುಷೋತ್ತಮ ಹೊ.ಬ., ಬೆಂಗಳೂರು

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 19-10-2011



ಗಲಭೆ ಹಾಡಿನಲ್ಲಿ ಕ್ರೇಜಿ ಕ್ವೀನ್

ಕವಿತಾ ಲಂಕೇಶ್ ನಿರ್ದೇಶಿಸುತ್ತಿರುವ 'ಕ್ರೇಜಿ ಲೋಕ' ಚಿತ್ರದಲ್ಲಿ ರಮ್ಯಾ ನಟಿಸುತ್ತಿದ್ದಾರೆ. ರವಿಚಂದ್ರನ್ ಹೀರೋ ಆಗಿರುವ ಸಿನಿಮಾದಲ್ಲಿ ಇದೇ ಮೊದಲ ಬಾರಿಗೆ ರಮ್ಯಾ ಕಾಣಿಸಿಕೊಳ್ಳುತ್ತಿರುವುದು. ಇದೇನು ಡೈಸಿ ಜಾಗಕ್ಕೆ ರಮ್ಯಾ ಬಂದಳಾ ಎಂದು ಆಶ್ಚರ್ಯಗೊಳ್ಳಬೇಡಿ.

'ಕ್ರೇಜಿ ಲೋಕ' ಚಿತ್ರದಲ್ಲಿ ರಮ್ಯಾಳಿಗೆಂದೇ ಬರೆದಿರುವ 'ಗಲಭೆ, ಗಲಭೆ' ಎಂಬ ಹಾಡಿಗೆ ಕುಣಿಯಲಿದ್ದಾಳೆ. ಆದರೆ ರವಿಚಂದ್ರನ್ ಜೊತೆ ಅಲ್ಲ, ಬದಲಾಗಿ ಹೊಸ ಯುವ ನಟ ಸೂರ್ಯನ ಜೊತೆ.

ಇತ್ತೀಚೆಗಷ್ಟೇ 'ಜಾನಿ ಮೇರಾ ನಾಮ್' ಚಿತ್ರದಲ್ಲಿ ರಮ್ಯಾ 'ಡೋಂಟ್ ಯು ನೋ ಡೋಂಟ್ ಯು ನೋ ಐ ಆಮ್ ವೆರಿ ಸೆಕ್ಸಿ' ಎಂದು ಭಾರಿ ಸೆಕ್ಸಿಯಾಗಿ ಡ್ಯಾನ್ಸ್ ಮಾಡಿದ್ದಳು. ಆನಂತರ ರಾಧಿಕಾ ನಿರ್ಮಿಸುತ್ತಿರುವ 'ಲಕ್ಕಿ' ಚಿತ್ರದಲ್ಲೂ 'ನಾನು ಏನ್ ಮಾಡ್ಲಿ ಸ್ವಾಮಿ, ನಾನು ಹುಡುಗಿ, ನಾಯಿ ಪ್ರೇಮಿ....' ಎಂಬ ಐಟಂ ಸಾಂಗ್‌ನಲ್ಲಿ ಕುಣಿದು ಕುಪ್ಪಳಿಸಿದ್ದಳು.

ಈ ಹಿಂದೆ ಕವಿತಾ ನಿರ್ದೇಶಿಸಿದ್ದ 'ತನನಂತನನಂ' ಚಿತ್ರದಲ್ಲಿ ತನ್ನ ನಟನಾ ಸಾಮರ್ಥ್ಯವನ್ನು ತೋರಿ ಅದಕ್ಕೆಂದು ಫಿಲಂಫೇರ್ ಪ್ರಶಸ್ತಿ ಪಡೆದಿದ್ದ ರಮ್ಯಾ ಈ ಹಾಡಿನ ಮೂಲಕ ಪಡ್ಡೆ ಹುಡುಗರಲ್ಲಿ 'ಗಲಭೆ'ಗಳನ್ನು ಸೃಷ್ಟಿಸಿದರೆ ಅಚ್ಚರಿ ಇಲ್ಲ...



ಅಂದ್ರಿತಾ-ದಿಗಂತ್ ಡಿಪ್ಪರೆಡಿಪ್ಪಾಂಗ್!

"ದಿಗಂತ್ ನನಗೆ ಕ್ಲೋಸ್ ಫ್ರೆಂಡ್ ಅಷ್ಟೆ. ನಮ್ಮ ನಡುವೆ ಏನೋ ನಡೀತಿದೆ, ನನಗೂ ಇದು ವರೆಗೆ ಅದು ಏನೆಂದೇ ಅರಿವಾಗುತ್ತಿಲ್ಲ..." ಎಂದು ಸ್ವತಃ ಅಂದ್ರಿತಾ ರೇ ಕೆಲ ತಿಂಗಳುಗಳ ಹಿಂದೆ ಪತ್ರಕರ್ತರ ಮುಂದೆಯೇ ಹೇಳಿಕೊಂಡಿದ್ದಳು. ಅಷ್ಟೇ ಅಲ್ಲ, "ಆತ ಈಗಲೇ ನನ್ನ ಬಾಯ್‌ಫ್ರೆಂಡ್ ಆಗಿದ್ದಾನೆ ಎಂದು ನಾನು ಹೇಳಲಾರೆ. ನಾವು ಕೆಲವು ಪ್ರೀಮಿಯರ್ ಶೋಗಳಲ್ಲಿ, ಪಾರ್ಟಿಗಳಲ್ಲಿ ಒಟ್ಟೊಟ್ಟಿಗೆ ಕಾಣಿಸಿಕೊಂಡ ಕೂಡಲೇ ನಾವು ಲವರ್ಸ್ ಎಂದೇನಲ್ಲ. ನಾವೇನಾದರೂ ಲವ್ ಮಾಡೋದಿದ್ದರೆ ನಿಮಗೆಲ್ಲಾ ಹೇಳುತ್ತೇವೆ" ಎಂದಿದ್ದಳು.

'ಮನಸಾರೆ' ಚಿತ್ರದಲ್ಲಿ ಒಟ್ಟೊಟ್ಟಿಗೇ ನಟಿಸಿದ್ದ ದಿಗಂತ್-ಅಂದ್ರಿತಾಳ ವರಸೆಗಳನ್ನು ನೋಡಿದರೆ ಇವರಿಬ್ಬರ ನಡುವೆ ಡಿಪ್ಪರೆಡಿಪ್ಪಾಂಗ್ ನಡೆಯುತ್ತಿರಬಹುದು ಎನಿಸುತ್ತದೆ.

ಕಳೆದ ವರ್ಷ ದಾವಣಗೆರೆಯಲ್ಲಿ ನಡೆದ 'ರಾಜ ಕಪ್' ಕ್ರಿಕೆಟ್ ಟೂರ್ನಮೆಂಟ್ ಸಂದರ್ಭದಲ್ಲಿ ಇವರಿಬ್ಬರು ಒಬ್ಬರನ್ನೊಬ್ಬರು ಬಿಡದಂತೆ ಅಂಟಿಕೊಂಡು ತಿರುಗಾಡಿದ್ದರು. ಈ ಹಿಂದೆ ದಿಗಂತ್ ಇದೇ ತರಹ 'ಈ ಪ್ರೀತಿ' ಎಂಬ ಚಿತ್ರದ ಚಿತ್ರೀಕರಣದ ಸಮಯದಲ್ಲಿ ಅಮೆರಿಕಾದಲ್ಲಿ ತೇಜಸ್ವಿನಿ ಮತ್ತು ನೀನಾ ಎಂಬ ನಟಿಯರ ಜೊತೆ ಹೀಗೇ ಆಟವಾಡಿ ಬಂದಿದ್ದ. ಹೀಗಾಗಿ ಯಾರೂ ಅಂದ್ರಿತಾ ಮತ್ತು ದಿಗಂತ್ ವರ್ತನೆಯನ್ನು ಸೀರಿಯಸ್ಸಾಗಿ ಪರಿಗಣಿಸಲಿಲ್ಲ.

'ಪರಮಾತ್ಮ'ನಿಗೆ ಕೈಕೊಟ್ಟಳು

ದಿಗಂತನೊಂದಿಗೆ ಸ್ನೇಹ ಬೆಳೆದಿರುವುದರಿಂದಲೋ ಏನೋ ಈಗ ಅಂದ್ರಿತಾ ಕೂಡ ದಿಗಂತನಂತೆ ಅಶಿಸ್ತಿನ ಮೂಟೆಯಾಗಿದ್ದಾಳೆ. ಯಾವುದೋ ಸಿನಿಮಾಕ್ಕೆ ಕಾಲ್‌ಶೀಟ್ ಕೊಟ್ಟು ಇನ್ಯಾವುದೋ ಸಿನಿಮಾದ ಶೂಟಿಂಗ್‌ಗೆ ಅಟೆಂಡ್ ಆಗುವುದು, ಔಟ್ ಡೋರ್ ಶೂಟಿಂಗ್‌ಗೆ ಹೋದಾಗ 'ಸ್ನಾನಕ್ಕೆ ಶ್ಯಾಂಪೂ ಕೊಡಲಿಲ್ಲ, ತಲೆ ಒರೆಸಿಕೊಳ್ಳಲು ಟವೆಲ್ ಇರಲಿಲ್ಲ' ಎಂದೆಲ್ಲಾ ಕಿರಿಕ್ಕು ಮಾಡುವುದನ್ನು ಅಂದ್ರಿತಾ ಕಲಿತಿದ್ದಾಳೆ.

ಸದ್ಯ ರಾಕ್‌ಲೈನ್ ವೆಂಕಟೇಶ್ ನಿರ್ಮಿಸುತ್ತಿರುವ, ಹೊಸ ನಿರ್ದೇಶಕ ರಾಘವೇಂದ್ರ ನಾಯಕ್ ನಿರ್ದೇಶಿಸುತ್ತಿರುವ ಚಿತ್ರವೊಂದನ್ನು ಬಿಟ್ಟರೆ ಸದ್ಯಕ್ಕೆ ಅಂದ್ರಿತಾ ಕೈಯಲ್ಲಿ ಬೇರೆ ಯಾವ ಚಿತ್ರವೂ ಇಲ್ಲ. ಈ ವಾರ ಬಿಡುಗಡೆ ಆಗುತ್ತಿರುವ, ಯೋಗರಾಜ ಭಟ್ಟ ನಿರ್ದೇಶಿಸಿರುವ 'ಪರಮಾತ್ಮ' ಚಿತ್ರವೊಂದೇ ಆಕೆಯ ಮುಂದಿರುವುದು. ತನ್ನ ವೃತ್ತಿ ಜೀವನ ಇಂತಹ ಪರಿಸ್ಥಿತಿಯಲ್ಲಿದ್ದರೂ ಅಂದ್ರಿತಾ 'ಪರಮಾತ್ಮ'ನಿಗೂ ಕೈಕೊಟ್ಟಿದ್ದಾಳೆ!



ಅಂದ್ರಿತಾ 'ಪರಮಾತ್ಮ' ಚಿತ್ರದ ಪ್ರೋಮೋಗಳಿಗೆ ಹಾಜರಾಗಿಲ್ಲ, ಪುನೀತ್ ನಟಿಸುವ ಚಿತ್ರಗಳಲ್ಲಿ ಚಾನ್ಸು ಪಡೆಯುವುದೇ ಅದೃಷ್ಟ ಎಂದು ಬೇರೆ ನಟಿಯರು ಭಾವಿಸಿರುವಾಗ ಅಂದ್ರಿತಾ "ನಾನು ಬಾಂಬೆಯಲ್ಲಿದ್ದೀನಿ" ಎಂಬ ನೆಪವೊಡ್ಡಿ ಚಿತ್ರದ ಆಡಿಯೋ ರಿಲೀಸ್ ಕಾರ್ಯಕ್ರಮಕ್ಕೂ ಚಕ್ಕರ್ ಹೊಡೆದಳು.

ದಿಗಂತನೊಟ್ಟಿಗೆ ಬಂದಳು...

ಭಟ್ಟರ ಬಳಿ "ಬಾಂಬೆಯಲ್ಲಿ ಶೂಟಿಂಗ್ ಇದೆ" ಎಂದು ಬೂಸಿ ಬಿಟ್ಟಿದ್ದ ಅಂದ್ರಿತಾ ಕಾಣಿಸಿಕೊಂಡಿದ್ದು ಹುಬ್ಬಳ್ಳಿಯಲ್ಲಿ, ಅದೂ ದಿಗಂತನ ಜೊತೆ!

ಮೊನ್ನೆ ದಿಗಂತ್ ನಟಿಸಿರುವ 'ಲೈಫು ಇಷ್ಟೇನೆ' ಚಿತ್ರದ ಪ್ರಚಾರಕ್ಕಾಗಿ ಇಡೀ ತಂಡ ಹುಬ್ಬಳ್ಳಿಗೆ ಹೋಗಿತ್ತು, ಅಲ್ಲಿಗೆ ದಿಗಂತ್ ಕೂಡಾ ಬರಬೇಕಿತ್ತು, ಆತನಿಗಾಗಿ ಚಿತ್ರತಂಡದವರು ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಕಾದಿದ್ದರು. ಕೊನೆಗೂ ದಿಗಂತ್ ಏರ್‌ಪೋರ್ಟ್‌ನಲ್ಲಿ ಪ್ರತ್ಯಕ್ಷನಾಗಿದ್ದು ಅಂದ್ರಿತಾಳೊಂದಿಗೆ!!

ಇತ್ತೀಚೆಗೆ ದಿಗಂತ್ "ನಾನು ಬಾಲಿವುಡ್‌ನಲ್ಲಿ, ಹಿಂದಿ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಮಣಿಶಂಕರ್ ನಿರ್ದೇಶನದ ಹೊಸ ಚಿತ್ರದಲ್ಲಿ ನಾನೇ ಹೀರೋ" ಎಂದೆಲ್ಲ ಭಜನೆ ಶುರು ಮಾಡಿದ್ದಾನೆ. ಇದಕ್ಕೆ ಸರಿಯಾಗಿ ಅಂದ್ರಿತಾ ಕೂಡಾ "ನಾನು ಬಾಂಬೆಯಲ್ಲಿ ಚಿತ್ರೀಕರಣದಲ್ಲಿದ್ದೇನೆ" ಎಂದು ಆಗಾಗ ಹೇ[ಳಿ] ಹೋಗುತ್ತಿರುತ್ತಾಳೆ. ಆದರೆ ಇಬ್ಬರೂ ಅಲ್ಲಿ ಯಾವ ಸಿನಿಮಾದಲ್ಲಿ ನಟಿಸುತ್ತಿದ್ದಾರೆ ಎಂಬುದು ಯಾರಿಗೂ ಗೊತ್ತಿಲ್ಲ!

ಅಶಿಸ್ತು ಮತ್ತು ಅರಾಜಕತೆಯ ಮೂಟೆಗಳಾದ ದಿಗಂತ್ ಮತ್ತು ಅಂದ್ರಿತಾ ಒಂದಾಗಿರುವುದರಿಂದ ಇನ್ನು ಮುಂದೆ ಇವರಿಬ್ಬರಿಂದಾಗಿ ಇನ್ನೂ ಎಂತೆಂಥ ಸುದ್ದಿಗಳ[ು] ಹೊರಬೀಳುತ್ತವೋ, 'ಪರಮಾತ್ಮ'ನಿಗೇ ಗೊತ್ತು!!

• ಅರುಣ





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore